ಫೆಬ್ರವರಿ 2, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1970
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

**5 ಕೋಟಿ ಮೌಲ್ಯದ ಸೈಟಿನ ಒಡೆಯನನ್ನು ಫ್ರೆಂಡ್‌ಶಿಪ್ ಹೆಸರಿನಲ್ಲಿ**

## ಕೊಲೆಗೈದ ರಿಯಲ್ ಎಸ್ಟೇಟ್ ಉದ್ಯಮಿಗಳು!







## ನೆರೆಮನೆಯುವರ ಬ್ಲಾಕ್‌ಮೇಲ್‌ಗೆ ಯುವತಿ ಬಲಿ?

## ದಂಪತಿಗಳನ್ನು ಹತ್ಯಗೈದ ಹಂತಕನಿಗೆ ಜೀವಾವಧಿ





## ಬೈಕ್ ವಿಚಾರಕ್ಕೆ ನಡೆಯಿತು ಒಂದು ಕೊಲೆ!



## ಮಾಂಸ ದಂಧೆಗೆ ಥೈಲ್ಯಾಂಡ್ ಲಿಂಕ್!

# ಸಾಧು ಶೆಟ್ಟಿ ನಂಬಿ ಸತ್ತವನ ಹೆಸರು ಸುರೇಶ್ ರೈ

ಮಂಗಳೂರು
✍ ಮೋಹನ್ ಬೋಳಂಗಡಿ

ದುಬೈನ ಐಷಾರಾಮಿ ಬಂಗಲೆಯ ಸೋಫಾದಲ್ಲಿ ಮೈ ಮತ್ತು ಮನಸ್ಸು ಮಡಚಿ ಕುಳಿತಿದ್ದರು ಮುತ್ತಪ್ಪ ರೈ. ಅದ್ಯಾವುದೋ ಟೆಲಿಫೋನ್ ಕರೆಗೆ ಕಾಯುವಂತಿತ್ತು ಮನಸ್ಥಿತಿ. ಪತ್ನಿ ರೇಖಾ ಪಕ್ಕದಲ್ಲಿ ಕುಳಿತು ಟಿವಿ ನೋಡುತ್ತಿದ್ದರು. ಆಕೆಯ ಕಣ್ಣಲ್ಲಿ ಮಾತ್ರ ಆತಂಕವಿತ್ತು. ಎದುರಿನ ಸೋಫಾದಲ್ಲಿ ಮಂಗಳೂರಿನ ಯುವ ನ್ಯಾಯವಾದಿ ರವೀಂದ್ರನಾಥ ರೈಯವರಿದ್ದರು.

ರೈ ಕಣ್ಣು ಗೋಡೆಯ ಮೇಲಿದ್ದ ಗಡಿಯಾರದ ಮೇಲಿತ್ತು. ಭಾರತೀಯ ಕಾಲಮಾನದ ಪ್ರಕಾರ ಮಧ್ಯಾಹ್ನ 3 ಗಂಟೆಯಾಗಲಿಕ್ಕೆ ಇನ್ನೂ 15 ನಿಮಿಷ ಬಾಕಿ ಇದೆ. ಕೈಯಲ್ಲಿದ್ದ ಬೆಂಗಳೂರಿನ ಅದ್ಯಾವುದೋ ಭೂ ವ್ಯವಹಾರದ ಫೈಲನ್ನು ಮುಚ್ಚಿಟ್ಟು ಒಂದು ರಾತ್ ಮನ್ಸ್ ಸಿಗರೇಟ್ ಹಚ್ಚಿಕೊಂಡರು. ಬರಲಿರುವ ಯಾವುದೋ ಫೋನಿಗೆ ಅಸಹನೆಯಿಂದ ಕಾಯುವಂತಿತ್ತು ಮನಸ್ಥಿತಿ. ಒಳಕೋಣೆಯಲ್ಲಿದ್ದ ಪತ್ನಿ ರೇಖಾ ಮಾತ್ರ ಒಮ್ಮೆ ಗಂಡನನ್ನು, ಇನ್ನೊಮ್ಮೆ ಬರಬಹುದಾದ ಟೆಲಿಫೋನ್ ಕರೆಯನ್ನು ಗಾಬರಿಯಿಂದ ನೋಡುತ್ತಿದ್ದರು.

ಫೋನ್ ಸದ್ದಾಗುತ್ತಿದ್ದಂತೆಯೇ ಕೈಗೆತ್ತಿಕೊಂಡ ರೈ ಸುದ್ದಿ ಕೇಳಿ ವ್ಯಂಗ್ಯವಾಗಿ ನಕ್ಕರು. 'ನಿನ್ನ ಋಣ ಯಾವತ್ತೂ ಮರೆಯುವುದಿಲ್ಲ ಪ್ರವೀಣ' ಅಂದವರ ಕಣ್ಣಿನಲ್ಲಿ ಗೆಲುವೆಂಬುದು ಸಾವಿರ ವೋಲ್ಟೇಜ್ ದೀಪದಂತೆ ಬೆಳಗುತ್ತಿತ್ತು. ಫೋನ್ ಕೆಳಗಿಟ್ಟು ಇಳಿ ಮಧ್ಯಾಹ್ನದ ಹೊತ್ತಿಗೆ 'ಚಿಯರ್ಸ್' ಅಂದವರೇ ವಿಸ್ಕಿ ತುಟಿಗಿಟ್ಟುಕೊಂಡರು. ನ್ಯಾಯವಾದಿ ಪ್ರಶ್ನಿಸಿದ್ದಕ್ಕೆ ಸುಮ್ಮನೆ ನಕ್ಕರು. ಅದರಲ್ಲಿ ಸೇಡು ತೀರಿಸಿಕೊಂಡ ಸಂಭ್ರಮವಿತ್ತು. ಅಂದು ಇಡೀ ದಿನ ರೈಯದ್ದು ಕೇವಲ ಮೋಜು-ಮಸ್ತಿ. ಸುದ್ದಿ ತಿಳಿದ ಪತ್ನಿ ರೇಖಾ ಬಂಗಲೆಯ ಒಳಕೋಣೆಗೆ ಹೋಗಿ ಕಣ್ಣೀರು ಒರೆಸಿಕೊಂಡರು. ಇಷ್ಟಕ್ಕೆಲ್ಲ ಕಾರಣವಾದದ್ದು ಮಂಗಳೂರಿನಲ್ಲಿ ಆವತ್ತು ಹಾಡುಹಗಲೇ ನಡೆದ ಕೊಲೆ. ಸತ್ತವನ ಹೆಸರು ಸುರೇಶ್ ರೈ. ಪುತ್ತೂರಿನವನು. ಮುತ್ತಪ್ಪ ರೈನ 'ನೀಲಿ ಕಣ್ಣಿನ ಹುಡುಗ'ನಾಗಿ ಗುರುತಿಸಿಕೊಂಡ ಆತ ಅದೇ ತಂಡದಿಂದಲೇ ಕೊಲೆಯಾದದ್ದು ಮಾತ್ರ ದೌರ್ಭಾಗ್ಯದ ಕಥೆ.

ಪುತ್ತೂರಿನ ಮುಕ್ರಂಪಾಡಿಯವನಾದ ಸುರೇಶ್ ರೈ ಸ್ಫುರದ್ರೂಪಿ. ಪದವೀಧರನಾದ ಈತ ಪುತ್ತೂರಿನ ಜಯಂತ್ ರೈ ಈ ಮೂಲಕ ಮುತ್ತಪ್ಪ ರೈ ಸಂಪರ್ಕಕ್ಕೆ ಬಂದದ್ದು, ಅವರ ನೆರವಿನಿಂದಲೇ ಸರ್ವ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿ ಮೆರೆದದ್ದು, ರೈ ವಿದೇಶಕ್ಕೆ ಪಲಾಯನಗೈದ ನಂತರ ರಾಜಧಾನಿ ಬೆಂಗಲೂರಿನಲ್ಲಿ ರೈ ನೆರಳಾಗಿ ಕಾಣಿಸಿಕೊಂಡದ್ದು, ಕಳ್ಳ ವ್ಯವಹಾರ, ಭೂ ವ್ಯವಹಾರದ ಮೂಲಕವೇ ದೊಡ್ಡ ಮಟ್ಟದ ದುಡ್ಡು ಕಂಡದ್ದು, ದುಡ್ಡು ಬಂದ ನಂತರ ರೈಗೇ ಸವಾಲ್ ಎಸೆದು ಸಾವು ಕಂಡ ಕಥೆ ಇದು.

ಐಪಿಎಸ್ ಅಧಿಕಾರಿ ಕೆಂಪಯ್ಯ ಕಾಟದಿಂದ ಬೇಸತ್ತು ಹೋಗಿದ್ದ ಮುತ್ತಪ್ಪ ರೈ, ದುಬೈಗೆ ಪರಾರಿಯಾಗುವ ಕೊನೆಯ ದಿನಗಳಲ್ಲಿ ಬೆಂಗಳೂರಿನ ಭೂಗತ ಲೋಕದ ವ್ಯವಹಾರದ ಶಕ್ತಿಪೀಠದ ಮೇಲೆ ಸುರೇಶ್ ರೈಯನ್ನು ಪ್ರತಿಷ್ಠಾಪಿಸಿದರು. ಬರುವ ತಿಂಗಳ ಮಾಮೂಲು ಸುರೇಶ್ ಕೈ ತಲುಪುವ ವ್ಯವಸ್ಥೆ ಮಾಡಿದ್ದರು.


ಛೋಟಾ ರಾಜನ್

ಪುತ್ತೂರಿನಿಂದ ಮಂಗಳೂರಿಗೆ ಬಂದು ಸರ್ವ ಕಾಲೇಜು ಅಧ್ಯಕ್ಷನಾಗಿ ಮೆರೆದು ನಂತರ ಬೆಂಗಳೂರಿಗೆ ಹೋಗಿ ರೈ ಸಾಮ್ರಾಜ್ಯದ ಸೇನಾಧಿಕಾರಿಯಾಗಿ ಕಾಣಿಸಿಕೊಂಡು ಕೊಂಡವನು ಸುರೇಶ್. ರಾಜಕೀಯದಿಂದ ಹಿಡಿದು ಲಿಕ್ಕರ್ ಲಾಭಿಯ ತನಕ ಎಲ್ಲೆಲ್ಲಿ ದುಡ್ಡಿತ್ತೋ ಅಲ್ಲೆಲ್ಲ ಮುತ್ತಪ್ಪ ರೈ ಹೆಸರನ್ನು ಧಾರಾಳವಾಗಿ ಬಳಸಿಕೊಂಡ. ಹೋಟೆಲ್ ಏಟ್ರಿಯ ರೂಮ್‌ನಲ್ಲೇ ಒಂದು ಆಫೀಸು, ಅದರಲ್ಲೇ ಮೀಟಿಂಗು. ಕೊಡು-ಕೊಳ್ಳುವ ವ್ಯವಹಾರಗಳು, ಹಡಬೆ ದುಡ್ಡಿಗೂ ಲೆಕ್ಕಗಳು - ಹೀಗೆ ನೋಡು ನೋಡುತ್ತಿದ್ದಂತೆಯೇ ಸುರೇಶನ ಹೆಸರು ರಾಜಧಾನಿಯಲ್ಲಿ ಸುತ್ತಾಡತೊಡಗಿತ್ತು.

ಆವತ್ತಿಗಾಗಲೇ ಆತನದ್ದು ಬಿಸಿನೆತ್ತರಿನ ವಯಸ್ಸು. ಮೊದಲ ಬಾರಿಗೆ ದೊಡ್ಡ ಮಟ್ಟದ ದುಡ್ಡು ನೋಡಿದ್ದ. ಐಷಾರಾಮಿ ಕಾರಿನಲ್ಲೇ ಓಡಾಟ. ಬಾಟ ಬೂಟು, ರೇಮಂಡ್ ಸೂಟು, ಕನ್ನಡ-ತೆಲುಗು ಚಲನಚಿತ್ರ ನಟಿಯರ ತಳುಕು-ಬಳುಕಿನ ಲೋಕದಲ್ಲಿ ಅವನ ಜಗತ್ತೇ ಬೇರೆಯಾಗಿತ್ತು. ಬರೀ ಮೆರೆದಾಟ ಒಂದೇ ಅಲ್ಲ. ಭೂಗತ ಜಗತ್ತಿನಲ್ಲಿ ರೈಗಿದ್ದ ಶತ್ರುಗಳ ಕಡೆಗೂ ಸ್ನೇಹದ ಹಸ್ತ ಚಾಚಿ ವ್ಯವಹಾರವನ್ನು ಗಟ್ಟಿಪಡಿಸಿಕೊಂಡ. ರೈ ಸಹಚರರ ಮಾಹಿತಿಯನ್ನು ತಾನೇ ಬಹಿರಂಗಗೊಳಿಸುವ ಮೂಲಕ ಕೆಲ ಪೊಲೀಸ್ ಅಧಿಕಾರಿಗಳೂ ಹತ್ತಿರವಾದ.

ನಡೆದಷ್ಟು ದಿನ ಮುತ್ತಪ್ಪ ರೈ ಮತ್ತು ಸುರೇಶ್ ರೈ ವ್ಯವಹಾರ ಚೆನ್ನಾಗಿಯೇ ನಡೆಯಿತು. ಆದರೆ ಎಲ್ಲಾ ಕಳ್ಳ ದಂಧೆಗಳಿಗೂ ಇರುವ ಶಾಪ ಇವರಿಬ್ಬರ ಸ್ನೇಹಕ್ಕೂ ತಟ್ಟಿತ್ತು.

''ಸುರೇಶ್ ರೈ ತನ್ನ ಹೆಸರನ್ನು ಬಳಸಿ ಲಕ್ಷಾಂತರ ರೂ. ಸಂಪಾದಿಸುತ್ತಿದ್ದಾನೆ. ತನಗೆ ನೀಡುವ ಲೆಕ್ಕದಲ್ಲೂ ಮೋಸವಾಗುತ್ತಿದೆ'' ಎನ್ನುವ ಅನುಮಾನ ಮುತ್ತಪ್ಪ ರೈಗಿತ್ತು. ಇತ್ತ ಬೆಂಗಳೂರಿನಲ್ಲಿ ರೈ ನೆರವಿನಿಂದ ಪೊಲೀಸ್, ಪ್ರೆಸ್, ಪೊಲಿಟಿಷಿಯನ್‌ಗಳ ಸಂಪರ್ಕಕ್ಕೆ ಬಂದಿದ್ದ ಸುರೇಶ, ತಾನು ಮಾಡಿದ ವ್ಯವಹಾರದಲ್ಲಿ ಮುತ್ತಪ್ಪ ರೈಗೇಕೆ ಪಾಲು ಕೊಡಬೇಕು? ಅಂತ ಅಂದುಕೊಂಡಿರಬೇಕು. ವಿಷಯ ತಿಳಿದ ರೈ ವ್ಯವಹಾರದಿಂದ ಬೇರೆಯಾಗುತ್ತೇನೆ ಅಂದರು. ವ್ಯವಹಾರದ ಲೆಕ್ಕ ಕೇಳಿದರು. ಸುರೇಶ್ ಕೊಡಲಿಲ್ಲ. ದುಬೈಗೆ ಬಂದು ಹೋಗು ಅಂದರು. ಆತ ಕ್ಯಾರೆ ಅನ್ನಲಿಲ್ಲ. ಆಗ ಬಂತು ನೋಡಿ ತಕರಾರು.


ಸಾಧು ಶೆಟ್ಟಿ

''ಯಾರಯ್ಯ ಮುತ್ತಪ್ಪ ರೈ? ಅವನೇನು ಮಹಾ ಡಾನಾ? ನಾವೆಲ್ಲ ಇದ್ದೀವಿ ಅಂತ ಅವನ ಹೆಸರು ತಿರುಗ್ತಾ ಇದೆ. ದುಬೈನಲ್ಲಿ ಕುಳಿತೇ ಮಹಾರಾಜನ ತರಹ ಮೆರೆಯುತ್ತಿದ್ದಾನೆ. ಅವನೊಬ್ಬ ಲೋಕಲ್ ಡಾನ್ ಅಷ್ಟೇ. ಛೋಟಾ ರಾಜನ್ ನಂಬರ್ ಗೊತ್ತಾ ಕೇಳಿ ಅವನಿಗೆ. ಗೊತ್ತಿಲ್ಲದಿದ್ದರೆ ನನ್ನನ್ನು ಕೇಳಲು ಹೇಳಿ. ನಾನೀಗ ರಾಜನ್ ಟಚ್‌ನಲ್ಲಿದ್ದೇನೆ. ಆತನ ಬಾಲ ಹಿಡಿಯುವ ಯೋಗ್ಯತೆ ಕೂಡ ಇಲ್ಲ ನಿಮ್ಮ ರೈಗೆ. ಹಾಗಂತ ಅವನಿಗೆ ಹೇಳಿ. ಏನಾಗುತ್ತದೋ ಮಾಡಲಿ. ನನ್ನ ತಾಕತ್ತೇನು ಅಂತ ನಾನೂ ತೋರಿಸುತ್ತೇನೆ'' ಹಾಗಂತ ಪುತ್ತೂರಿನಲ್ಲಿ ಸಿಕ್ಕಸಿಕ್ಕ ಕಡೆ, ಅದು ಮುತ್ತಪ್ಪ ರೈ ಆತ್ಮೀಯರೆದುರೇ ನಿಂತು ಅಬ್ಬರಿಸುತ್ತಿದ್ದ. ಎಂ.ಆರ್.ನ ಅಗೋಚರ ಸಾಮ್ರಾಜ್ಯದ ತಾಕತ್ತಿನ ಎದುರು ತೊಡೆ ತಟ್ಟಿ ನಿಂತುಬಿಟ್ಟಿದ್ದ.

ಸುರೇಶನ ಮಾತುಗಳನ್ನು ಕೇಳಿಸಿಕೊಂಡಿದ್ದ ಮುತ್ತಪ್ಪ ರೈ ಅವಮಾನದಿಂದ ಖುದ್ದು ಹೋಗಿದ್ದರು. ಇದಕ್ಕೊಂದು ರಿವೆಂಜ್ ಹೇಳದಿದ್ದರೆ ಅಂಡರ್ ವರ್ಲ್ಡ್‌ನಲ್ಲಿ ತನಗೊಂದು ತೂಕ ಇರುವುದಿಲ್ಲ. 'ಸೇಡು ತೀರಿಸಿಕೊಳ್ಳದವನು ಅದ್ಯಾವ ಸೀಮೆ ಡಾನ್' ಅಂತ ನಮ್ಮವರೇ ಮಾತನಾಡಿಕೊಂಡುಬಿಟ್ಟರೆ? ಹಾಗಾಗಬಾರದು ಅಂದುಕೊಂಡರು. ಅದೊಂದು ದಿನ ಕಾಲ್ ಮಾಡಿದ್ದು ಕಾಸರಗೋಡಿನ ಬೇಕೂರು ಎಂಬ ಪುಟ್ಟ ಊರಿನಲ್ಲಿದ್ದ ಪ್ರವೀಣ್ ಚಂದ್ರಶೆಟ್ಟಿಗೆ.

ಮುತ್ತಪ್ಪ ರೈ ಗ್ಯಾಂಗಿನ ಬಲಶಾಲಿ ಫೈಟರ್‌ಗಳಲ್ಲಿ ಪ್ರವೀಣ್‌ನದ್ದು ದೊಡ್ಡ ಹೆಸರು. ಬಲಶಾಲಿ ಅನ್ನೋದಕ್ಕಿಂತಲೂ ಧೈರ್ಯಶಾಲಿ ಅಂದರೆ ಸೂಕ್ತವೇನೋ. ಒಬ್ಬನನ್ನು ಹೊಡೆಯಲೇಬೇಕು ಅಂತ ಡಿಸೈಡ್ ಮಾಡಿಬಿಟ್ಟರೆ ಮುಗೀತು. ತನ್ನ ಪ್ರಾಣ ಕೂಡ ಲೆಕ್ಕಿಸದೆ ನುಗ್ಗಿಬಿಡುತ್ತಿದ್ದ. ಅಂತವನನ್ನು ಕರೆದು ಸೇಡು ತೀರಿಸುವ ಕೆಲಸ ನೀಡಿದ್ದರು ರೈ.

''ಸುರೇಶ್ ರೈ ಬದುಕಿರಕೂಡದು'' ಹಾಗೊಂದು ಸ್ಪಷ್ಟ ಸಂದೇಶವನ್ನು ರವಾನಿಸಿದರು. ಪ್ರವೀಣನ ಆನಂದಕ್ಕೆ ಕೊನೆಯೇ ಇರಲಿಲ್ಲ. ಅದು ಸುರೇಶ್‌ನನ್ನು ಕೊಲ್ಲುತ್ತೇನೆಂದಲ್ಲ. ಮುತ್ತಪ್ಪ ರೈನಂತಹ ಸೂಪರ್ ಡಾನ್ ಉಳಿದೆಲ್ಲರನ್ನು ಬಿಟ್ಟು ತನ್ನನ್ನು ನಂಬಿ ಕೆಲಸ ವಹಿಸಿದರಲ್ಲ ಎಂಬ ಆನಂದ. ಆದರೂ ಸುರೇಶ ಕೂಡ ಪರಿಚಿತ. ತಮ್ಮದೇ ಗ್ಯಾಂಗ್‌ನವನು. 'ಇನ್ನೊಮ್ಮೆ ಆಲೋಚನೆ ಮಾಡಿ ಹೇಳಿ ಬಿಡಿ ಅಣ್ಣ' ಅಂದಿದ್ದ. 'ಇಲ್ಲ. ನಿರ್ಧರಿಸಿಯಾಗಿದೆ. ಒಟ್ಟಿನಲ್ಲಿ ಕೆಲಸ ಮುಗಿಯಬೇಕು ಅಷ್ಟೇ' ಅಂದು ಫೋನ್ ರಿಸೀವರ್ ಕೆಳಗಿಟ್ಟಿದ್ದರು ರೈ.

ದುಬೈನಿಂದ ಮರಣದಂಡನೆ ಶಿಕ್ಷೆ ಜಾರಿಯಾಗುತ್ತಿದ್ದಂತೆಯೇ ಮಂಗಳೂರಿನಲ್ಲಿ ಪ್ರವೀಣ್ ಮುಹೂರ್ತ ಇರಿಸಿಬಿಟ್ಟಿದ್ದ. ಸುರೇಶ್ ಸಾವು ಆವತ್ತೇ ನಿಶ್ಚಯವಾಗಿತ್ತು.

ತನ್ನ ಸುತ್ತ ಎಂಆರ್' ಜನ ಚಕ್ರವ್ಯೂಹ ರಚಿಸುತ್ತಿದ್ದಾರೆ ಅನ್ನುವುದನ್ನು ಅರಿಯದ ಸುರೇಶನ ಕಾರು ಪದೇಪದೆ ಬಂದು ನಿಲ್ಲುತ್ತಿದ್ದು ಉಡುಪಿ ಜಿಲ್ಲೆಯ ಪಣಿಯೂರಿನಲ್ಲಿದ್ದ ಸಾಧುಶೆಟ್ಟಿ ಮನೆಯ ಅಂಗಳಕ್ಕೆ. ಮುಂಬೈ ಭೂಗತ ಜಗತ್ತಿನ ಹಳೇ ಹುಲಿ ಸಾಧು ಶೆಟ್ಟಿಗೆ ಸೇಕ್ ಹ್ಯಾಂಡ್ ಮಾಡಿಯೇ ಮೈತುಂಬ ರೋಮಾಂಚನ ಅನುಭವಿಸಿದ್ದ. ದುಬೈನಲ್ಲಿರುವ ಮುತ್ತಪ್ಪ ರೈಯನ್ನು ಅಲ್ಲಿಂದಲೇ ಸ್ಮಶಾನದ ಬಾಗಿಲಿಗೆ ಕಳಿಸುವುದು ಹೇಗೆ? ಅಂತ ಸಲಹೆ ಕೇಳುತ್ತಿದ್ದ! ಪುಕ್ಕಟೆ ಸಲಹೆ ಶೆಟ್ಟಿಯಿಂದಲೂ ಬರುತ್ತಿತ್ತು. ಈ ನಡುವೆ ಮಲೇಶಿಯಾದಲ್ಲಿದ್ದ ಸದಾಶಿವ ನಿಕಾಲ್ಜೇ ಅಲಿಯಾಸ್ ಛೋಟಾರಾಜನ್‌ನೊಂದಿಗೂ ಸುರೇಶ್ ಮಾತನಾಡಲಾರಂಭಿಸಿದ.

ಸಾಧುಶೆಟ್ಟಿಯನ್ನೇ ಬದಿಗೆ ಸರಿಸಿ ಮೇಲೆ ಬಿದ್ದು ಛೋಟಾರಾಜನ್‌ಗೆ ಹತ್ತಿರವಾದ. ಹೊತ್ತಲ್ಲದ ಹೊತ್ತಿಗೆ ಮಾತನಾಡತೊಡಗಿದ. ದಕ್ಷಿಣ ಕನ್ನಡ ಜಿಲ್ಲೆಯ ಯಾರೆಲ್ಲಾ ಉದ್ಯಮಿಗಳು ಮುತ್ತಪ್ಪ ರೈನೊಂದಿಗೂ ಸಂಪರ್ಕದಲ್ಲಿದ್ದರೋ ಅವರದೊಂದು ಪಟ್ಟಿ ಮಾಡಿ ಫೋನ್ ನಂಬರ್ ಸಮೇತ ಛೋಟಾರಾಜನ್‌ಗೆ ಕಳುಹಿಸತೊಡಗಿದ್ದ. ಇದು ಸಾಧುಶೆಟ್ಟಿಗೂ ಗೊತ್ತಾಗಿತ್ತು.

ಮುಂಬೈನಲ್ಲಿ ಅಷ್ಟು ದೊಡ್ಡ ಫೀಲ್ಡ್ ನೋಡಿದ ಸಾಧುಗೆ ಸುರೇಶ ತುಂಬಾ ಚಿಲ್ಲರೆ ಮನುಷ್ಯ ಅನಿಸಿದ್ದ. ಛೋಟೋರಾಜನ್‌ಗೇನೋ ಸುರೇಸವ ರೈ 'ಕಾಮ್ ಕಾ ಆದ್ಮಿ' ಅಂತ ಅನ್ನಿಸಿರಬೇಕು. ಆದರೆ ಸುರೇಶ್ 'ಬಲಿ ಕಾ ಬಕ್ರ' ಅನ್ನುವುದು ಮಾತ್ರ ಸಾಧುಶೆಟ್ಟಿಗೆ ಆ ಹೊತ್ತಿಗಾಗಲೇ ಗೊತ್ತಾಗಿತ್ತು. ಎಷ್ಟಾದರೂ ಮುಂಬೈ ಅಂಡರ್‌ವರ್ಲ್ಡ್‌ನಲ್ಲಿ ಪಳಗಿದ ಜೀವ ಅದು.

ಸಾಧುಶೆಟ್ಟಿ ಸಂಪರ್ಕದಲ್ಲಿದ್ದೇ ಸುರೇಶ ಇಷ್ಟೆಲ್ಲ ಹಾರಾಡುತ್ತಿರುವ ವಿಷಯ ಮುತ್ತಪ್ಪ ರೈ ತಿಳಿದಿತ್ತು. 'ಇದು ಸರಿಯಾ ಶೆಟ್ರೆ' ಅಂತ ಅದೊಂದು ದಿನ ನೇರವಾಗಿ ಪ್ರಶ್ನೆ ಮಾಡಿದ್ದರು. ತಾನೇ ಬೆಳೆಸಿದ ಸುರೇಶನಿಂದ ತನಗಾದ ಅವಮಾನ, ಅನಾಹುತ, ಅನ್ಯಾಯಗಳ ವಿವರ ನೀಡಿದರು. ''ಸಾಧು ಭಾಯ್, ನನಗೂ ನಿಮಗೂ ಏನಿದೆ ದ್ವೇಷ? ಇಬ್ಬರೂ ಫೀಲ್ಡ್‌ನವರೇ. ನಿಮ್ಮ ತಾಕತ್ತು ಎಂತದ್ದು ಅಂತ ನನಗೆ ಗೊತ್ತು. ನಿಮಗೆ ಏನಾದರೂ ನನ್ನಿಂದ ಅನ್ಯಾಯವಾಗಿದೆಯಾ? ಸುಮ್ಮನೆ ಸುರೇಶನ ವಿಷಯದಲ್ಲಿ ನಮ್ಮಿಬ್ಬರ ನಡುವೆ ಮನಸ್ತಾಪ ಯಾಕಾಗಬೇಕು ಹೇಳಿ? ಹಾಗಂತ ದುಬೈನಲ್ಲಿ ಶರತ್ ಶೆಟ್ಟಿ ಎದುರು ಕುಳಿತು ಸ್ಪೀಕರ್ ಫೋನಿನಲ್ಲಿ ಮಾತನಾಡಿದರು. 'ಒಂದಲ್ಲ ಒಂದು ದಿನ



ನಿಮ್ಮ ಜೀವಕ್ಕೂ ಸಂಚಕಾರ ತರುತ್ತಾನೆ ನೋಡಿ' ಅಂತ ಕೊನೆಯಲ್ಲಿ ಒಂದು ಮಾತು ಸೇರಿಸಿಬಿಟ್ಟರು. ಇತ್ತ ಪಣಿಯೂರಿನ ಬಂಗಲೆಯಲ್ಲಿ ಬೆಣ್ಣೆ ನಿಧಾನವಾಗಿ ಕರಗತೊಡಗಿತು.

ಸಾಧು ಶೆಟ್ಟಿ ಮುಂಬೈ ಅಂಡರ್‌ವರ್ಲ್ಡ್‌ನಲ್ಲಿ ವರ್ಷಗಟ್ಟಲೆ ಪಳಗಿದವನು. ಎಂದಿನಂತೆ ಬೆಣ್ಣೆಯಲ್ಲಿ ಕೂದಲು ತೆಗೆಯುವ ದಾಟಿಯಲ್ಲಿ ಉತ್ತರಿಸಿದ್ದ. 'ನೋಡಿ ರೈಗಳೇ, ನನ್ನ ಸಂಬಂಧಿ ಜಯಪ್ರಕಾಶ್ ಶೆಟ್ಟಿ ಮುಖಾಂತರ ಸುರೇಶ್ ನನ್ನ ಸಂಪರ್ಕಕ್ಕೆ ಬಂದಿದ್ದಾನೆ. ನಾನೇ ಒಂದು ಟಾಟಾ ಸುಮೋ ಗಾಡಿ, 4 ಜನ ಕೊಟ್ಟದ್ದೂ ಹೌದು. ಛೋಟಾರಾಜನ್‌ನೊಂದಿಗೆ ಮಾತನಾಡಿಸಿದ್ದೂ ನಿಜ. ಆದರೆ ನಿಮಗೆ ಅನ್ಯಾಯ ಮಾಡಿದವನು ನನ್ನೊಂದಿಗೆ ನಿಯತ್ತಿನಿಂದಿರುತ್ತಾನೆ ಎಂದು ನಿರೀಕ್ಷಿಸುವುದು ಹೇಗೆ? ನಿಮಗೆ ಅವನನ್ನು ಎಲ್ಲಿಗೆ ಕಳುಹಿಸಬೇಕೋ ಹೇಳಿ. ನಾನು ಕಳುಹಿಸುತ್ತೇನೆ. ''ಉಡಾದೋ ಸಾಲೆಕೋ''. ವಿಷಯ ಮಾತ್ರ ನಮ್ಮಿಬ್ಬರಲ್ಲೇ ಇರಲಿ' ಎಂದ ಸಾಧು, ಕೊನೆಯಲ್ಲಿ 'ವಿಠ್ಠಲ' ಎಂದಷ್ಟೇ ಹೇಳಿ ಫೋನ್ ಡಿಸ್‌ಕನೆಕ್ಟ್ ಮಾಡಿದರು.

ಏನೇ ಆದರೂ ಸಾಧು ಶೆಟ್ಟಿ - ಮುತ್ತಪ್ಪ ರೈ ಕುಲಬಾಂಧವರು. ಇಬ್ಬರೂ ಕರಾವಳಿಯ ನೀರು ಕುಡಿದು ಬೆಳೆದವರೇ. ಇಬ್ಬರಿಗೂ ಹಳೆಯ ಆತ್ಮೀಯತೆ ಇತ್ತು. ಪದೇ ಪದೇ ಸುರೇಶ್ ರೈ ಹೇಳುವ ವಿಷಯಗಳನ್ನೆಲ್ಲ ಪಿನ್ ಟು ಪಿನ್ ಮುತ್ತಪ್ಪ ರೈಗೆ ತಲುಪಿಸಿದರು. ಅಲ್ಲಿಗೆ ರೈ ಸಹನೆ ಮುಗಿಯುತ್ತಾ ಬಂತು. ಈ ನಡುವೆ ಪುತ್ತೂರಿನ ಮುಸ್ಲಿಂ ಉದ್ಯಮಿಯೊಬ್ಬರೊಂದಿಗೆ ಸುರೇಶ್ ನಿಕಟ ಸಂಪರ್ಕ ಇರಿಸಿಕೊಂಡಿದ್ದ. ತಾನು ಎಲ್ಲಿದ್ದೇನೆ? ಎಲ್ಲಿಗೆ ಹೋಗುತ್ತಿದ್ದೇನೆ? ಎಂಬ ವಿಷಯವನ್ನೆಲ್ಲ ಆತ ಪದೇ ಪದೇ ಆ ಉದ್ಯಮಿಗೆ ತಿಳಿಸುತ್ತಿದ್ದ. ಈ ಮಾಹಿತಿ ನೇರವಾಗಿ ದುಬೈನ ಮುತ್ತಪ್ಪ ರೈ ಬಂಗಲೆ ತಲುಪುತ್ತಿತ್ತು. ರೈ ಅದನ್ನು ಹಂತಕರ ತಂಡದ ಮುಖ್ಯಸ್ಥ ಪ್ರವೀಣ್‌ಗೆ ತಲುಪಿಸುತ್ತಿದ್ದರು.

☞ 12

# 5 ಕೋಟಿ ಮೌಲ್ಯದ ಸೈಟಿನ ಒಡೆಯನನ್ನು ಕೊಲೆಗೈದ ರಿಯಲ್ ಎಸ್ಟೇಟ್ ಉದ್ಯಮಿಗಳು!

**ಬೆಂಗಳೂರಿನ ಜಯನಗರದಲ್ಲಿ 5 ಕೋಟಿ ರೂ. ಮೌಲ್ಯದ ಸೈಟ್‌ನ ಒಡೆಯನಾಗಿದ್ದ ವೈದ್ಯ ದಂಪತಿಯ ಮಗ ಆನಂದ್‌ನನ್ನು ರಿಯಲ್ ಎಸ್ಟೇಟ್ ಉದ್ಯಮದ ಕೆಲ ದುರುಳರು ಕೊಲೆಗೈದು ಕಾವೇರಿ ನದಿಗೆ ಎಸೆದಿದ್ದಾರೆ. ಈ ಘಟನೆ ಆರು ತಿಂಗಳ ನಂತರ ಬೆಳಕಿಗೆ ಬಂದಿದ್ದು, ಪೊಲೀಸರು ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.**



ಸಿಲಿಕಾನ್ ಸಿಟಿ ಬೆಂಗಳೂರಿನ ಜಯನಗರದಲ್ಲಿ ಸುಮಾರು 5 ಕೋಟಿ ರೂ. ಮೌಲ್ಯದ ಸೈಟ್‌ನಲ್ಲಿ ವಾಸವಾಗಿದ್ದ ವೈದ್ಯ ದಂಪತಿ ಅಕಾಲಿಕ ಸಾವಿಗೀಡಾಗುತ್ತಾರೆ. ಅವರಿಗಿದ್ದ ಒಬ್ಬನೇ ಒಬ್ಬ ಅವಿವಾಹಿತ ಮಗನ ಸ್ನೇಹ ಬೆಳೆಸಿದ ರಿಯಲ್ ಎಸ್ಟೇಟ್ ಉದ್ಯಮದ ಕೆಲವು ದುರುಳರು, ಕೇವಲ ಮೂರು ತಿಂಗಳಲ್ಲಿ ಆತನನ್ನು ಕೊಲೆ ಮಾಡಿ ಅನಾಥ ಶವವಾಗಿ ಕಾವೇರಿ ನದಿಗೆ ಬೀಸಾಡುತ್ತಾರೆ. ಈ ಘಟನೆ ನಡೆದು ಆರು ತಿಂಗಳ ನಂತರ ಪೊಲೀಸರಿಗೆ ಕೊಲೆಯ ವಿಚಾರ ಗೊತ್ತಾಗಿದೆ.

ತಮಿಳುನಾಡಿನಿಂದ ಬಂದ ಸೋಮಸುಂದರ್ ಅವರು ಬೆಂಗಳೂರಿನಲ್ಲಿ ವೈದ್ಯ ವೃತ್ತಿ ಮಾಡುತ್ತಾ ನೆಲೆಸಿರುತ್ತಾರೆ. ಅವರು ಜಯಲಕ್ಷ್ಮಿ ಎನ್ನುವ ವೈದ್ಯೆಯನ್ನು ಮದುವೆಯಾಗಿ ಜಯನಗರ 7ನೇ ಹಂತದಲ್ಲಿ 30X40 ಅಳತೆಯ ನಿವೇಶನ ಖರೀದಿಸಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಾರೆ. ಅವರಿಗೆ ಇಬ್ಬರು ಮಕ್ಕಳಿರುತ್ತಾರೆ. ಹಿರಿಯ ಮಗಳು ಸುಮಾ ಮತ್ತು ಕಿರಿಯ ಮಗ ಆನಂದ್ ಇರುತ್ತಾರೆ. ಸುಖವಾಗಿ ಸಂಸಾರ ನಡೆಯುತ್ತಿರುತ್ತದೆ. ಆದರೆ, ಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿದ ನಂತರ ಆನಂದ್‌ಗೆ ಮದುವೆ ಮಾಡುವಷ್ಟರಲ್ಲಿ ಇಬ್ಬರೂ ಅನಾರೋಗ್ಯದಿಂದ ಸಾವನ್ನಪ್ಪುತ್ತಾರೆ. ಆದರೆ, ತಮ್ಮ ಮಗನಿಗೆ ಒಂದು ಕೆಲಸ ಅಂತಾ ಏನೂ ಮಾಡದೇ ಆತನಿಗಾಗಿ ಒಂದಿಷ್ಟು ಹಣ ಹಾಗೂ ಕೋಟ್ಯಾಂತರ ಬೆಲೆ ಬಾಳುವ ಸೈಟ್‌ನಲ್ಲಿ ಚಿಕ್ಕ ಮನೆಯನ್ನು ಬಿಟ್ಟು ಹೋಗಿದ್ದರು.



ತಂದೆ-ತಾಯಿ ಕಳೆದುಕೊಂಡಿದ್ದ ಆನಂದ್‌ಗೆ ಅಕ್ಕ ಸುಮಾ ಮಾತ್ರ ನೆರವಾಗಿದ್ದಳು. ಆದರೆ, ಗಂಡನ ಮನೆಯಲ್ಲಿದ್ದ ಅಕ್ಕ ಸುಮಾ ಕೂಡ ಅನಾರೋಗ್ಯದ ಕಾರಣ ಇತ್ತೀಚೆಗೆ ತೀರಿ ಹೋಗುತ್ತಾರೆ. ಆಗ ಆನಂದ್ ಒಬ್ಬಂಟಿಯಾಗಿ ಅಪ್ಪ ಕೂಡಿಟ್ಟ ಎಲ್ಲ ಹಣವನ್ನು ಖರ್ಚು ಮಾಡಿಕೊಳ್ಳುತ್ತಾನೆ. ನಂತರ, ತನ್ನ ಖರ್ಚಿಗೆ ಹಾಗೂ ಊಟಕ್ಕೂ ಗತಿಯಿಲ್ಲದೇ ಪರದಾಡುವ ಸ್ಥಿತಿ ಎದುರಾಗುತ್ತದೆ. ಆಗ ತನ್ನ ಮನೆಯನ್ನೇ ಮಾರಾಟ ಮಾಡಲು ಮುಂದಾಗುತ್ತಾನೆ. ಪೊಲೀಸರ ಮಾಹಿತಿ ಪ್ರಕಾರ ಆನಂದ್ ಕೂಡ ವೈದ್ಯ ಎಂದು ಹೇಳಲಾಗುತ್ತಿದ್ದರೂ, ಮತ್ತೊಂದು ಮಾಹಿತಿ ಪ್ರಕಾರ ಆತ ಕೇವಲ 3ನೇ ತರಗತಿ ಓದಿದ್ದ ಎಂದು ತಿಳಿದು ಬಂದಿದೆ. ಮೊದಲೇ ಮುಗ್ದನ ರೀತಿ ಇದ್ದ ಆನಂದ್ ಒಬ್ಬಂಟಿಯಾಗಿದ್ದು ಆತನ ಅಮಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳಲು ಕೆಲವರು ಕಾಯುತ್ತಿದ್ದರು.

ಆನಂದ್ ಒಬ್ಬಂಟಿ ಎಂಬುದು ಯಾವಾಗ ಗೊತ್ತಾಯಿತೋ ಆಗ ರಿಯಲ್ ಎಸ್ಟೇಟ್ ಖದೀಮರ ಕಣ್ಣು ಆನಂದ್ ಮನೆಯ ಮೇಲೆ ಬಿದ್ದಿತ್ತು. ಬೆಂಗಳೂರಿನ ಜಯನಗರದಲ್ಲಿ 30X40 ಸೈಟ್ ಬೆಲೆಯೇ 4-5 ಕೋಟಿ ಬಾಳುತ್ತದೆ. ಆನಂದ್ ಯಾವಾಗ ಮನೆ ಹಾಗೂ ಸೈಟ್ ಮಾರಾಟ ಮಾಡಬೇಕು ಎಂದು ನಿರ್ಧರಿಸುತ್ತಾನೆಯೋ ಆಗ ರಿಯಲ್ ಎಸ್ಟೇಟ್ ಖದೀಮರಾದ ಮೊಹಮ್ಮದ್ ಗೌಸ್ ಅಲಿಯಾಸ್ ಗೌಸ್ (31), ಈತನ ಸಹಚರರಾದ ನದೀಂ ಪಾಷಾ (32) ಮತ್ತು ಸೈಯದ್ ನೂರ್ ಪಾಷಾ (39) ಎಂಟ್ರಿ ಕೊಡುತ್ತಾರೆ. ಆನಂದ್‌ಗೆ ಯಾರೂ ಇಲ್ಲ, ಆತನಿಗೆ ಏನಾದರೂ ಯಾರೂ ಕೇಳುವವರಿಲ್ಲ ಎಂದು ಆತನ ಮನೆಯನ್ನು ಕಿತ್ತುಕೊಳ್ಳಲು ಪ್ಲಾನ್ ಮಾಡುತ್ತಾರೆ. ರಿಯಲ್ ಎಸ್ಟೇಟ್ ಉದ್ಯಮದ ಮೂವರು ಖದೀಮರಾದ ಮೊಹಮ್ಮದ್ ಗೌಸ್, ನದೀಂ ಪಾಷಾ ಹಾಗೂ ಸೈಯದ್ ನೂರ್ ಪಾಷಾ ಆನಂದ್ ಮನೆ ಮಾರಾಟ ಮಾಡಿಸುವುದಾಗಿ ಹೇಳಿ ಆತನ ಮನೆಗೆ, ಊಟ-ತಿಂಡಿ ತಂದು ಕೊಡುತ್ತಾ ಸ್ನೇಹ ಬೆಳೆಸಿಕೊಳ್ಳುತ್ತಾರೆ. ನಂತರ ರೆಸ್ಟೋರೆಂಟ್, ರೆಸಾರ್ಟ್ ಹಾಗೂ ದೇಶದಾದ್ಯಂತ ಟ್ರಿಪ್‌ಗೆ ಆನಂದ್‌ನನ್ನು ಕರೆದುಕೊಂಡು ಹೋಗುತ್ತಾರೆ. ಆನಂದ್ ಖುಷಿಯಾಗಿದ್ದನು.

ಈ ಖದೀಮರು ಆನಂದ್‌ನ ಸೈಟ್ ಅನ್ನು 90 ಲಕ್ಷ ರೂ.ಗೆ ಮಾರಾಟ ಮಾಡಿಸುವ ಆಫರ್ ತರುತ್ತಾರೆ. ಇದಕ್ಕೆ ಆನಂದ್ ಕೂಡ ಒಪ್ಪಿಕೊಳ್ಳುತ್ತಾನೆ. ಆಗ ರಿಯಲ್ ಎಸ್ಟೇಟ್ ಏಜೆಂಟ್‌ಗಳು ಸೈಟ್ ಮಾರಾಟ ಮಾಡಿದ ಆನಂದ್‌ಗೆ 45 ಲಕ್ಷ ರೂ. ಹಣವನ್ನೂ ಕೊಡುತ್ತಾರೆ. ಆದರೆ, ಹಣ ಮಾತ್ರ ಆನಂದ್‌ನ ಕೈ ಸೇರುವುದಿಲ್ಲ, ಎಲ್ಲ ಹಣವನ್ನು ಇಟ್ಟುಕೊಂಡ ಆನಂದನ ಸ್ನೇಹಿತರು ಆತನನ್ನು 2024ರ ಜೂನ್ 19ರಂದು ಒಂದು ತಿಂಗಳ ಕಾಲ ಪ್ರವಾಸಕ್ಕೆಂದು ಕರೆದುಕೊಂಡು ಹೋಗಿ, ಆ ಸಮಯದಲ್ಲಿ ಮನೆ ಡೆಮಾಲಿಶ್ ಮಾಡಿಸಲು ಒಪ್ಪಿಗೆಯನ್ನೂ ಕೊಟ್ಟಿರುತ್ತಾರೆ. ಇವರು ಟ್ರಿಪ್‌ಗೆ ಹೋಗುತ್ತಿದ್ದಂತೆ ಆನಂದನ ಮನೆ ಒಡೆಯುವ ಕಾರ್ಯ ಆರಂಭವಾಗುತ್ತದೆ. ಇತ್ತ ಆನಂದ್ ಮೂರು ಜನ ಫ್ರೆಂಡ್ಸ್ ಜೊತೆ ಗೋವಾ, ಕೇರಳ, ಮಡಕೇರಿ, ಮೈಸೂರು ಪ್ಯಾಲೇಸ್ ಅಂತ ಸುತ್ತಾಡುತ್ತಾ ಕಾಲ ಕಳೆಯುತ್ತಿದ್ದನು. ಈ ಹಂತಕರು ಕ್ಲೋಸ್ ಫ್ರೆಂಡ್ಸ್ ರೀತಿ ಫೋಟೋ ತೆಗೆಸಿಕೊಂಡಿದ್ದರು. ಸ್ವತಃ ಆನಂದ್ ಮಾತ್ರವಲ್ಲ ಯಾರಿಗೂ ಅನುಮಾನ ಬರದಂತೆ ಆನಂದನನ್ನು ಕರೆದುಕೊಂಡು ಸುತ್ತಾಡಿದ್ದರು.

ಮೈಸೂರಿನ ಖಾಸಗಿ ಲಾಡ್ಜ್‌ನಲ್ಲಿದ್ದ ಹಂತಕರು 2024ರ ಜುಲೈ 9ರ, ರಾತ್ರಿ 2.30ಕ್ಕೆ ಆನಂದ್ ಹತ ಮಾಡಿದ್ದಕ್ಕೆ ಬೆಂಗಳೂರಿಗೆ ಹೋಗೋಣಾ ಅಂತ ಹೊರಗಡೆ ಕರೆದುಕೊಂಡು ಬರುತ್ತಾರೆ. ಆನಂದ್‌ಗೆ ಮನೆ ಡೆಮಾಲಿಷನ್ ಮಾಡಿದ್ದಾರೆ ಎಂಬ ಸುಳಿವು ಹೇಗೋ ಸಿಕ್ಕಿತ್ತು. ಕೇವಲ 45 ಲಕ್ಷ ರೂ. ಕೊಟ್ಟು ಮನೆ ಡೆಮಾಲಿಷನ್ ಮಾಡೋಕೆ ನಾನು ಬಿಡಲ್ಲ, ಪೂರ್ತಿ ಹಣ ಕೊಟ್ಟರೆ ಮಾತ್ರ ಮನೆ ಡೆಮಾಲಿಷನ್‌ಗೆ ಬಿಡೋದು ಅನ್ನೋ ಮಾತನಾಡುತ್ತಿದ್ದನು. ಇದರಿಂದ ಸ್ವಲ್ಪ ವಿಚಲಿತರಾಗಿದ್ದ ಗೆಳೆಯರ ರೂಪದಲ್ಲಿದ್ದ ಹಂತಕರು ಮೈಸೂರಿನ ಇಲವಾಲ ಪೊಲೀಸ್ ಠಾಣಾ ವ್ಯಾಪ್ತಿಯ ಕೆ.ಆರ್.ಎಸ್. ಡ್ಯಾಮಿನ ಸಾಗರಕಟ್ಟೆ ಬ್ರಿಡ್ಜ್ ಬಳಿ, ಕಾರಿನ ಮುಂದಿನ ಸೀಟಿನಲ್ಲಿ ಕುಳಿತಿದ್ದ ಆನಂದ್ ಕುತ್ತಿಗೆಗೆ ಹಗ್ಗ ಬಿಗಿದು ಕೊಲೆ ಮಾಡಿ, ನೀರಿಗೆ ಬೀಸಾಡಿ ಬಂದಿದ್ದಾರೆ. ಎರಡು ದಿನಗಳ ಬಳಿಕ ಆನಂದ್ ಮೃತದೇಹ ಮೇಲೆ ತೇಲಿ ಬಂದಿದೆ. ಅದನ್ನು ನೋಡಿದ ಇಲವಾಲ ಪೊಲೀಸರು ಯುಡಿಆರ್ ಮಾಡಿ ಅಪರಿಚಿತ ಶವ ಅಂತ ಮಣ್ಣು ಮಾಡಿದ್ದಾರೆ. ಆದರೆ, ಆನಂದ್ ಡಿಎನ್‌ಎ ಮಾತ್ರ ತೆಗೆದಿಟ್ಟಿದ್ದರು.



ಆದರೆ, ಆನಂದ್‌ಗೆ ಇನ್ನೂ ಸಂಬಂಧಿಕರು ತಮಿಳುನಾಡಿನಲ್ಲಿ ಜೀವಂತವಾಗಿದ್ದರು. ಆನಂದನ ತಾಯಿ ಜಯಲಕ್ಷ್ಮಿ ಸಹೋದರ ತಮಿಳುನಾಡು ಮೂಲದ ಮಾವ ರಘುಪತಿ ಹಾಗೂ ಅವರ ಪತ್ನಿ ಕೃಷ್ಣ ಬಾಯಿ ದಂಪತಿ ಆನಂದ್ ಜೊತೆ ಪ್ರತಿನಿತ್ಯ ಮಾತಾಡುತ್ತಿದ್ದರು. ಆನಂದ್ ಕೊಲೆಯಾದ ಬಳಿಕ ಫೋನ್ ಸ್ವಿಚ್ ಆಫ್ ಆಗಿತ್ತು. ಆನಂದ್ ಸಂಪರ್ಕಕ್ಕೆ ಸಿಗೋದಿಲ್ಲ, ಕೊನೆಗೆ ಬೆಂಗಳೂರಿಗೆ ಆನಂದ್ ಹುಡುಕಿಕೊಂಡು ಬಂದವರು ಬನಶಂಕರಿ ಪೊಲೀಸ್ ಠಾಣೆಗೆ ಕಂಪ್ಲೇಟ್ ಕೊಡುತ್ತಾರೆ. ಮಿಸ್ಸಿಂಗ್ ಕಂಪ್ಲೇಟ್ ದಾಖಲಿಸಿದ ಬನಶಂಕರಿ ಪೊಲೀಸರು ಸ್ವಲ್ಪ ಹುಡುಕಾಟ ನಡೆಸಿ, ಆತ ಸಿಗಲಿಲ್ಲವೆಂದು ಸುಮ್ಮನಾಗುತ್ತಾರೆ. ಆಗ ವಕೀಲರ ಮೂಲಕ ಕರ್ನಾಟಕ ಆನಂದನ ಮಾವ ರಘುಪತಿ ಹೈಕೋರ್ಟ್ ಮೆಟ್ಟಿಲೇರಿ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಸಲ್ಲಿಸುತ್ತಾರೆ.

ಅರ್ಜಿ ವಿಚಾರಣೆ ನಡೆದು ಹೈಕೋರ್ಟ್ ಆನಂದ್ ಹುಡುಕಿ ತರುವಂತೆ ಬನಶಂಕರಿ ಪೊಲೀಸರಿಗೆ ಆದೇಶ ಮಾಡುತ್ತದೆ. ಆಗ ಮತ್ತೆ ಬನಶಂಕರಿ ಪೊಲೀಸರು ಆನಂದ್‌ಗಾಗಿ ಹುಡುಕಾಟ ಆರಂಭಿಸುತ್ತಾರೆ. ಬೆಂಗಳೂರು ನಗರದ ದಕ್ಷಿಣ ವಿಭಾಗ ಡಿಸಿಪಿ ಲೋಕೇಶ್ ಬಿ. ಮಾರ್ಗದರ್ಶನದಲ್ಲಿ, ಎಸಿಪಿ ನಾರಾಯಣಸ್ವಾಮಿ, ಬನಶಂಕರಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಕೊಟ್ರೇಶಿ ಹಾಗೂ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಪ್ರವೀಣ್ ಹೊಸೂರ ತಂಡ ಕೇಸ್ ತನಿಖೆ ಆರಂಭಿಸುತ್ತದೆ. ಪೊಲೀಸರು ಆನಂದ್ ಪೂರ್ವಾಪರ ತಿಳಿದುಕೊಳ್ಳುತ್ತಾ, ಟೆಕ್ನಿಕಲ್ ಎವಿಡೆನ್ಸ್ ಮೂಲಕ ತನಿಖೆ ಕೈಗೊಂಡಾಗ ಆನಂದ್ ಜೊತೆಗಿದ್ದ ಮೂವರು ಸ್ನೇಹಿತರ ಸುಳಿವು ಸಿಗುತ್ತದೆ. ಇವರನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿದರೂ ಪೊಲೀಸರಿಗೆ ಸಣ್ಣ ಸುಳಿವೂ ಸಿಗದಂತೆ ಯಾಮಾರಿಸುತ್ತಿರುತ್ತಾರೆ. ಆನಂದ್ ತಮಿಳುನಾಡಿನಲ್ಲಿ, ಅಲ್ಲಿ ಇಲ್ಲಿ ಇದ್ದಾನೆ ಎನ್ನುತ್ತಿದ್ದವರು, ಒಮ್ಮೆ ಪೊಲೀಸರ ತನಿಖೆ ವೇಳೆ ಒಬ್ಬ ಆರೋಪಿ ಆನಂದ್‌ನನ್ನು ಮೈಸೂರಿನಲ್ಲಿ ಬಿಟ್ಟು ಬಂದಿದ್ದಾಗಿ ಹೇಳುತ್ತಾನೆ. ಆಗ ಪೊಲೀಸರು ತಮ್ಮ ಸ್ಟೈಲ್‌ನಲ್ಲಿ ರುಬ್ಬಲು ಶುರು ಮಾಡಿದಾಗ ಆತನನ್ನು ಕೊಲೆ ಮಾಡಿದ ವಿಚಾರ ಬಾಯಿ ಬಿಡುತ್ತಾರೆ.



ಆನಂದನ ಜೊತೆಗಿದ್ದವರೇ ಕೊಲೆ ಮಾಡಿದ ಆರೋಪಿಗಳೆಂದು ತಿಳಿದಾಗ ಅವರನ್ನು ಮೈಸೂರಿಗೆ ಕರೆದುಕೊಂಡು ಹೋಗುವ ಸ್ಥಳ ಮಹಜರ್ ಮಾಡುತ್ತಾರೆ. ಮೈಸೂರು ಸುತ್ತಮುತ್ತ ಚಾಮುಂಡಿಬೆಟ್ಟ, ಮಂಡ್ಯ ಸೇರಿದಂತೆ ಕಳೆದ ಆರು ತಿಂಗಳಲ್ಲಿ ಸಂಭವಿಸಿ ಅಸಹಜ ಸಾವು ಪ್ರಕರಣಗಳನ್ನು ಹುಡುಕುತ್ತಾರೆ. ನಂತರ, ಪಿಎಸ್‌ಐ ಪ್ರವೀಣ್ ಹೊಸೂರ ತನ್ನ ಎಲ್ಲಾ ಬ್ಯಾಚ್‌ಮೆಂಟ್ ಸಂಪರ್ಕದಿಂದ ಆನಂದ್ ಕೇಸ್ ಟ್ರೇಸ್ ಮಾಡಲು ಯತ್ನಿಸಿದಾಗ, ಮೈಸೂರು ಜಿಲ್ಲೆಯ ಇಲವಾಲ ಠಾಣಾ ವ್ಯಾಪ್ತಿಯಲ್ಲಿ ಆನಂದ್ ಶವ ಸಿಕ್ಕಿದೆ ಎಂಬುದು ಗೊತ್ತಾಗುತ್ತದೆ. ಜೊತೆಗೆ, ಯುಡಿಆರ್ ಕೇಸ್ ಮಾಡಿ ಅಪರಿಚಿತ ಶವ ಅಂತ ಮಣ್ಣು ಮಾಡಿದ ವಿಷಯ ತಿಳಿಯುತ್ತದೆ.

ತಮಿಳುನಾಡಿನಿಂದ ಬೆಂಗಳೂರಿಗೆ ಬಂದ ಆನಂದ್ ಸಾವಿನ ವಿಷಯ ಕೇಳಿದ ಅತ್ತೆ ಮಾವ ಕುಸಿದು ಹೋಗುತ್ತಾರೆ. ಕಳೆದ ಆರು ತಿಂಗಳ ಹಿಂದಿನ ಕೊಲೆ ರಹಸ್ಯವನ್ನು ಬೇಧಿಸಿದ ಬನಶಂಕರಿ ಪೊಲೀಸರು ನಿಟ್ಟುಸಿರು ಬಿಟ್ಟರೆ, ಮಗನಂತಿದ್ದ ಆನಂದ್ ಕಳೆದುಕೊಂಡ ಕುಟುಂಬಸ್ಥರು ಕಣ್ಣೀರು ಹಾಕುತ್ತಿದ್ದಾರೆ. ಕೇವಲ ನಿವೇಶನಕ್ಕಾಗಿ ಆನಂದ್ ಕೊಲೆಗೈದ ಆರೋಪಿಗಳಾದ ಮೊಹಮ್ಮದ್ ಗೌಸ್, ನದೀಂ ಪಾಷಾ, ಸೈಯದ್ ನೂರ್ ಪಾಷಾ ಜೈಲು ಸೇರಿದ್ದಾರೆ. ಆನಂದ್ ಕೊಲೆ ಹಿಂದೆ ರಿಯಲ್ ಎಸ್ಟೇಟ್ ಕಳ್ಳರ ಸುಪಾರಿ ಕಹಾನಿ ಇದೆ. ಆನಂದ್ ಕೊಲೆ ಮಾಡಲು ಮೊದಲೇ ಸುಪಾರಿ ಪ್ಲಾನ್ ಮಾಡಿ ಮೈಸೂರು ಕಡೆ ಕರೆದುಕೊಂಡು ಹೋಗಲಾಗಿತ್ತು. ಪೊಲೀಸರು ಸಾಕ್ಷ್ಯ ಕಲೆ ಹಾಕುತ್ತಾ, ತನಿಖೆ ಮುಂದುವರೆಸಿದ್ದಾರೆ.

ಒಟ್ಟಾರೆ ಬೆಂಗಳೂರು ಎಂಬ ಮಾಯಾನಗರಿಯಲ್ಲಿ ಮನೆ, ಸೈಟ್ ಮಾರಾಟ, ರೌಡಿಸಂ, ಭೂ ಮಾಫಿಯಾ, ಸೈಟ್ ಮಾಫಿಯಾ, ರಿಯಲ್ ಎಸ್ಟೇಟ್‌ಗಾಗಿ ಎಷ್ಟೋ ಕೊಲೆಗಳು ನಡೆದು ಹೋಗಿವೆ. ಇವುಗಳ ಬಗ್ಗೆ ಎಚ್ಚರ ವಹಿಸೋದು ಒಳ್ಳೆಯದು. ತನ್ನ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಲು ಹೋದ ಮುಗ್ಧ, ಅಮಾಯಕ ಆನಂದ್ ಹತ್ಯೆಯಾಗಿ ಹೋಗಿದ್ದು ದುರಂತವೇ ಸರಿ.

# ಕಾರ್ಮಿಕರ ನಡುವಿನ ಕಿತ್ತಾಟಕ್ಕೆ ಒಬ್ಬ ಬಲಿ; ಇಬ್ಬರ ಬಂಧನ!


ಕೊಲೆಯಾದ ಅಬು ತಲ್ವಾ


**ಜ್ಯೂಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿಕೊಂಡು ಕ್ವಾಟ್ರಸ್‌ನಲ್ಲಿ ವಾಸವಿದ್ದ ಎರಡು ಲೇಬರ್ ಕಾಂಟ್ರಾಕ್ಟರ್ ಗುಂಪುಗಳ ನಡುವೆ ಬೈಕ್ ವಿಚಾರಕ್ಕೆ ಕಿತ್ತಾಟ ನಡೆದು ಒಂದು ಗುಂಪು ಇನ್ನೊಂದು ಗುಂಪಿನ ಕಾರ್ಮಿಕನೊಬ್ಬನನ್ನು ಸೌದೆ ತುಂಡಿನಿಂದ ತಲೆಗೆ ಹೊಡೆದು ಸಾಯಿಸಿ ಪರಾರಿಯಾಗಿದ್ದ ಇಬ್ಬರು ಕಾರ್ಮಿಕರನ್ನು ಶ್ರೀನಿವಾಸಪುರ ಠಾಣೆಯ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**


ಪ್ರಮುಖ ಆರೋಪಿ ರಾಕೇಶ್ ಧುರ್ವೇ

**ಕೋಲಾರ**

✍ ಕೋಲಾರ ಮಂಜು

ಉತ್ತರ ಭಾರತದ ಕೆಲ ರಾಜ್ಯಗಳಲ್ಲಿನ ಕಾರ್ಮಿಕರಿಗೆ ದುಡಿಯಲು ಕೆಲಸ ಇಲ್ಲದೆ, ಉದ್ಯೋಗ ಹುಡುಕಿಕೊಂಡು ದಿನವು ನೂರಾರು ಜನರು ರೈಲು, ಬಸ್ಸುಗಳಲ್ಲಿ ಸಂವೃದ್ಧಿ ಕರ್ನಾಟಕಕ್ಕೆ ಬರುತ್ತಿದ್ದಾರೆ. ಕೋಲಾರ ತಾಲ್ಲೂಕಿನ ನರಸಾಪುರ ಮತ್ತು ವೇಮಗಲ್ ಹೋಬಳಿಗಳಲ್ಲಿ ಕೈಗಾರಿಕಾ ಪ್ರದೇಶವಾದ ನಂತರ ಇಲ್ಲಿ ನೂರಾರು ಕಾರ್ಖಾನೆಗಳು, ವಿವಿಧ ಕಂಪನಿಗಳು ಪ್ರಾರಂಬವಾಗಿ


ಎಸ್ಪಿ ಬಿ. ನಿಖಿಲ್


ಡಿವೈಎಸ್ಪಿ ನಂದಕುಮಾರ್

ಸಾವಿರಾರು ಜನ ಯುವಕ-ಯುವತಿಯರು ಉದ್ಯೋಗ ಮಾಡುತ್ತಿದ್ದಾರೆ. ಇಲ್ಲಿ ಕಾರ್ಖಾನೆ ಮತ್ತು ಕಂಪನಿಗಳಲ್ಲಿ ಪ್ರಾರಂಭ ಮಾಡಿರುವ ಬಂಡವಾಳ ಶಾಯಿಗಳು ಕನ್ನಡಗರಿಗೆ ಕೆಲಸ ಕೊಡುವ ಬದಲಿಗೆ ಹೊರರಾಜ್ಯದವರಿಗೆ ಉದ್ಯೋಗ ಕೊಡುವ ಮೂಲಕ ವಲಸೆ ಕೋರರು ಸ್ಥಳೀಯರ ಕೆಲಸಗಳನ್ನು ಕಸಿದುಕೊಳ್ಳುತ್ತಿದ್ದಾರೆ. ಡಾ|| ಸರೋಜಿನಿ ಮಹಿಷಿ ವರದಿ ಆಧಾರದ ಮೇಲೆ ರಾಜ್ಯದಲ್ಲಿನ ಕನ್ನಡಿಗರಿಗೆ ಶೇಕಡ 80ರಷ್ಟು ಉದ್ಯೋಗ ನೀಡಬೇಕಾಗುತ್ತದೆ. ಆದರೆ ಕನ್ನಡಿಗರಿಗೆ ಸಿಗಬೇಕಾದ ಕೆಲಸಗಳು ಅನ್ಯ ರಾಜ್ಯದವರ ಪಾಲಾಗುತ್ತಿದೆ. ಮಾವು ಮತ್ತು ಟಮೋಟೋಗೆ ಹೆಸರುವಾಸಿಯಾದ ಕೋಲಾರ ಜಿಲ್ಲೆಯಲ್ಲಿ ಜ್ಯೂಸ್ ಫ್ಯಾಕ್ಟರಿಗಳು ತಲೆ ಎತ್ತಿ ನಿಂತಿದ್ದು, ಶ್ರೀನಿವಾಸಪುರ ತಾಲ್ಲೂಕಿನ ಯಚ್ಚನಹಳ್ಳಿ ಗ್ರಾಮದ ಬಳಿ ನರಸಿಂಹರೆಡ್ಡಿರವರ ಮಗ ಎಸ್.ಎನ್. ಪ್ರಭಾಕರ್ ರೆಡ್ಡಿರವರ ಮಾಲೀಕತ್ವದಲ್ಲಿ ಎಸ್‌ಎನ್‌ಆರ್ ಫುಡ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಿರುತ್ತಾರೆ. ಶ್ರೀನಿವಾಸಪುರ ಮತ್ತು ಸುತ್ತಮುತ್ತ ಬೆಳೆಯುವ ಮಾವಿನಹಣ್ಣು ಮತ್ತು ಟಮೋಟೋ ಹಣ್ಣನ್ನು ರೈತರಿಂದ ಖರೀದಿಸಿ ಫ್ಯಾಕ್ಟರಿಯಲ್ಲಿ ಜ್ಯೂಸ್ ತೆಗೆದು ಅದನ್ನು ಲಿಕ್ವಿಡ್ ರೂಪದಲ್ಲಿ ರಾಜ್ಯದಲ್ಲಿರುವ ಕೂಲ್ ಡ್ರಿಂಕ್ಸ್ ಫ್ಯಾಕ್ಟರಿಗಳಿಗೆ ಕಳುಹಿಸುವುದಲ್ಲದೆ ಹೊರ ದೇಶಗಳಿಗೆ ಇಲ್ಲಿಂದ ರಫ್ತು ಮಾಡುತ್ತಿದ್ದಾರೆ. ಎಸ್‌ಎನ್‌ಆರ್ ಜ್ಯೂಸ್ ಫ್ಯಾಕ್ಟರಿಯಲ್ಲಿ ಹೊರರಾಜ್ಯದಿಂದ ಬಂದಿರುವ ಕಾರ್ಮಿಕರು ಹೆಚ್ಚಿಗೆ ಕೆಲಸ ಮಾಡಿಕೊಂಡಿದ್ದು, ಇವರೆಲ್ಲರೂ ಫ್ಯಾಕ್ಟರಿಯ ಪಕ್ಕದಲ್ಲಿ ನಿರ್ಮಿಸಿರುವ ಕ್ವಾಟ್ರಸ್‌ಗಳಲ್ಲಿ ವಾಸವಾಗಿರುತ್ತಾರೆ. ಇಲ್ಲಿನ ಫ್ಯಾಕ್ಟರಿಯಲ್ಲಿ ಎರಡು ಲೇಬರ್ ಕಾಂಟ್ರಾಕ್ಟರ್‌ನ ಕೂಲಿ ಕಾರ್ಮಿಕರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುತ್ತಾರೆ. ಇವರಲ್ಲಿ ಮಧ್ಯಪ್ರದೇಶದ ಉಬೇಜ್ ಆಲಿಖಾನ್ ಲೇಬರ್ ಕಾಂಟ್ರಾಕ್ಟರ್‌ರವರ ಕಡೆಯಿಂದ 15 ಕೂಲಿ ಕಾರ್ಮಿಕರು, ಉತ್ತರಪ್ರದೇಶದ ಉಮೇಜ್‌ಖಾನ್ ಕಾಂಟ್ರಾಕ್ಟರ್‌ರವರ ಕಡೆಯಿಂದ 35 ಜನ ಕೂಲಿ ಕಾರ್ಮಿಕರು, ರಾಜಸ್ಥಾನ್‌ನ ಸುಮನ್‌ದೇವಿ ಲೇಬರ್ ಕಂಟ್ರಾಕ್ಟರ್‌ರವರ ಕಡೆಯಿಂದ 11 ಜನ ಕೂಲಿ ಕಾರ್ಮಿಕರು ಸೇರಿದಂತೆ ಸ್ಥಳೀಯ ಕೂಲಿ ಕಾರ್ಮಿಕರು ಕೆಲಸ ಮಾಡುತ್ತಿರುತ್ತಾರೆ.


ಪಿಐ ಎಂ.ಬಿ. ಗೊರವನ ಕೊಳ್ಳ


ಪಿಎಸ್‌ಐ ಜಯರಾಮ್

ದೂರದ ರಾಜ್ಯಗಳಿಂದ ಬಂದಿರುವ ಕೂಲಿ ಕಾರ್ಮಿಕರ ವಾಸಕ್ಕಾಗಿ ನಿರ್ಮಿಸಿರುವ ಶೆಡ್‌ಗಳಲ್ಲಿ ವಾಸವಾಗಿರುತ್ತಾರೆ. ಕ್ವಾಟ್ರಸ್‌ಗಳಲ್ಲಿ ವಾಸ ಇರುವವರಲ್ಲಿ ಕೆಲವರು ವಿವಾಹಿತರಾಗಿದ್ದು ಹೆಂಡತಿ, ಮಕ್ಕಳೊಂದಿಗೆ ವಾಸವಿರುತ್ತಾರೆ. ಇನ್ನು ಕೆಲವರು ಅವಿವಾಹಿತರಿದ್ದು, ಅವರು ಪ್ರತ್ಯೇಕ ಶೆಡ್‌ಗಳಲ್ಲಿ ವಾಸವಿರುತ್ತಾರೆ. ಅವಿವಾಹಿತರಲ್ಲಿ ಕೆಲವರು ರಾತ್ರಿ ಹೊತ್ತು ಕುಡಿದುಕೊಂಡು ಬಂದು ಕ್ವಾಟ್ರಸ್‌ನಲ್ಲಿ ಕ್ಷುಲ್ಲಕ ಕಾರಣಕ್ಕೆಲ್ಲ ಬೈದಾಡಿಕೊಂಡು ಗಲಾಟೆ ಮಾಡಿಕೊಳ್ಳುತ್ತಿರುತ್ತಾರೆ. ಪಕ್ಕದಲ್ಲಿಯೇ ವಾಸವಿರುವ ಸಂಸಾರಸ್ಥ ಕಾರ್ಮಿಕರು ಅವರ ಜಗಳ ಬಿಡಿಸಿ ತಿಳಿಹೇಳಿದರೂ ಅವರ ಮಾತನ್ನು ಕೇಳದೆ ಯಾವಾಗಲೂ ಕಿತ್ತಾಡುತ್ತಾ ಇರುತ್ತಾರೆ. ಈ ಬಗ್ಗೆ ಅಕ್ಕಪಕ್ಕದಲ್ಲಿನ ಶೆಡ್‌ನವರು ಮಾಲೀಕರ ಬಳಿ ಕಂಪ್ಲೆಂಟ್ ಮಾಡಿದ್ದಾಗ ಅವರೆಲ್ಲರನ್ನು ಕರೆಸಿ ಬುದ್ಧಿ ಹೇಳಿದರಲ್ಲದೆ ಇದೇ ರೀತಿ ಕಿತ್ತಾಡಿಕೊಂಡಿದ್ದರೆ ಕೆಲಸದಿಂದ ತೆಗೆದು ಹಾಕುವ ಎಚ್ಚರಿಕೆಯನ್ನೂ ಸಹ ನೀಡಿದ್ದರು.

### ಬೈಕ್ ವಿಚಾರಕ್ಕೆ ನಡೆದ ಕೊಲೆ


ಆರೋಪಿ ರವಿಲಾಲ್

ಶ್ರೀನಿವಾಸಪುರ ತಾಲ್ಲೂಕಿನ, ರೇಣೂರು ಪಂಚಾಯ್ತಿಗೆ ಸೇರಿದ ಸೀಗಹಳ್ಳಿಯ ವಾಸಿ ನಾಗರಾಜರೆಡ್ಡಿರವರ ಮಗ ಎಸ್‌ಎನ್‌ಆರ್ ಜ್ಯೂಸ್ ಫ್ಯಾಕ್ಟರಿಯಲ್ಲಿ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿರುವ ನರಸಿಂಹ ರೆಡ್ಡಿರವರು 2024 ನವೆಂಬರ್ 23ರಂದು ಸಂಜೆ 5.30 ಗಂಟೆಗೆ ಶ್ರೀನಿವಾಸಪುರ ಪೊಲೀಸ್ ಠಾಣೆಗೆ ಹಾಜರಾಗಿ ಇಂದು ಫ್ಯಾಕ್ಟರಿಗೆ ರಜಾ ಇದ್ದಿದ್ದರಿಂದ ಕೂಲಿ ಕಾರ್ಮಿಕರೆಲ್ಲರೂ ಕ್ವಾಟ್ರಸ್‌ನ ಶೆಡ್‌ಗಳಲ್ಲಿಯೇ ಇದ್ದರು. ಮಧ್ಯಾಹ್ನ 1.30ರ ಸಮಯದಲ್ಲಿ ನಾನು ಫ್ಯಾಕ್ಟರಿ ಒಳಗಡೆ ಇದ್ದಾಗ ಕೂಲಿ ಕಾರ್ಮಿಕರು ವಾಸವಿರುವ ಕ್ವಾಟ್ರಸ್‌ನ ಕಡೆಯವರಾದ ರಾಕೇಶ್ ಧುರ್ವೇ ಬಿನ್ ವಿಜಯ್ ಧುರ್ವೆ ಮತ್ತು ರವಿಲಾಲ್ ಬಿನ್ ಲೇಟ್ ರತನ್‌ಲಾಲ್‌ರವರಿಗೂ ಮತ್ತು ಉಬ್ರೇಜ್ ಆಲಿಖಾನ್ ಲೇಬರ್ ಕಾಂಟ್ರಾಕ್ಟರ್ ಕಡೆಯವರಾದ ಅಬು ತಲ್ವಾರವರು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ಹೊಡೆದಾಡಿಕೊಳ್ಳುತ್ತಿದ್ದು, ಅಬು ತಲ್ವಾರವರಿಗೆ ರಾಕೇಶ್ ಧುರ್ವೆ ಮತ್ತು ರವಿಲಾಲ್‌ರವರು ಸೌದೆ ದೊಣ್ಣೆಗಳಿಂದ ಹೊಡೆದಿದ್ದು ಅಬು ತಲ್ವಾ ಕೆಳಗೆ ಬಿದ್ದುಹೋಗಿದ್ದು ಆತನಿಗೆ ಬಲಭಾಗದ ಹಣೆಯ ಮೇಲೆ ಮತ್ತು ಕಣ್ಣಿನ ಬಳಿ ರಕ್ತಗಾಯವಾಗಿದ್ದು, ಕೂಡಲೇ ನಾನು ಮತ್ತು ನಮ್ಮ ಫ್ಯಾಕ್ಟರಿ ಬಳಿ ಇದ್ದ ಕೆಲವರನ್ನು ಕರೆದುಕೊಂಡು ಟಾಟಾ ಏಸ್ ವಾಹನದಲ್ಲಿ ಸ್ಥಳದಲ್ಲಿದ್ದ ಸಾಗರ್ ಬಿನ್ ಲೇಟ್ ಧೀರಜ್ ಸಿಂಗ್ ಮತ್ತು ಅಬ್ದುಲ್ ಮನ್ನಾನ್ ಬಿನ್ ಶಾಹಿರ್ ಮಿಯಾದ್‌ರವರೊಂದಿಗೆ ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ಸೇರಿಸಿದ್ದು, ಅಲ್ಲಿನ ವೈದ್ಯರು ಅಬು ತಲ್ವಾರವರನ್ನು ಪರೀಕ್ಷೆ ಮಾಡಿ ಮಾರ್ಗ ಮಧ್ಯೆಯೇ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ಆದುದರಿಂದ ಅಬು ತಲ್ವಾರವರ ಸಾವಿಗೆ ಕಾರಣರಾಗಿರುವವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ದೂರು ನೀಡಿದರು.

ನರಸಿಂಹ ರೆಡ್ಡಿ ನೀಡಿದ ದೂರನ್ನು ಪಿಎಸ್‌ಐ ಜಯರಾಮ್‌ರವರು ತೆಗೆದುಕೊಂಡು ಮೊ.ಸಂ. 353/2024 ಕಲಂ 103(1) 3(5) ಬಿಎನ್‌ಎಸ್ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡರು. ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿ ನಂದಕುಮಾರ್, ಪಿಐ ಎಂ.ಬಿ. ಗೊರವನಕೊಳ್ಳ ಮತ್ತು ಸಿಬ್ಬಂದಿ ವರ್ಗದವರು ಆಗಮಿಸಿ ಸ್ಥಳದ ಮಹಜರನ್ನು ಪಂಚರ ಸಮಕ್ಷಮದಲ್ಲಿ ನಡೆಸಲಾಯಿತು. ನಂತರ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಹೋಗಿ ಮೃತದೇಹದ ಪಂಚನಾಮೆ ನಡೆಸಿದ ಮೇಲೆ ಶವಪರೀಕ್ಷೆಯಾದ ನಂತರ ಶವವನ್ನು ವಾರಸುದಾರರಿಗೆ ನೀಡಲಾಯಿತು. ಯಾವುದೋ ಕ್ಷುಲ್ಲಕ ಕಾರಣಕ್ಕೆ ಗಲಾಟೆ ನಡೆದು ಕಾರ್ಮಿಕರಿಬ್ಬರು ಮತ್ತೊಬ್ಬ ಕಾರ್ಮಿಕನನ್ನು ಸೌದೆಯ ದೊಣ್ಣೆಯಿಂದ ಹೊಡೆದು ಸಾಯಿಸಿ ಪರಾರಿಯಾಗಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ಬಿ. ನಿಖಿಲ್, ಡಿವೈಎಸ್ಪಿ ನಂದಕುಮಾರ್‌ರವರ ಮಾರ್ಗದರ್ಶನದಲ್ಲಿ ಪಿಐ ಎಂ.ಬಿ. ಗೊರವನಕೊಳ್ಳರವರ ನೇತೃತ್ವದಲ್ಲಿ ಪಿಎಸ್‌ಐ ಜಯರಾಮ್, ಎಎಸ್‌ಐ ಆರ್.

☞ 5


ಜ್ಯೂಸ್ ಫ್ಯಾಕ್ಟರಿ


# ಗುಂಡ್ಲುಪೇಟೆ : ನೆರೆಮನೆಯವರ ಬ್ಲಾಕ್‌ಮೇಲ್ ಯುವತಿ ಬಲಿ?

**ನೆರೆ ಮನೆಯವರ ಮಾನಸಿಕ ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಡೆತ್ ನೋಟ್ ಬರೆದಿಟ್ಟು ಯುವತಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಯೊಂದು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಚನ್ನಮಲ್ಲೇಪುರ ಗ್ರಾಮದಲ್ಲಿ ನಡೆದಿದ್ದು ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ. ತನಗಾದ ಅನ್ಯಾಯದ ಬಗ್ಗೆ ಯುವತಿ ಹೆತ್ತವರಿಗೆ ತಿಳಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದೆ ಮಾತ್ರೆ ನುಂಗಿ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ತನ್ನ ಇಪ್ಪತ್ತನಾಲ್ಕನೇ ವಯಸ್ಸಿನ ಸುಂದರ ಬದುಕಿಗೆ ಇತಿಶ್ರೀ ಹಾಡಿರುವುದು ದುರಂತವೇ ಸರಿ.**


ಆತ್ಮಹತ್ಯೆಗೆ ಶರಣಾದ ಕವನ

ಬದುಕಿ ಬಾಳ ಬೇಕಾಗಿದ್ದ ಯುವತಿಯೊಬ್ಬಳು ಪಕ್ಕದ ಮನೆಯವರು ಮಾನಸಿಕ ಹಿಂಸೆ ನೀಡಿದರೆಂಬ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರುವುದು ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಕೂಲಿ ಕೆಲಸ ಮಾಡಿ ಬದುಕುತ್ತಿದ್ದ ಕುಟುಂಬ ಮಗಳಿಗೆ ಯಾವುದೇ ತೊಂದರೆ ಬಾರದಂತೆ ನೋಡಿಕೊಂಡಿದ್ದರು. ಆದರೀಗ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದರಿಂದ ಕಂಗಾಲಾಗಿದ್ದು, ನೆರೆ ಮನೆಯವರಿಗೆ ಹಿಡಿ ಶಾಪ ಹಾಕುತ್ತಿದ್ದಾರೆ. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಚನ್ನಮಲ್ಲೇಪುರ ಗ್ರಾಮದ ಗಾಯತ್ರಿ ಎಂಬುವರ ಪುತ್ರಿ ಕವನ (24) ಮಾತ್ರೆ ನುಂಗಿ ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ ಯುವತಿ.

ಕವನ ಮಾತ್ರೆ ನುಂಗಿ ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ಬಿಳಿ ಹಾಳೆಯಲ್ಲಿ ಹಾಗೂ ಬಾಗಿಲ ಹಿಂಭಾಗದಲ್ಲಿ ನನ್ನ ಸಾವಿಗೆ ನೆರೆ ಮನೆಯ ಕಾವೇರಿ, ಕೀರ್ತಿ, ಕವಿತ, ವೃಷಬೇಂದ್ರ ಕಾರಣ ಎಂದು ಡೆತ್ ನೋಟ್ ಬರೆದಿಟ್ಟಿದ್ದಾಳೆ. ಹೀಗಾಗಿ ಅದರ ಆಧಾರದ ಮೇಲೆ ಆಕೆಯ ತಾಯಿ ಗಾಯತ್ರಿ ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ತೆರಳಿ ನನ್ನ ಮಗಳ ಸಾವಿಗೆ ವೃಷಬೇಂದ್ರ, ಮತ್ತು ಆತನ ಪತ್ನಿ ಕವಿತ, ಮಕ್ಕಳಾದ ಕಾವೇರಿ, ಕೀರ್ತಿ ಕಾರಣರಾಗಿದ್ದಾರೆ ಎಂದು ದೂರು ನೀಡಿದ್ದಾರೆ.





ಸದ್ಯ ಗಾಯತ್ರಿ ನೀಡಿದ ದೂರಿನ ಮೇರೆಗೆ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತ (ಬಿಎನ್‌ಎಸ್)ಯಡಿ ಯು/ಎಸ್ 108,3 (5) ಪ್ರಕರಣವನ್ನು ವೃಷಬೇಂದ್ರ, ಮತ್ತು ಕುಟುಂಬದ ವಿರುದ್ದ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

**ಮೈಸೂರು**
✍ ಬಿ.ಎಂ. ಲವಕುಮಾರ್

ಇಷ್ಟಕ್ಕೂ ನಡೆದ ಘಟನೆ ಏನು ಎಂಬುದನ್ನು ನೋಡಿದ್ದೇ ಆದರೆ ಜನವರಿ 25ರಂದು ಮೃತ ಕವನಳ ತಾಯಿ ಗಾಯತ್ರಿ ಕೂಲಿ ಕೆಲಸಕ್ಕೆ ಹೋಗಿದ್ದ ವೇಳೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಸಲುವಾಗಿ ಮನೆಯ ಎರಡು ಬಾಗಿಲಿಗೆ ಚಿಲಕ ಹಾಕಿ ಮಾತ್ರೆ ನುಂಗಿ ನಿತ್ರಾಣಳಾಗಿದ್ದಳು. ಅಲ್ಲದೆ, ಮನೆಯಿಂದ ಹೊರಗಿದ್ದ ಸಹೋದರಿ ಕಾವ್ಯಗೆ ಮೊಬೈಲ್‌ನಲ್ಲಿ ವಿಡಿಯೋ ಕಾಲ್ ಮಾಡಿ ನನಗೆ ಅವಮಾನವಾಗಿದೆ ಹೀಗಾಗಿ ಮಾತ್ರೆ ನುಂಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಹೇಳಿದ್ದಾಳೆ ಎಂದು ಹೇಳಲಾಗಿದೆ.

ಕೂಡಲೇ ಸಹೋದರಿ ಕಾವ್ಯ ಕೆಲಸಕ್ಕೆ ಹೋಗಿದ್ದ ತಾಯಿ ಗಾಯತ್ರಿಗೆ ಮೊಬೈಲ್ ಮೂಲಕ ಸಂಪರ್ಕಿಸಿ ಕವನ ಮಾತ್ರೆ ನುಂಗಿದ್ದಾಗಿ ಹೇಳಿರುವ ವಿಷಯವನ್ನು ತಿಳಿಸಿ, ಕೂಡಲೇ ಮನೆಗೆ ಹೋಗುವಂತೆ ಹೇಳಿದ್ದಾಳೆ. ವಿಷಯ ತಿಳಿದು ಗಾಯತ್ರಿ ಮನೆಗೆ ಹೋಗಿ ನೋಡಿದಾಗ ಮನೆಯ ಬಾಗಿಲಿಗೆ ಚಿಲುಕ ಹಾಕಲಾಗಿತ್ತು. ಸ್ಥಳೀಯರ ಸಹಕಾರದಿಂದ ಬಾಗಿಲು ತೆರೆದು ನೋಡಿದಾಗ ಮಾತ್ರೆ ನುಂಗಿದ ಕವನ ಸಂಪೂರ್ಣ ಅಸ್ವಸ್ಥಗೊಂಡ ಸ್ಥಿತಿಯಲ್ಲಿದ್ದಳು.

ಕೂಡಲೇ ಕವನಳನ್ನು ಆಸ್ಪತ್ರೆಗೆ ದಾಖಲಿಸುವ ಕೆಲಸ ಮಾಡಿದ್ದಾರೆ. ಆದರೆ ಅದಾಗಲೇ ನಿತ್ರಾಣಗೊಂಡಿದ್ದ ಆಕೆಗೆ ವೈದ್ಯರು ಚಿಕಿತ್ಸೆ ನೀಡಿ ಉಳಿಸುವ ಪ್ರಯತ್ನ ಮಾಡಿದರೂ ಅದು ಸಾಧ್ಯವಾಗಲಿಲ್ಲ, ಕೊನೆಗೂ ಚಿಕಿತ್ಸೆ ಫಲಕಾರಿಯಾಗದೆ ಕವನ ಮೃತಪಟ್ಟಿದ್ದಾಳೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸಿ ನೆರೆಮನೆಯವರು ಯಾವ ರೀತಿಯ ಅವಮಾನ ಮಾಡಿದರು ಎಂಬುದರ ಬಗ್ಗೆ ಬಹಿರಂಗಪಡಿಸಬೇಕಿದೆ. ಆಕೆ ಡೆತ್‌ನೋಟ್‌ನಲ್ಲಿ ಬರೆದಿಟ್ಟಂತೆ ಯಾವುದೋ ಫೇಕ್ ಚಾಟ್ ಇಟ್ಟುಕೊಂಡು ನನ್ನನ್ನು ಬ್ಲಾಕ್ ಮೇಲ್ ಮಾಡುತ್ತಿದ್ದಾರೆ. ಇದರಿಂದ ಮಾನಸಿಕ ಹಿಂಸೆಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಹೇಳಿದ್ದಾಳೆ. ಹಾಗಾದರೆ ಏನಿದು ಚಾಟ್? ಯಾರ ಜತೆ ಚಾಟ್ ಮಾಡಿದ್ದಾಳೆ? ಬ್ಲಾಕ್ ಮೇಲ್ ಮಾಡುವಂತಹದ್ದೇನಿತ್ತು ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಬೇಕಿದೆ.



ಅದು ಏನೇ ಇರಲಿ ತನಗಾದ ಅನ್ಯಾಯದ ವಿರುದ್ಧ ಪೊಲೀಸರಿಗೆ ದೂರು ನೀಡಿ ಅದಕ್ಕೆ ಪರಿಹಾರ ಕಂಡುಕೊಳ್ಳುವ ಬದಲಿಗೆ ಆತ್ಮಹತ್ಯೆ ಮಾಡಿಕೊಂಡಿರುವುದು ನಿಜಕ್ಕೂ ಬೇಸರದ ಸಂಗತಿ ಯಾರೂ ಇಂತಹ ಕೃತ್ಯಕ್ಕೆ ಕೈಹಾಕದಿರಲಿ ಎನ್ನುವುದೇ ಆಶಯ.

---

4 ☞ ಮಂಜುನಾಥ್, ಸಿಬ್ಬಂದಿ ವರ್ಗದವರಾದ ಹೆಚ್‌ಸಿಗಳಾದ ಆನಂದ್‌ಕುಮಾರ್, ರಾಮಚಂದ್ರ, ಪಿಸಿಗಳಾದ ಹರೀಶ್, ಪತ್ರಿ ಬಸಪ್ಪ, ಸಂಪತ್ ಮುಂತಾದವರ ತಂಡದವರನ್ನು ರಚಿಸಲಾಗಿದ್ದು, ಆರೋಪಿಗಳಾದ ರಾಕೇಶ್ ಧುರ್ಬೇ ಹಾಗೂ ರವಿಲಾಲ್ ಇಬ್ಬರು ಅಬುತಲ್ವಾನನ್ನು ಕೊಲೆ ಮಾಡಿ ಮಧ್ಯಪ್ರದೇಶಕ್ಕೆ ಪರಾರಿಯಾಗಿರುವ ಬಗ್ಗೆ ಪೊಲೀಸ್ ಬಾತ್ಮಿದಾರರು ನೀಡಿದ ಮಾಹಿತಿ ಮೇರೆಗೆ ಕ್ರೈಂ ತಂಡವು ಅವರನ್ನು ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ಒಳಪಡಿಸಲಾಗಿ ಎ1 ಆರೋಪಿ ರಾಕೇಶ್ ಧುರ್ಬೇ ಮತ್ತು ಎ2 ಆರೋಪಿ ರವಿಲಾಲ್‌ನ ಕುಟುಂಬಗಳು ಅಕ್ಕಪಕ್ಕದಲ್ಲಿಯೇ ವಾಸವಾಗಿರುತ್ತವೆ. ಅಬು ತಲ್ವಾ ಮತ್ತು ಶಬು ತಲ್ವಾ ಇಬ್ಬರು ಅಣ್ಣತಮ್ಮಂದಿರು. ಇವರಿಬ್ಬರು ರಾಕೇಶ್ ಧುರ್ಬೇರವರ ಮನೆಯ ಪಕ್ಕದಲ್ಲಿಯೇ ಇರುವ ಶೆಡ್‌ನಲ್ಲಿ ವಾಸವಾಗಿರುತ್ತಾರೆ.


ಎಎಸ್‌ಐ ಆರ್. ಮಂಜುನಾಥ್

23ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಅಬು ತಲ್ವಾನ ತಮ್ಮ ಶಬು ತಲ್ವಾ ಶ್ರೀನಿವಾಸಪುರ ಪಟ್ಟಣಕ್ಕೆ ಹೋಗಿ ಬರಬೇಕಾಗಿದ್ದರಿಂದ ರಾಕೇಶ್ ಧುರ್ಬೇನ ಬಳಿಗೆ ಹೋಗಿ ನಮ್ಮ ಬೈಕ್‌ನಲ್ಲಿ ಪೆಟ್ರೋಲ್ ಮುಗಿದಿದೆ, ಅದಕ್ಕೆ ನಾನು ಟೌನ್‌ಗೆ ಹೋಗಿ ಬರಬೇಕು ನಿನ್ನ ಬೈಕ್ ಕೊಡುವಂತೆ ಕೇಳುತ್ತಾನೆ. ಅದಕ್ಕೆ ರಾಕೇಶ್ ಧುರ್ಬೇ ಬೈಕ್ ಕೊಡುವುದಿಲ್ಲವೆಂದು ಹೇಳುತ್ತಾನೆ. ಆಗ ಶಬು ತಲ್ವಾ ನಮ್ಮ ಬೈಕನ್ನು ಕೇಳದೆಯೇ ತೆಗೆದುಕೊಂಡು ಹೋಗುತ್ತೀಯ, ಈಗ ನಿನ್ನ ಬೈಕ್ ಕೊಡು ಎಂದು ಕೇಳಿದಕ್ಕೆ ಮೀನಾ-ಮೇಷ ಎಣಿಸುತ್ತಿದ್ದೀಯ ಎಂದು ಹೇಳಿಇದನು. ಈ ವಿಚಾರದಲ್ಲಿ ಇಬ್ಬರ ನಡುವೆ ಜಗಳವಾಗಿ ಕಿತ್ತಾಟ ಮಾಡಿಕೊಳ್ಳುತ್ತಿದ್ದರು. ಅದೇ ಸಮಯಕ್ಕೆ ಶೆಡ್‌ನಿಂದ ಹೊರಬಂದ ಅಬು ತಲ್ವಾ ತಮ್ಮನ ಪರವಾಗಿ ನಿಂತುಕೊಂಡು, ಬೈಕ್ ಕೇಳಿದಕ್ಕೆ ನನ್ನ ತಮ್ಮನ ಮೇಲೆ ಜಗಳ ಮಾಡುತ್ತಿರುವೆ, ಮನೆ ಮುಂದೆ ನಿಲ್ಲಿಸಿರುವ ಬೈಕನ್ನು ಕೇಳದೆಯೇ ತೆಗೆದುಕೊಂಡು ಹೋಗುವಾಗ ನಮ್ಮನ್ನು ಕೇಳಬೇಕೆಂದು ನಿನಗೆ ಅನಿಸಿಲ್ಲವೆ ಎಂದನು. ಆಗ ರಾಕೇಶ್ ಧುರ್ಬೇಗೆ ಕೋಪ ಬಂದು ಚಪ್ಪಲಿ ಎತ್ತಿಕೊಂಡು ಅಬು ತಲ್ವಾನಿಗೆ ಹೊಡೆದನು. ತಕ್ಷಣ ಶಬು ತಲ್ವಾ ತನ್ನ ಚಪ್ಪಲಿ ತೆಗೆದು ರಾಕೇಶ್ ಧುರ್ಬೇಗೆ ಹೊಡೆದನು. ಇದರಿಂದ ಕಿತ್ತಾಟ ಜೋರಾಯಿತು. ಆಗ ಶೆಡ್ ಒಳಗೆ ಇದ್ದ ರಾಕೇಶವ ಧುರ್ಬೇನ ಹೆಂಡತಿ ಮತ್ತು ತಾಯಿ ಹೊರಬಂದು ರಾಕೇಶವ ಧುರ್ಬೇನ ಪರ ನಿಂತರು. ಎರಡು ಗುಂಪಿನ ನಡುವೆ ಜಗಳ ತಾರಕಕ್ಕೇರಿ ಅಲ್ಲಿಯೇ ಬಿದ್ದಿದ್ದ ಸೌದೆ ಚೆಕ್ಕೆಯನ್ನು ತೆಗೆದುಕೊಂಡು ಬಂದ ರಾಕೇಶ್ ಧುರ್ಬೇ ಅಬು ತಲ್ವಾನ ತಲೆ ಮತ್ತು ಮುಖಕ್ಕೆ ಬಲವಾಗಿ ಹೊಡೆದು ಅಲ್ಲಿಂದ ಪರಾರಿಯಾಗಿರುವ ಬಗ್ಗೆ ಹೇಳಿದರು. ಆರೋಪಿಗಳಿಂದ ಹೇಳಿಕೆ ಪಡೆದ ನಂತರ ಕೃತ್ಯ ನಡೆಸಿದ ಸ್ಥಳಕ್ಕೆ ಅವರಿಬ್ಬರನ್ನು ಕರೆದುಕೊಂಡು ಹೋಗಿ ಸ್ಥಳದ


ಮೃತ ಅಬು ತಲ್ವಾ ತಲೆಗೆ ಗಾಯವಾಗಿರುವುದು

ಮಹಜರ್ ನಡೆಸಿದ ಮೇಲೆ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

### ದಕ್ಷಿಣ ಕನ್ನಡ : ಮೂಗನಂತೆ ನಟಿಸಿ ಕುಡಿಯಲು ನೀರು ಕೇಳುವ ನೆಪದಲ್ಲಿ

# ಮನೆಗೆ ನುಗ್ಗಿ ವೃದ್ಧ ದಂಪತಿಗಳನ್ನು ಅಮಾನುಷವಾಗಿ ಕೊಲೆಗೈದು ಚಿನ್ನಾಭರಣ, ನಗದು ದೋಚಿದ್ದ ಕ್ರೂರ ಹಂತಕನಿಗೆ ಜೀವಾವಧಿ ಶಿಕ್ಷೆ

**ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಚಾರ್ಮಾಡಿ ಗ್ರಾಮದ ಕಕ್ಕಿಂಜೆ ಕೆರಿಕಲ್‌ನಲ್ಲಿ 2016 ನವೆಂಬರ್ ತಿಂಗಳ 10ರಂದು ರಾತ್ರಿ 11ರಿಂದ ಬೆಳಗಿನ ಜಾವ 3 ಗಂಟೆಯ ನಡುವೆ ವೃದ್ಧ ದಂಪತಿಗಳು ಇಬ್ಬರೇ ವಾಸಿಸುತ್ತಿರುವ ಮನೆಯನ್ನು ಟಾರ್ಗೆಟ್ ಮಾಡಿದ್ದ ಮಹಾದುಷ್ಟ. ಮೂಗನಂತೆ ನಟಿಸುತ್ತ ನೀರು ಕೇಳುವ ನೆಪದಲ್ಲಿ ಮನೆಗೆ ನುಗ್ಗಿದ ದುಷ್ಟ ಯುವಕ ದಂಪತಿಗಳಿಬ್ಬರನ್ನು ಅಮಾನುಷವಾಗಿ ಕೊಲೆಗೈದು ಮನೆಯ ಬೀರುವಿನಲ್ಲಿದ್ದ 25 ಪವನ್ ಚಿನ್ನಾಭರಣ, ನಗದು ದೋಚಿ ಪರಾರಿಯಾಗಿದ್ದನು. ಇತ್ತೀಚೆಗೆ ಮಂಗಳೂರಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ (ವಿಶೇಷ) ನ್ಯಾಯಾಲಯದಲ್ಲಿ ಕೊಲೆ ಮತ್ತು ಸುಲಿಗೆ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಪ್ರೀತಿ ಕೆ.ಪಿ. ಅವರು ಹಂತಕನಿಗೆ ಜೀವಾವಧಿ ಶಿಕ್ಷೆ ಮತ್ತು ದಂಡ ವಿಧಿಸಿ ಆದೇಶಿಸಿದ್ದಾರೆ.**

ಸಮಾಜದಲ್ಲಿ ಪ್ರಾಮಾಣಿಕವಾಗಿ ಬದುಕುವುದಕ್ಕೆ ನೂರಾರು ದಾರಿಗಳಿದ್ದರೂ ಮನುಷ್ಯ ದುರಾಸೆಯ ಬೆನ್ನು ಬಿದ್ದು ದಿಢೀರನೇ ಹಣ ಗಳಿಸಿ ಶ್ರೀಮಂತನಾಗಬೇಕು ಎನ್ನುವ ತವಕದಲ್ಲಿ ತನಗೆ ಗೊತ್ತಿಲ್ಲದೇ ಅಪರಾಧ ಜಗತ್ತಿಗೆ ಎಂಟ್ರಿ ಕೊಡುತ್ತಾನೆ. ಅಪರಾಧ ಜಗತ್ತಿನ ಚಕ್ರವ್ಯೂಹದೊಳಗೆ ಸಿಲುಕಿ


ರಾಜು ಕಲ್ಲವಡ್ಡರನಿಗೆ ಬಲಿಯಾದ ನಿಷ್ಪಾಪಿ ದಂಪತಿಗಳು ವರ್ಕಿ ಕೆ.ವಿ. ಮತ್ತು ಎಲಿ ಕುಟ್ಟಿ

ಅಪರಾಧದ ಮೇಲೆ ಅಪರಾಧ ಎಸಗುತ್ತಲೇ ಹೋಗಿ ನಿಷ್ಪಾಪಿ ವೃದ್ಧ ದಂಪತಿಗಳನ್ನು ಅಮಾನುಷವಾಗಿ ಕೊಲೆಗೈದು ಇದೀಗ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ವಿಕ್ಷಿಪ್ತ ಮನಸ್ಸಿನ ವಿಲಕ್ಷಣ ವ್ಯಕ್ತಿತ್ವದ ರಾಜು ಕಲ್ಲವಡ್ಡರ ಎಂಬ ಪರಮ ಘಾತುಕನ ಕಥೆಯ ಹೂರಣವನ್ನು 'ಪೊಲೀಸ್ ನ್ಯೂಸ್' ಓದುಗರಿಗಾಗಿ ನೀಡಿದೆ.

**ಯಾರೀತ ದುಷ್ಟ ಹಂತಕ...**

ಉತ್ತರ ಕರ್ನಾಟಕದ ಗದಗ ಜಿಲ್ಲೆಯ ಗದಗ ಪಟ್ಟಣದ ಬಿಸಿಕೇರಿ ಓಣಿಯ ನಿವಾಸಿಯಾಗಿದ್ದ ರಾಜು ಕಲ್ಲವಡ್ಡರ ಅಲಿಯಾಸ್ ರಾಜೇಶ್ (37) ಎಂಬಾತನೇ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದಾನೆ. ಈತ ವಡ್ಡರ ಎಂಬ ಪರಿಶಿಷ್ಟ ಜಾತಿಗೆ ಸೇರಿದ್ದವನು. ಹಂತಕ ರಾಜೇಶನು 2015ರಲ್ಲಿ ಬೆಳ್ತಂಗಡಿ ತಾಲ್ಲೂಕು ನೆರಿಯ ಗ್ರಾಮದ ಬಾಂಜಾರು ಮಲೆ ಎಂಬಲ್ಲಿ ಡ್ಯಾಂ ಕೆಲಸಕ್ಕೆಂದು ಬಂದು ಇತರ ಕೂಲಿ ಕಾರ್ಮಿಕರು ಮತ್ತು ಗರ್ಭಿಣಿ ಪತ್ನಿ ಜತೆ ಕೆಲಸದ ಸ್ಥಳದ ಸಮೀಪದಲ್ಲಿ ಶೆಡ್‌ನಲ್ಲಿ ವಾಸವಾಗಿದ್ದನು. ಗಂಭೀರ ಅಪರಾಧ ಹಿನ್ನೆಲೆಯ ರಾಜು ಕಲ್ಲವಡ್ಡರ ಇನ್ನೂ ಅಪ್ರಾಪ್ತನಿರುವಾಗಲೇ ಅಪರಾಧ ಕೃತ್ಯಗಳನ್ನು ಎಸಗಿದ್ದು. ಕ್ರಮೇಣ ಈತ 18 ವಯಸ್ಸಿನ ನಂತರದಲ್ಲಿ ಹುಬ್ಬಳ್ಳಿ, ಧಾರವಾಡ, ಗದಗ, ಹಾವೇರಿ ಮುಂತಾದ ಕಡೆಗಳಲ್ಲಿ 9 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದನು.

**ಒಂಟಿ ಮನೆಯಲ್ಲಿನ ವೃದ್ಧ ದಂಪತಿಗಳು...**

ಮಂಗಳೂರು ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಚಾರ್ಮಾಡಿ ಗ್ರಾಮದ ಕಕ್ಕಿಂಜೆ ಕೆರಿಕಲ್‌ನಲ್ಲಿ ಒಂಟಿ ಮನೆಯಲ್ಲಿ ವೃದ್ಧ ದಂಪತಿಗಲಾದ ವರ್ಕಿ ಕೆ.ವಿ. (85 ವ), ಎಲಿ ಕುಟ್ಟಿ (80 ವ) ಎಂಬಿಬ್ಬರು ವಾಸವಾಗಿದ್ದರು. ಇವರಿಬ್ಬರು ದಂಪತಿಗಳಿಗೆ ನಾಲ್ಕು ಜನ ಮಕ್ಕಳಿದ್ದರೂ ಕೂಡಾ ಅವರೆಲ್ಲ ವಿದೇಶದಲ್ಲಿದ್ದರು. ಇನ್ನೂ ದುಬೈನಲ್ಲಿದ್ದ ಮಗಳು ಆ್ಯನಿ ಆಗಾಗ ವೃದ್ಧ ತಂದೆತಾಯಿಗಳನ್ನು ನೋಡಲು ಬಂದು ಹೋಗುತ್ತಿದ್ದಳು. ಮತ್ತು ಇವರಿಗೆ ಕೈ ತುಂಬಾ ಹಣ ಕೂಡಾ ಕಳಿಸುತ್ತಿದ್ದಳು. ಇವರ ಯೋಗಕ್ಷೇಮ ನೋಡಿಕೊಳ್ಳಲು, ಮನೆಗೆಲಸ ಮಾಡಲು ಕೆಲಸದವರನ್ನು ಕೂಡಾ ನೇಮಿಸಲಾಗಿತ್ತು. ಆದರೆ ಅವರು ದಿನವೆಲ್ಲಾ ಇದ್ದು ರಾತ್ರಿ ತಮ್ಮ ಮನೆಗೆ ಹೋಗುತ್ತಿದ್ದರು. ಈ ವೃದ್ಧ ದಂಪತಿಗಳು ತಮ್ಮ ಪಾಡಿಗೆ ತಾವು ಆರೋಗ್ಯವಂತರಾಗಿದ್ದರು.

✍ ಮನ್ನಾಪೂರ

**ಒಂಟಿ ಮನೆಗಳನ್ನೇ ಟಾರ್ಗೆಟ್...**

2015ರಲ್ಲಿ ಬೆಳ್ತಂಗಡಿ ತಾಲ್ಲೂಕಿನ ನೆರಿಯ ಗ್ರಾಮದ ಬಾಂಜಾರು ಮಲೆಯಲ್ಲಿ ಡ್ಯಾಂ ಕೆಲಸ ಮಾಡಿಕೊಂಡಿದ್ದ ಮಹಾದುಷ್ಟ ರಾಜು ಕಲ್ಲವಡ್ಡರ ವೃದ್ಧ ದಂಪತಿಗಳು ವಾಸಿಸುತ್ತಿದ್ದ ಒಂಟಿ ಮನೆಯನ್ನೇ ಟಾರ್ಗೆಟ್ ಮಾಡಿದ್ದ. ಸುಮಾರು ಸಲ ಒಂಟಿ ಮನೆಯತ್ತ ಹೋಗಿ ಬಂದಿದ್ದನು. ವೃದ್ಧ ದಂಪತಿಗಳು ಸ್ಥಿತಿವಂತರು ಎಂಬುದನ್ನು ಅರಿತ ದುಷ್ಟ ಹೇಗಾದರೂ ಸರಿ ಅವರನ್ನು ಕೊಲೆ ಮಾಡಿಯಾದರು ಮನೆ ದೋಚಬೇಕೆಂದು ತಣ್ಣಗೆ ಸ್ಕೇಚ್ ಹಾಕಿದನು.

### ಜೈಲಿಗೆ ಕರೆ ತರುವಾಗಲೂ...

ಹುಟ್ಟಿನಿಂದಲೂ ಅಪರಾಧ ಕೃತ್ಯಗಳನ್ನು ಎಸಗುತ್ತಲೇ ಬಂದಿದ್ದ ಹಂತಕ ರಾಜು ಕಲ್ಲವಡ್ಡರ ಕಾರಾಗ್ರಹ ಮತ್ತು ಪೊಲೀಸರ ಮೇಲೂ ಹಲ್ಲೆ ನಡೆಸಿದ್ದನು. ವೃದ್ಧ ದಂಪತಿ ಕೊಲೆ, ಸುಲಿಗೆ ಪ್ರಕರಣದಲ್ಲಿ ಈತನಿಗೆ ಜಾಮೀನು ಸಿಕ್ಕಿರಲಿಲ್ಲ. ಬೇರೊಂದು ಪ್ರಕರಣದ ವಿಚಾರಣೆಗಾಗಿ ಧಾರವಾಡಕ್ಕೆ ಕರೆದೊಯ್ದು ಮಂಗಳೂರಿಗೆ ವಾಪಸ್ ಕರೆತರುವಾಗ 2019 ಜನವರಿ 4ರಂದು ಅಂಕೋಲಾದಲ್ಲಿ ಪೊಲೀಸರಿಗೆ ಚಳ್ಳೇಹಣ್ಣು ತಿನ್ನಿಸಿ ತಪ್ಪಿಸಿಕೊಂಡಿದ್ದನು. ಬಳಿಕ ಈತನನ್ನು ಗೋವಾದಲ್ಲಿ ಪತ್ತೆಹಚ್ಚಿ ಬಂಧಿಸಿ ಕರೆ ತರಲಾಗಿತ್ತು. ಈ ಪ್ರಕರಣದಲ್ಲಿ ದುಷ್ಟನಿಗೆ ಶಿಕ್ಷೆಯಾಗಿದೆ. ☯

**ಮೂಗನಂತೆ ನೀರು ಕೇಳಿದ್ದ...**

ತಾನು ಮೂಗನಂತೆ ನಟಿಸುತ್ತ ನೀರು ಕೇಳುವ ನೆಪ ಮಾಡಿಕೊಂಡು 2016 ನವೆಂಬರ್ 10ನೇ ತಾರೀಖು ರಾತ್ರಿ 11 ಗಂಟೆಯ ನಂತರ ತಾನಿದ್ದ ಶೆಡ್‌ನಿಂದ ಯಾರಿಗೂ ಗೊತ್ತಾಗದಂತೆ ವೃದ್ಧ ದಂಪತಿಗಳು ವಾಸಿಸುವ ಮನೆ ಪ್ರವೇಶಿಸಿದ್ದಾನೆ. ಅಲ್ಲಿ ಮೂಗನಂತೆ ನಟಿಸುತ್ತ ನೀರು ಕೇಳಿದ್ದಾನೆ. ವೃದ್ಧ ದಂಪತಿಗಳು 'ಅಯ್ಯೋ ಪಾಪ...' ಎಂದು ನೀರು ಕೊಟ್ಟಿದ್ದಾರೆ.

**ವೃದ್ಧ ದಂಪತಿಗಳನ್ನು ಕೊಂದು ಹಾಕಿದನು...**

ನೀರು ಕುಡಿದು ನನಗೆ ದಾರಿ ಸಿಗುತ್ತಿಲ್ಲ ದಾರಿ ತೋರಿಸಿ ಎಂದು ಸನ್ನೆ ಮಾಡಿದಾಗ ವರ್ಕಿ ಕೆ.ವಿ. ಕೈಯಲ್ಲಿ ಬ್ಯಾಟರಿ ಹಿಡಿದು ಮುಂದೆ ದಾರಿ ತೋರಿಸುತ್ತ ಸುಮಾರು ದೂರ ನಡೆದಿದ್ದಾರೆ. ವರ್ಕಿ ಅವರ ಊರುಗೋಲನ್ನು ಕಸಿದುಕೊಂಡ ದುಷ್ಟ ರಾಜು ಕಲ್ಲವಡ್ಡರ ಏಕಾಏಕಿ ಹಲ್ಲೆ ನಡೆಸಿ, ಗಂಭೀರವಾಗಿ ಗಾಯಗೊಳಿಸಿ ಅವರು ತೊಟ್ಟಿದ್ದ ಪಂಚೆಯಿಂದ ಕತ್ತು ಬಿಗಿದು ಕೊಂದು ಹಾಕಿ ನೇರವಾಗಿ ಮತ್ತೇ ಮನೆ ಪ್ರವೇಶಿಸಿ ಬೀರುವಿನಲ್ಲಿ ಚಿನ್ನಾಭರಣ, ನಗದು ಹಣಕ್ಕಾಗಿ ತಡಕಾಡುವಾಗ ವೃದ್ಧೆ ಎಲಿಕುಟ್ಟಿ ಅಡ್ಡ ಬಂದಿದ್ದಾಳೆ. ಹಂತಕ ರಾಜು ಮನೆಯಲ್ಲಿದ್ದ ಮರದ ದೊಣ್ಣೆಯಿಂದ ಹಲ್ಲೆ ನಡೆಸಿ ಬಟ್ಟೆಯಿಂದ ಕುತ್ತಿಗೆ ಬಿಗಿದು ಉಸಿರುಗಟ್ಟಿಸಿ ಕೊಂದಿದ್ದಾನೆ. ನಂತರ ಬೀರುವಿನಲ್ಲಿದ್ದ 25 ಪವನ್ ಚಿನ್ನ ಸೇರಿದಂತೆ ನಗದು ಹಣ ಎಗರಿಸಿ ಪರಾರಿಯಾಗಿದ್ದಾನೆ. ಮರುದಿನ ತನ್ನ ಹೆಂಡತಿಯೊಂದಿಗೆ ತನ್ನ ಊರು ಸೇರಿಕೊಂಡು ಚಿಕ್ಕಮ್ಮನ ಹತ್ತಿರ ಕದ್ದ ಚಿನ್ನಾಭರಣ ಭದ್ರವಾಗಿ ಇರಿಸಿದ್ದಾನೆ. ಮರುದಿನ ಬೆಳಗಾಗುವುದರಲ್ಲಿ ವೃದ್ಧ ದಂಪತಿಗಳ ಕೊಲೆ ಮತ್ತು ಮನೆ ಸುಲಿಗೆ ಪ್ರಕರಣ ಮಾರ್ದನಿಸಿತು.

**ಉಡುಪಿಯಲ್ಲಿ ಬಂಧನ...**

ಬೆಳ್ತಂಗಡಿಯ ಅಂದಿನ ಡಿವೈಎಸ್ಪಿ ರಾಹುಲಕುಮಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಸಾಕ್ಷ್ಯಾಧಾರ ಮತ್ತು ಮಾಹಿತಿ ಸಂಗ್ರಹಿಸಿ ಹಂತಕನಿಗಾಗಿ ಬಲೆ ಬೀಸಿದ್ದರು. ವೃದ್ಧ ದಂಪತಿಗಳ ಕೊಲೆ ಮಾಡಿ ಆರು ದಿನಗಳ ನಂತರ ಉಡುಪಿಗೆ ಪರ್ಯಾಯ ನಡೆಯುತ್ತಿದ್ದ ವೇಳೆ ಬಂದಿದ್ದನು. ಅಲ್ಲಿ ಡಿವೈಎಸ್ಪಿ ರಾಹುಲಕುಮಾರ ಅವರ ತಂಡ ಹಂತಕ ರಾಜು ಕಲ್ಲವಡ್ಡರನನ್ನು ಬಂಧಿಸಿತ್ತು. ಆತನಿಂದ ದರೋಡೆ ಮಾಡಿದ್ದ ಬಂಗಾರ ಜಪ್ತಿ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಹಂತಕ ತಾನು ಮಾಡಿದ ವೃದ್ಧ ದಂಪತಿಗಳ ಕೊಲೆ, ಚಿನ್ನಾಭರಣ, ನಗದು ದರೋಡೆ ಪ್ರಕರಣವನ್ನು ಒಪ್ಪಿಕೊಂಡನು. ನಂತರ ಹೊಸದಾಗಿ ಬೆಳ್ತಂಗಡಿ ಉಪ ವಿಭಾಗಕ್ಕೆ ಡಿವೈಎಸ್ಪಿ ಆಗಿ ಬಂದಿದ್ದ ಭಾಸ್ಕರ ರೈ ಎನ್.ಜಿ. ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿದ್ದರು.

**ಜೀವಾವಧಿ ಶಿಕ್ಷೆ, 10 ಸಾವಿರ ರೂ. ದಂಡ...**

ಹಂತಕ ರಾಜು ಕಲ್ಲವಡ್ಡರನ ಮೇಲೆ ಐಪಿಸಿ ಸೆಕ್ಷನ್ 302, 392ರ ಅಡಿಯಲ್ಲಿ ನ್ಯಾಯಾಲಯಕ್ಕೆ ವಿವರವಾದ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿತ್ತು. 2018 ನವೆಂಬರ್ 13ರಂದು ಪ್ರಕರಣದ ವಿಚಾರಣೆ ಆರಂಭಗೊಂಡಿತ್ತು. ಅಭಿಯೋಜನೆಯ ಪರ ಒಟ್ಟು 38 ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿತ್ತು. ಹಿಂದಿನ ಸರಕಾರಿ ಅಭಿಯೋಜಕ ಶೇಖರ ಶೆಟ್ಟಿ ಕೆಲವು ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದರು. 2021ರಿಂದ ಉಳಿದ ಸಾಕ್ಷಿದಾರರನ್ನು ಸರಕಾರಿ ಅಭಿಯೋಜಕಿ ಜ್ಯೋತಿ ಪ್ರಮೋದ ನಾಯಕ್ ವಿಚಾರಣೆ ಮಾಡಿ ಸಮರ್ಥವಾಗಿ ವಾದ ಮಂಡಿಸಿದ್ದರು.

ವಿಚಾರಣೆ ಮುಗಿಸಿದ ಮಂಗಳೂರಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶೆ ಪ್ರೀತಿ ಕೆ.ಪಿ. ಪ್ರಕರಣದ ಸಾಕ್ಷ್ಯಾಧಾರಗಳನ್ನು ಗಂಭೀರವಾಗಿ ಪರಿಗಣಿಸಿ ಆರೋಪಿ ರಾಜು ಕಲ್ಲವಡ್ಡರಗೆ ದರೋಡೆ ಪ್ರಕರಣಕ್ಕೆ ಐಪಿಸಿ 392ನೇದ್ದಕ್ಕೆ 10 ವರ್ಷಗಳ ಕಾಲ ಕಠಿಣ ಶಿಕ್ಷೆ, 10 ಸಾವಿರ ರೂ. ದಂಡ ವಿಧಿಸಿದ್ದಾರೆ. ದಂಡ ಪಾವತಿಸಲು ವಿಫಲವಾದರೆ ಮತ್ತೆ ಮೂರು ತಿಂಗಳು ಕಠಿಣ ಶಿಕ್ಷೆ ಅನುಭವಿಸಬೇಕು. ಇನ್ನು ವೃದ್ಧ ದಂಪತಿಗಳ ಕೊಲೆ ಪ್ರಕರಣ. ಐಪಿಸಿ 302 ರಡಿ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ಹಾಗೂ ದಂಡ ಪಾವತಿಸಲು ವಿಫಲನಾದಲ್ಲಿ 3 ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿ ನ್ಯಾಯಾಧೀಶರು ತೀರ್ಪು ನೀಡಿದ್ದಾರೆ. ಎರಡು ಶಿಕ್ಷೆಗಳನ್ನು ಒಂದರ ನಂತರ ಒಂದರಂತೆ ಅನುಭವಿಸಲು ಆದೇಶಿಸಲಾಗಿದೆ. ಅಪರಾಧಿ ದಸ್ತಗಿರಿಯಾದ ಕಾಲದಿಂದ ಈವರೆಗೂ ನ್ಯಾಯಾಂಗ ಬಂಧನದಲ್ಲಿರುವ ಅವಧಿಯನ್ನು ಕಡಿತಗೊಳಿಸಿ ಉಳಿದ ಅವಧಿಗೆ ಕಠಿಣ ಶಿಕ್ಷೆ ಅನುಭವಿಸಲು ಆದೇಶ ಹೊರಡಿಸಲಾಗಿದೆ. ☯


ಜೀವಾವಧಿ ಶಿಕ್ಷೆಗೆ ಗುರಿಯಾದ ರಾಜು ಕಲ್ಲವಡ್ಡರ

### ಪ್ರಕರಣಕ್ಕೆ ಬಲ ನೀಡಿದ ವಿಕ್ಸ್ ಡಬ್ಬ...

ಪೊಲೀಸರಿಗೆ ಹಂತಕ ರಾಜು ಕಲ್ಲವಡ್ಡರ ಪತ್ತೆ ಭಾರೀ ಸವಾಲಾಗಿತ್ತು. ಆದರೆ ಬೆರಳಚ್ಚು ಬಲವಾದ ಸಾಕ್ಷ್ಯ ಒದಗಿಸಿತ್ತು. ಆರೋಪಿ ಬೀರುವಿನಲ್ಲಿದ್ದ ಚಿನ್ನಾಭರಣಗಳನ್ನು ಪಡೆದುಕೊಳ್ಳುವಾಗ ಅದರಲ್ಲಿದ್ದ ವಿಕ್ಸ್ ವೆಪೊರಬ್ ಡಬ್ಬವನ್ನು ಕೂಡಾ ಹಿಡಿದಿದ್ದ. ಅದರಲ್ಲಿ ಆತನ ಬೆರಳಚ್ಚು ಸ್ಪಷ್ಟವಾಗಿ ಮುದ್ರೆ ಆಗಿತ್ತು. ಬೆರಳಚ್ಚು ವಿಭಾಗದ ಡಿವೈಎಸ್ಪಿ ಗೌರೀಶ್ ಅವರು ಚಾಣಾಕ್ಷತನದಿಂದ ಪತ್ತೆ ಮಾಡಿದ್ದರು. ಕೊಲೆ ಮಾಡಿ, ಚಿನ್ನಾಭರಣ ದೋಚಿದ್ದ ರಾಜು ಕಲ್ಲ ವಡ್ಡರ ಅದೇ ಊರಿನ ಹೋಟೆಲ್‌ಗಳಲ್ಲಿ ಬೆಳಿಗ್ಗೆ ಚಹಾ ಕುಡಿದಿದ್ದನು. ಒಂದು ಕಡೆಗೆ ಸರಿಯಾಗಿಲ್ಲವೆಂದು ಮತ್ತೊಂದು ಹೋಟೆಲ್‌ನಲ್ಲಿ ಚಹಾ ಕುಡಿದಿದ್ದನು. ಆ ಬಳಿಕ ರಿಕ್ಷಾದವರಲ್ಲಿ ತನ್ನನ್ನು ಶೆಡ್‌ಗೆ ಬಿಡಲು ಹೇಳಿದ್ದನು. ಇವೆಲ್ಲ ಘಟನೆಗಳು ಶಿಕ್ಷೆಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ☯

# ಬೇನಾಮಿ ರೈತರ ಹೆಸರಿನಲ್ಲಿ ಲೂಟಿ ಮಾಡಿದ ಆರ್‌ಡಿಸಿಸಿ!

ರಾಯಚೂರು

✎ವೀರನಗೌಡ

ಆರ್‌ಡಿಸಿಸಿ ಶಾಖೆಯ ವ್ಯವಸ್ಥಾಪಕರು, ಸಿಬ್ಬಂದಿ, ವೃತ್ತ ನಿರೀಕ್ಷಕರು ಹಾಗೂ ಆಡಳಿತ ಮಂಡಳಿಯವರು ಅಕ್ರಮ ಕೂಟ ಕಟ್ಟಿಕೊಂಡು, ಪೂರ್ವ ತಯಾರಿಯೊಂದಿಗೆ, ಬ್ಯಾಂಕಿಗೆ ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರದ ಸಹಕಾರಿ ಇಲಾಖೆಗೆ ಹಣಕಾಸು/ಆರ್ಥಿಕ ನಷ್ಟ ಮಾಡುವ ಉದ್ದೇಶದಿಂದ ಕರ್ತವ್ಯಕ್ಕೆ ಹಾಗೂ ಬ್ಯಾಂಕಿನ ನಿಯಮಾವಳಿಗಳಿಗೆ ಮಣ್ಣೆರಚಿ ನಾಲ್ಕು ಜನ ಬೇನಾಮಿ ರೈತರ ಹೆಸರಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಬೇನಾಮಿ ರೈತರ ಬೇನಾಮಿ ಖಾತೆಗೆ ಸಾಲದ ಹಣ ಮಂಜೂರು ಮಾಡಿಕೊಂಡು ಹಣ ಎತ್ತಿ ತಿಂದವರ ವಿರುದ್ಧ ಕಾನೂನು ಕ್ರಮಕ್ಕಾಗಿ ಆಗ್ರಹ.



ಅಧ್ಯಕ್ಷ ವಿಶ್ವನಾಥ ಪಾಟೀಲ್

ರಾಯಚೂರು ಜಿಲ್ಲಾ ಸಹಕಾರಿ ಸಂಘ (ಆರ್‌ಡಿಸಿಸಿ) ರಾಯಚೂರು ಕೇಂದ್ರ ಕಛೇರಿ ಅಡಿ ಸಿಂಧನೂರಿನಲ್ಲಿ ಆರ್‌ಡಿಸಿಸಿಯ ಶಾಖಾ ಬ್ಯಾಂಕ್‌ನಲ್ಲಿ ರಾಜ್ಯ ಹಾಗೂ ಕೇಂದ್ರ ಸರಕಾರ ನೀಡುವ ಶೂನ್ಯ ಬಡ್ಡಿ ಸಾಲದ ಮೊತ್ತವನ್ನು ಸಿಂಧನೂರು ತಾಲೂಕಿನ ವಿವಿಧ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ಮಂಜೂರು ಮಾಡುವುದು ಬ್ಯಾಂಕಿನ ಪ್ರಮುಖ ಉದ್ದೇಶವಾಗಿರುತ್ತದೆ. ಸಾಲ ನೀಡುವ ಮುನ್ನ ಸಾಲ ಕೋರಿದ ರೈತನು ಹೊಂದಿದ ಹಿಡುವಳಿ ಮತ್ತು ಅದರ ಮೇಲಿನ ಋಣಭಾರಗಳನ್ನು, ಆತ ಸಲ್ಲಿಸುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ತದನಂತರವೇ ಸದರಿ ಬ್ಯಾಂಕ್ ತನ್ನ ಖಾತೆಯಿಂದ ಸಂಬಂಧಪಟ್ಟ ಸಾಲಗಾರರಿಗೆ ಸಾಲ ಮಂಜೂರಿ ಮಾಡುವುದು ಕಾನೂನು ಪ್ರಕಾರ ಕಡ್ಡಾಯವಾಗಿರುತ್ತದೆ.

ಆದರೆ, ಆರ್‌ಡಿಸಿಸಿ ಸಿಂಧನೂರು ಶಾಖಾ ಬ್ಯಾಂಕಿನಲ್ಲಿ ಸಾಲಮಂಜೂರಾತಿ, ಭದ್ರತಾ ಆಸ್ತಿಪತ್ರ, ಕೃಷಿ ಜಮೀನಿನ ಪಾರದರ್ಶಕತೆ, ಸಾಲ ಕೋರಿದವರಿಗೆ ಸಂಬಂಧಿಸಿದ ದಾಖಲಾತಿಗಳ ಪರಿಶೀಲನೆ ಇದಾವುದು ಇಲ್ಲದೆ 4 ಜನ ಬೇನಾಮಿ ರೈತರ ಹೆಸರಲ್ಲಿ 3675104-00 (ಮೂವತ್ತಾರು ಲಕ್ಷ ಎಪ್ಪತ್ತೈದು ಸಾವಿರ ನೂರನಾಲ್ಕು ರೂಪಾಯಿ) ಶೂನ್ಯ ಬಡ್ಡಿ ಸಾಲವನ್ನು ಆರ್‌ಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷ ವಿಶ್ವನಾಥ ಪಾಟೀಲ ತಂದೆ ಅಮರಣ್ಣ ಸಾ|| ತೋರಣದಿನ್ನಿ, ಕೆ. ಶರಣಪ್ಪ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಾ. ಕೃ.ಪ.ಸ. ಸಂಘ ಹಂಪನಾಳ, ಸಿಂಧನೂರು ಬ್ಯಾಂಕಿನ ಸಹಾಯಕ ವ್ಯವಸ್ಥಾಪಕ ಪಿ. ವೀರೇಶ್, ಸಿಂಧನೂರು ಬ್ಯಾಂಕಿನ ಸಹಾಯಕ ವ್ಯವಸ್ಥಾಪಕಿ ವಾಣಿಶ್ರೀ ಹಾಗೂ ಸಿಂಧನೂರು ಬ್ಯಾಂಕಿನ ವೃತ್ತ ನಿರೀಕ್ಷಕ ಕೆ. ಬಸವರಾಜ ಇವರೆಲ್ಲರು ಸೇರಿ ಬೇನಾಮಿ ರೈತರ, ಬೇನಾಮಿ ಭೂಮಿ, ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಈ ಅಪರಾಧ ಎಸಗಿರುತ್ತಾರೆ. ಅವರ ವಿವರ ಈ ಕೆಳಗಿನಂತಿದೆ. ಮಲ್ಲಿಕಾರ್ಜುನ ಸ್ವಾಮಿ ತಂದೆ ಬಸಯ್ಯ ಸ್ವಾಮಿ ಸಾ||ಮೇರನಾಳ ತಾ|| ಮಸ್ಕಿ ಇವರ ಹೆಸರಲ್ಲಿ ಸಾಲ ಮಂಜೂರಿಯಾಗಿದೆ. ಈ ವ್ಯಕ್ತಿ ಇದ್ದಾರೋ ಇಲ್ಲವೋ ನಮಗೆ ತಿಳಿದಿಲ್ಲ, ಆದರೆ, ಇವರು ಸಾಲ ಮಂಜೂರಿಗಾಗಿ ತೋರಿಸಿದ ಕೃಷಿ ಜಮೀನು ಮಾನ್ವಿ ತಾಲೂಕು ಕುರ್ಡಿ ಹೊಬಳಿಯ ಗೋರಕಲ್ ಗ್ರಾಮ ಸ.ನಂ. 44/3 ವಿಸ್ತೀರ್ಣ 12-00 ಎಕರೆ ಎಂದಿರುತ್ತದೆ. ಪಹಣಿ ಪತ್ರಿಕೆ, ಸಬ್‌ರಿಜಿಸ್ಟರ್‌ನಲ್ಲಿ ಮಾರ್ಟಗೇಜ್ ಡೀಡ್ ಹಾಗೂ ಲಗತ್ತಿಸಲಾದ ಎಲ್ಲಾ ದಾಖಲಾತಿಗಳು ಸಾಲ ಮಂಜೂರಾತಿ ಪತ್ರದೊಂದಿಗೆ ಇವೆ. ಅಂದರೆ, ಮೇಲಿನ ಕೃಷಿ ಜಮೀನಿನ ದಾಖಲಾತಿ ಆಧಾರದ ಮೇಲೆ ಈತನಿಗೆ ಬ್ಯಾಂಕಿನ ಕೆಪಿಸಿ ಖಾತೆ: 191/20 ರಿಂದ ಈ ಬೇನಾಮಿ ರೈತನ ಬೇನಾಮಿ ಖಾತೆ: 0012003000 55542ಗೆ ದಿ:22-03-2021ರಂದು 300000-00 ರೂ ಸಾಲದ ಹಣ ಜಮೆಯಾಗಿ ಕೇವಲ ಮೂರೇ ದಿನದಲ್ಲಿ ವಿಥ್ಡ್ರಾ ಮಾಡಲಾಗಿದೆ. ಈ ಬೇನಾಮಿ ರೈತನ ಬೇನಾಮಿ ಖಾತೆಗೆ ದಿ: 22-.0-2021ರಿಂದ 07-12-2022ರ ಅವಧಿಯಲ್ಲಿ ಒಟ್ಟು 1100378-00 ರೂ ಹಾಕಿ ಹಣ ತೆಗೆಯಲಾಗಿದೆ. ಆದರೆ, ಈ ಸಾಲಗಾರ ತೋರಿಸಿದ ಕೃಷಿ ಭೂಮಿ ಬೇರೆಯವರ ಹೆಸರಲ್ಲಿದೆ. ಈ ಭೂಮಿಯ ಮಾಲೀಕರು ಮಲ್ಲಿಕಾರ್ಜುನ ತಂದೆ ಸೂಗಣ್ಣ ಎಂಬುವವರಾಗಿದ್ದಾರೆ. ಸದರಿ ಭೂಮಿಯ ನಿಜವಾದ ವಿಸ್ತೀರ್ಣವು 4 ಎಕರೆ 24 ಗುಂಟೆ ಇದೆ. ಅದರೆ, ಬ್ಯಾಂಕಿಗೆ ಸಲ್ಲಿಸಿದ ಪಹಣಿಯಲ್ಲಿ 12-00ಎಕರೆ ಎಂದಿದೆ. ಅಂದರೆ, ಜೀನೂರು ಗ್ರಾಮದ ಅಮಾಯಕ ರೈತರ ಪಹಣಿ ಪಡೆದು, ಅದನ್ನು ಮಲ್ಲಿಕಾರ್ಜುನ ಸ್ವಾಮಿ ಹೆಸರಿಗೆ ನಕಲಿ ಪಹಣಿ ಪತ್ರ, ತಯಾರು ಮಾಡಲಾಗಿದೆ. ಭೂಮಿಯ ವಿಸ್ತೀರ್ಣವನ್ನು ಹೆಚ್ಚಿಸಲಾಗಿದೆ.



ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.

ಅಲ್ಲದೆ, ಸಿಂಧನೂರು ಉಪನೊಂದಣಿ ಕಾರ್ಯಾಲಯಕ್ಕೆ ಹೋಗದೆಯೆ, ಮಾರ್ಟಗೇಜ್ ಡೀಡ್‌ನ್ನು ಉಪನೊಂದಣಾಧಿಕಾರಿಗಳ ನಕಲಿ ಸೀಲು ಹಾಗೂ ಸಹಿ ಸಮೇತ ತಯಾರಿಸಲಾಗಿದೆ. ಈ ಮೂಲಕ ದಾಖಲಾತಿಗಳ ಸೃಷ್ಠಿ ಪರಿಶೀಲನೆ ಪ್ರಕ್ರಿಯೆ ಎಲ್ಲವನ್ನು ಮೇಲೆ ತೋರಿಸಲಾದ ಆರು ಜನ ಆರೋಪಿಗಳು ಸೇರಿಕೊಂಡು ಸಂಘಟಿತ ಅಪರಾಧ ಎಸಗಿರುತ್ತಾರೆ.ಮಲ್ಲಿಕಾರ್ಜುನ ಸ್ವಾಮಿ ತಂದೆ ಬಸಯ್ಯಸ್ವಾಮಿ ಸಾ|| ಮೇರನಾಳ ತಾ|| ಮಸ್ಕಿ ಇವರ ಹೆಸರಲ್ಲಿ ಸಾಲ ಮಂಜೂರಿಯಾಗಿದೆ. ಈ ವ್ಯಕ್ತಿ ಇದ್ದಾರೋ ಇಲ್ಲವೋ ನಮಗೆ ತಿಳಿದಿಲ್ಲ, ಆದರೆ, ಇವರು ಸಾಲ ಮಂಜೂರಿಗಾಗಿ ತೋರಿಸಿದ ಕೃಷಿ ಜಮೀನು ಮಾನ್ವಿ ತಾಲೂಕು ಕುರ್ಡಿ ಹೊಬಳಿಯ ಗೋರಕಲ್ ಗ್ರಾಮ ಸ.ನಂ. 44/3 ವಿಸ್ತೀರ್ಣ 12-00 ಎಕರೆ ಎಂದಿರುತ್ತದೆ. ಪಹಣಿ ಪತ್ರಿಕೆ, ಸಬ್‌ರಿಜಿಸ್ಟರ್‌ನಲ್ಲಿ ಮಾರ್ಟಗೇಜ್ ಡೀಡ್ ಹಾಗೂ ಲಗತ್ತಿಸಲಾದ ಎಲ್ಲಾ ದಾಖಲಾತಿಗಳು ಸಾಲ ಮಂಜೂರಾತಿ ಪತ್ರದೊಂದಿಗೆ ಇವೆ. ಅಂದರೆ, ಮೇಲಿನ ಕೃಷಿ ಜಮೀನಿನ ದಾಖಲಾತಿ ಆಧಾರದ ಮೇಲೆ ಈತನಿಗೆ ಬ್ಯಾಂಕಿನ ಕೆಪಿಸಿ ಖಾತೆ: 191/20 ರಿಂದ ಈ ಬೇನಾಮಿ ರೈತನ ಬೇನಾಮಿ ಖಾತೆ: 001200300055542ಗೆ ದಿ:22-03-2021ರಂದು 300000-00 ರೂ. ಸಾಲದ ಹಣ ಜಮೆಯಾಗಿ ಕೇವಲ ಮೂರೇ ದಿನದಲ್ಲಿ ವಿಥ್ಡ್ರಾ ಮಾಡಲಾಗಿದೆ. ಈ ಬೇನಾಮಿ ರೈತನ ಬೇನಾಮಿ ಖಾತೆಗೆ ದಿ: 22-.0-2021ರಿಂದ 07-12-2022ರ ಅವಧಿಯಲ್ಲಿ ಒಟ್ಟು 1100378-00 ರೂ ಹಾಕಿ ಹಣ ತೆಗೆಯಲಾಗಿದೆ. ಆದರೆ, ಈ ಸಾಲಗಾರ ತೋರಿಸಿದ ಕೃಷಿ ಭೂಮಿ ಬೇರೆಯವರ ಹೆಸರಲ್ಲಿದೆ. ಈ ಭೂಮಿಯ ಮಾಲೀಕರು ಮಲ್ಲಿಕಾರ್ಜುನ ತಂದೆ ಸೂಗಣ್ಣ ಎಂಬುವವರಾಗಿದ್ದಾರೆ. ಸದರಿ ಭೂಮಿಯ ನಿಜವಾದ ವಿಸ್ತೀರ್ಣವು 4 ಎಕರೆ 24 ಗುಂಟೆ ಇದೆ. ಅದರೆ, ಬ್ಯಾಂಕಿಗೆ ಸಲ್ಲಿಸಿದ ಪಹಣಿಯಲ್ಲಿ 12-00ಎಕರೆ ಎಂದಿದೆ. ಅಂದರೆ, ಜೀನೂರು ಗ್ರಾಮದ ಅಮಾಯಕ ರೈತರ ಪಹಣಿ ಪಡೆದು, ಅದನ್ನು ಮಲ್ಲಿಕಾರ್ಜುನ ಸ್ವಾಮಿ ಹೆಸರಿಗೆ ನಕಲಿ ಪಹಣಿ ಪತ್ರ ತಯಾರು ಮಾಡಲಾಗಿದೆ. ಭೂಮಿಯ ವಿಸ್ತೀರ್ಣವನ್ನು ಹೆಚ್ಚಿಸಲಾಗಿದೆ. ಅಲ್ಲದೆ, ಸಿಂಧನೂರು ಉಪನೊಂದಣಿ ಕಾರ್ಯಾಲಯಕ್ಕೆ ಹೋಗದೆಯೆ, ಮಾರ್ಟಗೇಜ್ ಡೀಡ್‌ನ್ನು ಉಪನೊಂದಣಾಧಿಕಾರಿಗಳ ನಕಲಿಸೀಲು ಹಾಗೂ ಸಹಿ ಸಮೇತ ತಯಾರಿಸಲಾಗಿದೆ. ಈ ಮೂಲಕ ದಾಖಲಾತಿಗಳ ಸೃಷ್ಠಿ ಪರಿಶೀಲನೆ ಪ್ರಕ್ರಿಯೆ ಎಲ್ಲವನ್ನು ಮೇಲೆ ತೋರಿಸಲಾದ ಆರು ಜನ ಆರೋಪಿಗಳು ಸೇರಿಕೊಂಡು ಸಂಘಟಿತ ಅಪರಾಧ ಎಸಗಿರುತ್ತಾರೆ. ಶಾಂತಮ್ಮ ಗಂಡ ಬಸಯ್ಯಸ್ವಾಮಿ ಸಾ. ಮೇರಿನಾಳ ತಾಲೂಕು ಮಸ್ಕಿ ಇವರ ಹೆಸರಲ್ಲಿ ಸಾಲ ಮಂಜೂರಿಯಾಗಿದೆ. ಆದರೆ ಈ ವ್ಯಕ್ತಿಯ ಅಸ್ತಿತ್ವದ ಬಗ್ಗೆ ನಮಗೆ ಅನುಮಾನವಿದೆ.



ಆದರೆ ಸಾಲ ಮಂಜೂರಿಗಾಗಿ ಒತ್ತೆ ಇಟ್ಟ ಕೃಷಿ ಜಮೀನು ಮಾನ್ವಿ ತಾಲೂಕು ಹಿರೇಕೊಟ್ನೆಕಲ್ ಹೋಬಳಿ ಜೀನೂರು ಗ್ರಾಮ ಸರ್ವೆ ನಂಬರ್ 104/12 ವಿಸ್ತೀರ್ಣ 13 ಎಕರೆ ಎಂದು ತೋರಿಸಲಾಗಿದೆ. ಪಹಣಿ ಪತ್ರಿಕೆ ಸಬ್‌ರಿಜಿಸ್ಟರ್‌ನ ಮಾರ್ಟ್ ಗೇಜ್ ಲೀಡ್ ಹಾಗೂ ಲಗತ್ತಿಸಲಾದ ಎಲ್ಲಾ ದಾಖಲಾತಿಗಳು ಸಾಲ ಮಂಜೂರಾತಿ ಪತ್ರದೊಂದಿಗೆ ಇವೆ. ಅಂದರೆ ಮೇಲಿನ ದಾಖಲಾತಿ ಆಧಾರದ ಮೇಲೆ ಇವರಿಗೆ ಬ್ಯಾಂಕಿನ ಕೆಪಿಸಿ ಖಾತೆ 191/20 ರಿಂದ ಈ ಬೇನಾಮಿ ರೈತನ ಖಾತೆ 001200300055541ಗೆ ದಿ 06-04-2022 ರಂದು 300000-00 ರೂ. ಸಾಲ ಮಂಜೂರಿ ಮಾಡಿಕೊಳ್ಳಲಾಗಿದೆ. ಮತ್ತು ಈ ಮೊತ್ತವನ್ನು ಒಂದು ವಾರದೊಳಗೆ ವಿತ್ ಡ್ರಾ ಮಾಡಲಾಗಿದೆ. ಒಟ್ಟಾರೆ ದಿ. 22 -3- 2021 ರಿಂದ ದಿ 7.12.2022ರ ಅವಧಿಯಲ್ಲಿ ಒಟ್ಟು 899618-00ರೂ ಹಣ ಹಾಕಿ ತೆಗೆಯಲಾಗಿದೆ. ಆದರೆ, ಈ ಸಾಲಗಾರ ತೋರಿಸಿದ ಕೃಷಿ ಭೂಮಿಯ ಮಾಲೀಕರು ಬೇರೆಯೇ ಆಗಿರುತ್ತಾರೆ. ಈ ಕೃಷಿ ಭೂಮಿಯ ಅಸಲಿ ಮಾಲೀಕರು ಶಾಂತಮ್ಮ ಗಂಡ ಮುದುಕಯ್ಯ ಜೀನೂರು ಎಂಬುವವರಾಗಿರುತ್ತಾರೆ.

ಸದರಿ ಭೂಮಿಯ ಅಸಲಿ ಭೂ ವಿಸ್ತೀರ್ಣವು ಕೇವಲ 3-00 ಎಕರೆಯಾಗಿರುತ್ತದೆ. ಆದರೆ ಬ್ಯಾಂಕಿಗೆ ಸಲ್ಲಿಸಿದ ನಕಲಿ ಪಹಣೆಯಲ್ಲಿ 13-00 ಎಕರೆ ಎಂದು ತೋರಿಸಲಾಗಿದೆ. ಅಂದರೆ ಜೀನೂರು ಗ್ರಾಮದ ಮುಗ್ಧ ರೈತರ ಪಹಣಿಯನ್ನು ಭೂ ಮಾಲೀಕರಿಗೆ ಗೊತ್ತಾಗದಂತೆ ಪಹಣಿ ಕೇಂದ್ರದಿಂದ ಪಡೆದು ಅದನ್ನು ಅಕ್ರಮವಾಗಿ ತಿದ್ದುಪಡಿ ಮಾಡಿಕೊಂಡು ನಕಲಿ ಭೂ ಮಾಲೀಕರನ್ನು ಸೃಷ್ಟಿಸಲಾಗಿದೆ. ಇವರು ಸಲ್ಲಿಸಿದ ಮಾರ್ಟಗೇಜ್ ಡೀಡ್ ಸಬ್‌ರಿಜಿಸ್ಟರ್ ಕಾರ್ಯಾಲಯದಲ್ಲಿ ಬೇರೆಯವರ ಹೆಸರಲ್ಲಿದೆ. ಡೀಡ್ ಸಮೇತ ಸಹಿ ಹಾಗೂ ಸೀಲು ಸೇರಿ ಎಲ್ಲವೂ ಬ್ಯಾಂಕಿನ ಮೇಲ್ಕಂಡ ಆರೋಪಿಗಳು ಸೃಷ್ಟಿ ಮಾಡಿದವುಗಳಾಗಿವೆ. ಆದ್ದರಿಂದ ಮೇಲಿನ ಈ ಆರು ಜನ ಆರೋಪಿಗಳು ಸೇರಿಕೊಂಡು ಈ ಅಪರಾಧ ವೆಸಗಿರುತ್ತಾರೆ. ನಾಲ್ಕನೇಯವರು ನೀಲಮ್ಮ ಗಂಡ ಹನುಮಂತಪ್ಪ ಸಾ|| ನಂಜಲದಿನ್ನಿ ತಾ|| ಮಸ್ಕಿ ಎಂಬುವವರಾಗಿರುತ್ತಾರೆ. ಇವರ ಆಧಾರ ಸಂಖ್ಯೆ: 371100933152 ಇರುತ್ತದೆ. ಇವರಿಗೆ ಕೃಷಿ ಜಮೀನು ಇರುವುದಿಲ್ಲ, ಈ ವ್ಯಕ್ತಿ ಇದ್ದಾರೋ ಇಲ್ಲವೋ ನಮಗೆ ತಿಳಿಯದು. ಆದರೆ, ಸಾಲ ಮಂಜೂರಾತಿ ಅರ್ಜಿಯೊಂದಿಗೆ ಲಗತ್ತಿಸಲಾದ ದಾಖಲೆಗಳಲ್ಲಿ ತೋರಿಸಲಾದ ಜಮೀನು ಮಾನ್ವಿ ತಾಲೂಕು ಕುರ್ಡಿ ಹೋಬಳಿ ಉಮಳಿ ಹೊಸೂರು ಗ್ರಾಮದ ಸ.ನಂ. 47, 03-15 ಎಕರೆ ಆಗಿರುತ್ತದೆ. ಇದರ ನಿಜವಾದ ಮಾಲಕರು ನೀಲಮ್ಮ ಗಂಡ ಮಾರೆಪ್ಪ ಉಮಳಿ ಹೊಸೂರು ಎಂಬುವವರಾಗಿರುತ್ತಾರೆ. ಆದರೆ, ಸದರಿ ಆರೋಪಿಗಳು, ಸದರಿ ಜಮೀನಿನ ಮಾಹಿತಿಯನ್ನು ಮಾಲೀಕರಿಗೆ ಗೊತ್ತಾಗದಂತೆ ಪಡೆದು, ನಕಲಿ ಪಹಣಿಯನ್ನು ನಂಜಲದಿನ್ನಿ ನೀಲಮ್ಮನ ಹೆಸರಲ್ಲಿ ನಕಲಿ ಸೃಷ್ಟಿಸಿ 3ಎಕರೆ 15ಗುಂಟೆ ಇರುವ ಜಮೀನನ್ನು 17ಎಕರೆ 36ಗುಂಟೆ ಎಂದು ತಿದ್ದುಪಡಿ ಮಾಡಿ ಮೋಸ ಮಾಡಿರುತ್ತಾರೆ. ಅಲ್ಲದೆ, ಸಾಲ ಮಾಜೂರಾತಿಗಾಗಿ ಸಲ್ಲಿಸಿದ ಎಲ್ಲಾ ದಾಖಲೆಗಳು ನಕಲಿ ಸೃಷ್ಟಿಯಾಗಿವೆ. ಮಾರ್ಟಗೇಜ್ ಡೀಡ್ ಕೂಡ ನಕಲಿಯಾಗಿದೆ. ಸದರಿದವರ ಖಾತೆಗೆ ದಿ:02-09-2021ರಿಂದ 28-12-2022ರ ವರೆಗೆ ಒಟ್ಟು 837542-00ರೂ ಮಂಜೂರಿ ಮಾಡಿ ವಿತ್ ಡ್ರಾ ಮಾಡಲಾಗಿದೆ.

ಮೇಲಿನ ಆರೋಪಿಗಳು ರಾಜ್ಯ ಹಾಗೂ ಕೇಂದ್ರ ಸರಕಾರದ ಶೂನ್ಯ ಬಡ್ಡಿ ಸಹಾಯಧನದ ಹಣ ಕೊಳ್ಳೆ ಹೊಡೆದು, ಬ್ಯಾಂಕ್ನ್ನೂ ಆರ್ಥಿಕ ಸಂಕಟಕ್ಕೆ ದೂಡಿರುತ್ತಾರೆ. ಕಂದಾಯ, ಸಬ್‌ರಿಜಿಸ್ಟರ್ ದಾಖಲಾತಿಗಳನ್ನು ಸೃಷ್ಟಿಸುವುದರ ಮೂಲಕ ನಕಲಿ ಆಸ್ತಿಗಳನ್ನು ತಯಾರಿಸಿರುತ್ತಾರೆ. ಇದು ಅಕ್ಷಮ ಅಪರಾಧವಾಗಿರುತ್ತದೆ. ಇವರೆಲ್ಲರು ಅಕ್ರಮ ಕೂಟ ಕಟ್ಟಿಕೊಂಡು, ಹಣದ ವಂಚನೆಯ ಉದ್ದೇಶ ಇಟ್ಟುಕೊಂಡು, ಸರಕಾರಕ್ಕೆ, ಬ್ಯಾಂಕಿಗೆ ಹಾಗೂ ರೈತರಿಗೆ ಭಾರಿ ಪ್ರಮಾಣದ ಆರ್ಥಿಕ-ಸಾಮಾಜಿಕ ನಷ್ಟವುಂಟು ಮಾಡಿರುತ್ತಾರೆ.

# ಮಾಂಸ ದಂಧೆಗೆ ಥೈಲ್ಯಾಂಡ್ ಲಿಂಕ್!

**ಹೆಣ್ಣು ಹೆಂಡ ಅಂಥ ಮಜಾ ಉಡಾಯಿಸಿಕೊಂಡು ಬರಲು ಥೈಲ್ಯಾಂಡ್‌ಗೆ ಹೋಗುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇನ್ನು ಕೆಲವರು ಆ ಬಗ್ಗೆ ಅವರು ಇವರಿಂದ ಕೇಳಿಕೊಂಡು ಮನಸ್ಸಿನಲ್ಲೇ ಮಂಡಿಗೆ ತಿನ್ನುವವರು ಇಲ್ಲದಿಲ್ಲ. ಆದರೆ ಥೈಲ್ಯಾಂಡ್‌ಗೆ ಹೋಗಲು ಸಾಧ್ಯವಾಗದವರಿಗಾಗಿ ಮೈಸೂರಿಗೆ ಥೈಲ್ಯಾಂಡ್ ಹುಡ್ಗೀರ್‌ನ ಕರೆಯಿಸಿಕೊಂಡು ಪ್ರತಿಷ್ಠಿತ ಹೋಟೆಲ್ ನಲ್ಲಿರಿಸಿ ಅವರ ಜತೆ ಕಬಡ್ಡಿ ಆಡಿಸಿ ಹಣ ಪೀಕಿಸುತ್ತಿದ್ದ ವ್ಯಕ್ತಿಯೊಬ್ಬನ ಅಸಲಿ ಕಥೆ ಬಯಲಾಗಿದೆ. ಅಷ್ಟೇ ಮೈಸೂರಿನ ವೇಶ್ಯಾವಾಟಿಕೆ ಮಗ್ಗಲು ಬದಲಿಸಿರುವುದು ಬೆಳಕಿಗೆ ಬಂದಿದೆ.**





**ಮೈಸೂರು**
✍ಬಿ.ಎಂ. ಲವಕುಮಾರ್

ಮೈಸೂರಿನಲ್ಲಿ ವೇಶ್ಯಾವಾಟಿಕೆ ಹೊಸತೇನಲ್ಲ, ಇಲ್ಲಿ ವೇಶ್ಯಾವಾಟಿಕೆಗೆ ಸಂಬಂಧಿಸಿದಂತೆ ಆಗಾಗ್ಗೆ ಪ್ರಕರಣಗಳು ಬೆಳಕಿಗೆ ಬರುತ್ತಲೇ ಇರುತ್ತವೆ. ಬೀದಿಯಿಂದ ಆರಂಭವಾಗಿ ದೊಡ್ಡ ದೊಡ್ಡ ಹೋಟೆಲ್ ಗಳ ತನಕ ನಡೆಯುತ್ತಲೇ ಇರುತ್ತವೆ. ಸ್ಪಾ, ಬ್ಯೂಟಿ ಪಾರ್ಲರ್, ಯೋಗ ತರಬೇತಿ ಹೀಗೆ ಎಲ್ಲವನ್ನೂ ತಲೆಹಿಡುಕರು ದುರುಪಯೋಗ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, ಆದರೆ ಪಾಪದ ಕೊಡ ತುಂಬಿದಾಗ ಕಳ್ಳಾಟ ಬಯಲಾಗಿ ಸಿಕ್ಕಿಬಿದ್ದಿದ್ದಾರೆ. ಬೀದಿಯಲ್ಲಿ ನಡೆಯುವ ವೇಶ್ಯಾವಾಟಿಕೆ ಎಲ್ಲರ ಕಣ್ಣಿಗೆ ಆದರೆ ದೊಡ್ಡ ಮಟ್ಟದಲ್ಲಿ ನಡೆಯುವ ಹೈಟೆಕ್ ದಂಧೆ ಬಹಳಷ್ಟು ಜನರಿಗೆ ಗೊತ್ತೇ ಆಗುವುದಿಲ್ಲ.

ಮೈಸೂರಿನಲ್ಲಿ ಎಲ್ಲಿ ಏನೇನು ನಡೆಯುತ್ತಿದೆ ಎಂಬುದು ಬಹುತೇಕರಿಗೆ ಗೊತ್ತಿದೆ. ಆದರೆ ಪೊಲೀಸರ ಕಣ್ಣಿಗೆ ಮಣ್ಣೆರಚಿ ನಡೆಯುವ ಈ ದಂಧೆಯನ್ನು ಕೆಲವೊಮ್ಮೆ ಸಾರ್ವಜನಿಕರೇ ಹಿಡಿದುಕೊಟ್ಟ ಉದಾಹರಣೆಗಳು




ಇಲ್ಲದಿಲ್ಲ. ಇನ್ನು ವೇಶ್ಯಾವಾಟಿಕೆಗೆ ಸ್ಥಳೀಯ ಹೆಣ್ಣು ಮಕ್ಕಳಿಗಿಂತ ಹೊರಗಿನ ಅಂದರೆ ಉತ್ತರ ಭಾರತ ಹಾಗೂ ಬಾಂಗ್ಲಾ ಹುಡ್ಗೀರ ಬಳಕೆ ಜಾಸ್ತಿಯಿರುವುದು ಸುಳ್ಳೇನಲ್ಲ. ಈ ಹಿಂದೆ ನಡೆದ ಬಹುತೇಕ ದಾಳಿಗಳ ರಕ್ಷಿಸಲ್ಪಟ್ಟ ಹೆಣ್ಣು ಮಕ್ಕಳ ಪೈಕಿ ಹೆಚ್ಚಿನವರು ಬಾಂಗ್ಲಾದವರಾಗಿದ್ದನ್ನು ಎಲ್ಲರೂ ನೋಡಿದ್ದಾರೆ.

ಬಾಂಗ್ಲಾದಿಂದ ಅಕ್ರಮವಾಗಿ ಹೆಣ್ಣುಮಕ್ಕಳನ್ನು ಭಾರತದೊಳಗೆ ದಾಟಿಸುವ ದೊಡ್ಡ ಜಾಲವೇ ಇದ್ದು, ಆ ನಂತರ ಅವರನ್ನು ದಕ್ಷಿಣ ಭಾರತದ ಕಡೆಗೆ ಸಾಗಿಸಲಾಗುತ್ತದೆ. ಈ ಹೆಣ್ಣುಮಕ್ಕಳಿಗೆ ಇಂತಿಷ್ಟು ಎಂದು ರೇಟ್ ಫಿಕ್ಸ್ ಮಾಡಿಸಿ ಅವರನ್ನು ಲಾಡ್ಜ್ ಇನ್ನಿತರ ಕಡೆಗೆ ಕಳುಹಿಸಿಲಾಗುತ್ತದೆ. ಅವರನ್ನು ಬಳಸಿಕೊಂಡು ಹಣ ಮಾಡುವ ದೊಡ್ಡ ತಂಡವೇ ಇದೆ. ಆ ರಹಸ್ಯವನ್ನು ಬೇಧಿಸಿ ತಲೆಹಿಡುಕರನ್ನು ಮಟ್ಟ ಹಾಕುವುದು ಇದುವರೆಗೆ ಕಾರಣದಿಂದಾಗಿ ಇವತ್ತಿಗೂ ಅದೆಷ್ಟೋ ಹೆಣ್ಣುಮಕ್ಕಳು ಅನಿವಾರ್ಯವಾಗಿ ಕತ್ತಲಕೂಪದಲ್ಲಿ ಮೈಮಾರಿಕೊಂಡು ಬದುಕಬೇಕಾಗಿದೆ.

ಬಾಂಗ್ಲಾ ಹುಡ್ಗೀರು ಬಹಳಷ್ಟು ತಲೆಹಿಡುಕರಿಗೆ ಅನ್ನ ಹಾಕುತ್ತಿದ್ದು, ಅವರನ್ನಿಟ್ಟುಕೊಂಡೇ ಲಕ್ಷ ಲಕ್ಷ ಹಣ ಸಂಪಾದಿಸುತ್ತಿದ್ದಾರೆ. ಅದರ ಜತೆಗೆ ಸ್ಥಳೀಯರನ್ನು ಬಳಸಿಕೊಳ್ಳುತ್ತಿದ್ದಾರೆ. ಇವರ ದಂಧೆ ಎಲ್ಲವೂ ಹೈಟೆಕ್ ಆಗಿದ್ದು, ಐಷಾರಾಮಿ ಹೋಟೆಲ್‌ಗಳಲ್ಲಿಯೇ ನಡೆಯುತ್ತಿದೆ. ಹೀಗಾಗಿ ಅದು ಬೆಳಕಿಗೆ ಬರುವುದು ಬಹಳ ಕಡಿಮೆ. ಅಪ್ಪಿತಪ್ಪಿ ಆಗೊಮ್ಮೆ ಈಗೊಮ್ಮೆ ಮಾತ್ರ ಬರುತ್ತಿದೆ. ಇದೀಗ ಬಾಂಗ್ಲಾ ಹುಡ್ಗೀರ ಬದಿಗಿಟ್ಟು ಥೈಲ್ಯಾಂಡ್ ಹುಡ್ಗೀರ ಕರೆತಂದು ಮಾಂಸದಂಧೆಯನ್ನು ನಡೆಸುತ್ತಿರುವುದು ಬೆಳಕಿಗೆ ಬಂದಿದೆ. ಥೈಲ್ಯಾಂಡ್ ಎಂದರೆ ಗಂಡಸರಿಗೆ ಒಂಥರಾ ಪುಳಕ ಇದ್ದೇ ಇರುತ್ತದೆ. ಆದರೆ ಬಹುತೇಕರಿಗೆ ಅಲ್ಲಿಗೆ ಹೋಗಿ ಎಂಜಾಯ್ ಮಾಡಿಕೊಂಡು ಬರಲು ಸಾಧ್ಯವಾಗಲ್ಲ. ಹೀಗಾಗಿ ಅಂಥವರಿಗೆ ಥೈಲ್ಯಾಂಡ್‌ನಿಂದಲೇ ಹುಡ್ಗೀರನ ಕರೆಯಿಸಿ ಮಜಾ ಉಡಾಯಿಸಲು ತಲೆಹಿಡುಕರು ಮುಂದಾಗಿರುವುದು ಇದೀಗ ಪತ್ತೆಯಾಗಿದೆ.



ಇದರ ಕಿಂಗ್‌ಪಿನ್ ರತನ್ ಎಂದು ಹೇಳಲಾಗಿದೆ. ಹೆಣ್ಣು ಮಕ್ಕಳ ಖಯಾಲಿ ಹೊಂದಿದವರಿಗೆ ಥೈಲ್ಯಾಂಡ್ ಗೆ ಹೋಗಿ ಲಕ್ಷಾಂತರ ರೂಪಾಯಿ ಖರ್ಚು ಬದಲು ಅಲ್ಲಿನ ಹುಡ್ಗೀರನಿಂದಲೇ ನಿಮಗೆ ಏನೆಲ್ಲ ಸುಖ ಬೇಕೋ ಅದೆಲ್ಲವನ್ನು ನಿಮಗೆ ನಿಮ್ಮ ಊರಲ್ಲೇ ಕೊಡಿಸುವುದಾಗಿ ಆಸೆ ಹುಟ್ಟಿಸಿ ಗಿರಾಕಿಗಳನ್ನು ಕರೆಯಿಸಿಕೊಂಡು ಅವರ ಜತೆಗೆ ಐಷಾರಾಮಿ ಹೋಟೆಲ್‌ಗಳಲ್ಲಿ ಥೈಲ್ಯಾಂಡ್ ಹುಡ್ಗೀನ ಬಿಟ್ಟು ಹಣ ಸಂಪಾದಿಸುತ್ತಿದ್ದನು. ಈ ದಂಧೆಯಿಂದ ಒಳ್ಳೆ ಸಂಪಾದನೆಯೂ ಆಗಿತ್ತು.

ರತನ್ ಈ ದಂಧೆಗಾಗಿ ಮೈಸೂರು ನಗರದ ಬೋಗಾದಿ ರಿಂಗ್ ರಸ್ತೆಯಲ್ಲಿರುವ ಐಷಾರಾಮಿ ಈಗಲ್ ಪ್ಯಾಂಟಸಿ ಹೋಟೆಲ್‌ನ್ನು ಬಳಸಿಕೊಳ್ಳುತ್ತಿದ್ದನು. ಈ ಹೋಟೆಲ್‌ಗೆ ಎಂಟ್ರಿ ಪಡೆಯುವುದು ಕಷ್ಟವಾಗಿದ್ದು, ಶ್ರೀಮಂತರು ಮಾತ್ರ ಬರುತ್ತಿದ್ದು ಅವರಿಗೆ ಹುಡ್ಗೀರನ ಕಳುಹಿಸಿಕೊಟ್ಟು ಹಣ ಪೀಕಿಸುತ್ತಿದ್ದನು. ಇನ್ನು ರತನ್ ಬಗ್ಗೆ ಹೇಳಬೇಕೆಂದರೆ, ಈತ ಮೊದಲಿಗೆ ಕೆಎಸ್‌ಆರ್ ಟಿಸಿಯಲ್ಲಿ ಉದ್ಯೋಗಿಯಾಗಿದ್ದನಂತೆ ಈ ವೇಳೆ ತಲೆಹಿಡಿಯುವ ದಂಧೆ ಶುರು ಮಾಡಿದ್ದನು. ಅದರಲ್ಲಿ ಚೆನ್ನಾಗಿ ಕಮಾಯಿ ಆಗುತ್ತಿದೆ. ಲಕ್ಷಾಂತರ ಹಣ ಸಂಪಾದನೆ ಆಗುತ್ತದೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಕೆಲಸಕ್ಕೆ ಗುಡ್‌ಬೈ ಹೇಳಿ ಮಾಂಸದಂಧೆಯನ್ನು ಪುಲ್ ಟೈಂ ಮಾಡಿಕೊಂಡಿದ್ದನು.

ಮೋಜು ಮಸ್ತಿ, ಹೆಂಡ ಎಂದು ಎಂಜಾಯ್ ಮಾಡಲು ಥೈಲ್ಯಾಂಡ್‌ಗೆ ಕೆಲವು ಗಂಡಸರ ವೀಕ್‌ನೆಸ್ ತಿಳಿದುಕೊಂಡಿದ್ದ ರತನ್ ಅಂಥವರಿಗಾಗಿ ಥೈಲ್ಯಾಂಡ್ ನಿಂದ ಚೆಲುವೆಯರನ್ನು ಕರೆಯಿಸಿ ಅವರ ಜತೆ ಕಬಡ್ಡಿ ಆಡಿಸುತ್ತಿದ್ದನು. ಹೊಸತನ ಬಯಸಿ ಬರುವ ಗಂಡಸರು ಕೇಳಿದ್ದಷ್ಟು ಹಣ ನೀಡಿ ಎಂಜಾಯ್ ಮಾಡಿಕೊಂಡು ಹೋಗುತ್ತಿದ್ದರು. ಇದು ರತನ್‌ಗೆ ಒಳ್ಳೆ ಸಂಪಾದನೆಯ ಹಾದಿಯಾಗಿತ್ತು.

ಈತನಿಂದಾಗಿ ಹೋಟೆಲ್‌ನವರಿಗೂ ಕಲೆಕ್ಷನ್ ಆಗುತ್ತಿತ್ತು. ರತನ್ ನಡೆಸುತ್ತಿದ್ದ ದಂಧೆ ದೊಡ್ಡ ಮಟ್ಟದಲ್ಲಿಯೇ ಇತ್ತು. ಇವನ ಜತೆಗೆ ಮಂದಿಯೂ ಕೈಜೋಡಿಸಿದ್ದಾರೆ ಎನ್ನಲಾಗುತ್ತಿದೆ.

ಈತ ಕೇವಲ ಥೈಲ್ಯಾಂಡ್ ಹುಡ್ಗಿ ಮಾತ್ರವಲ್ಲದೆ, ಸ್ಥಳೀಯ ಹುಡ್ಗೀರನ್ನು ಬಳಸಿಕೊಳ್ಳುತ್ತಿದ್ದನು. ಹೋಟೆಲ್ ಗೆ ಬರುವ ಗಿರಾಕಿಗಳಿಗೆ ಅವರ ಟೇಸ್ಟ್‌ಗೆ ತಕ್ಕಂತ ಹೆಣ್ಣು ಮಕ್ಕಳನ್ನು ಅಡ್ಜೆಸ್ಟ್ ಮಾಡಿಕೊಡುತ್ತಿದ್ದನು. ಥೈಲ್ಯಾಂಡ್ ಹುಡ್ಗಿ ಬಿಸಿನೆಸ್ ಪರ್ಪಸ್‌ಗೆ ಎಂದು ಇಂಡಿಯಾಕ್ಕೆ ಬಂದಿದ್ದು, ಒಂದಷ್ಟು ದಿನವಿದ್ದು ಹಣ ಸಂಪಾದಿಸಿಕೊಟ್ಟು ಆಕೆಯೂ ಹಣ ಸಂಪಾದಿಸಿಕೊಂಡು ಹೋಗುವ ಇರಾದೆಯಲ್ಲಿದ್ದಳು. ಈಕೆಯ ಜೊತೆ ಒಂದು ನೈಟ್ ಕಳೆಯಲು ಗಿರಾಕಿಗಳಿಂದ ರತನ್ ಎಂಟರಿಂದ ಹತ್ತು ಸಾವಿರ ಮಾಡಲಾಗಿತ್ತು.

ಈಗಲ್ ಪ್ಯಾಂಟಸಿ ಹೋಟೆಲ್‌ಗೆ ಸ್ಥಳೀಯರಿಗಿಂತ ಹೊರಗಿನ ಶ್ರೀಮಂತರೇ ಬರುವುದರಿಂದ ವ್ಯವಹಾರ ಸುಸೂತ್ರವಾಗಿ ನಡೆಯುತ್ತಾ ಬಂದಿತ್ತು. ಆದರೆ ಸ್ಥಳೀಯರಿಗೆ ಈ ಹೋಟೆಲ್‌ಗೆ ಹುಡ್ಗೀರು ಬರುವುದು ಹೋಗುವುದು ಸ್ವಲ್ಪಮಟ್ಟಿಗೆ ಸಂಶಯವನ್ನು ಹುಟ್ಟು ಹಾಕಿತ್ತು. ಹೀಗಾಗಿ ಇದರ ಮೇಲೆ ಕಣ್ಣಿಡಲಾಗಿತ್ತು. ನಿಜ ಹೇಳಬೇಕೆಂದರೆ ಮೈಸೂರು ನಗರದಲ್ಲಿರುವ ಕೆಲವು ಲಾಡ್ಜ್ ಮತ್ತು ಹೋಟೆಲ್‌ಗಳಲ್ಲಿ ದಂಧೆಗಳು ನಡೆಯುತ್ತಿದ್ದು ಅದರ ಮೇಲೆ ಆಗಾಗ್ಗೆ ದಾಳಿ ಮಾಡಿದ ನಿದರ್ಶನಗಳಿವೆ. ಆದರೆ ಯಾವ ಹೋಟೆಲ್‌ಗಳಲ್ಲಿ ಏನೇನು ನಡೆಯುತ್ತಿದೆ ಎನ್ನುವುದನ್ನು ಪತ್ತೆಹಚ್ಚುವುದು ಕಷ್ಟವೇ...

ಅಕ್ರಮ ಚಟುವಟಿಕೆಗಳನ್ನು ಹೆಚ್ಚು ದಿನ ಮುಚ್ಚಿಡುವುದು ಕಷ್ಟವೇ ಅದು ಒಂದಲ್ಲ ಒಂದು ದಿನ ಬೆಳಕಿಗೆ ಬಂದೇ ಬರುತ್ತದೆ. ಅದರಂತೆ ಈಗಲ್ ಪ್ಯಾಂಟಸಿ ಹೋಟೆಲ್ ಬಗ್ಗೆಯೂ ಅನುಮಾನ ಹುಟ್ಟಿಕೊಂಡಿತ್ತು. ಇಲ್ಲಿ ಮಾಂಸ ದಂಧೆ ನಡೆಯುತ್ತಿದೆ ಎಂಬ ಅನುಮಾನಗಳು ಹುಟ್ಟಿಕೊಂಡಿದ್ದವು. ಹೀಗಾಗಿ ಇದರ ಮೇಲೆ ಮೈಸೂರಿನ ಒಡನಾಡಿ ಸಂಸ್ಥೆ ಕಣ್ಣಿಟ್ಟಿತ್ತಲ್ಲದೆ, ಇಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಮಾಹಿತಿ ಕಲೆಹಾಕಿತ್ತು. ಇಲ್ಲಿ ಹೊರಗಿನ ಮತ್ತು ಸ್ಥಳೀಯ ಹೆಣ್ಣುಮಕ್ಕಳನ್ನಿಟ್ಟುಕೊಂಡು ಮಾಂಸದಂಧೆ ನಡೆಸುತ್ತಿರುವುದು ಮನದಟ್ಟಾಗಿತ್ತು.

ಈಗಲ್ ಪ್ಯಾಂಟಸಿ ಹೋಟೆಲ್‌ನಲ್ಲಿ ನಡೆಯುತ್ತಿದ್ದ ದಂಧೆಯನ್ನು ಬಯಲಿಗೆಳೆಯುವ ಹಿನ್ನಲೆಯಲ್ಲಿ ಒಡನಾಡಿ ಸಂಸ್ಥೆ ಸ್ಥಳೀಯ ಸರಸ್ವತಿಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರ ಸಹಕಾರದೊಂದಿಗೆ ಜನವರಿ 25ರಂದು ಹೋಟೆಲ್ ಮೇಲೆ ದಾಳಿ ಮಾಡಲಾಗಿತ್ತು. ತಮ್ಮ ಹೋಟೆಲ್ ಮೇಲೆ ಯಾವುದೇ ದಾಳಿಗೆ ಅವಕಾಶವಿಲ್ಲ. ನಮ್ಮಲ್ಲಿ ನಡೆಯುತ್ತಿರುವ ದಂಧೆ ಬಗ್ಗೆ ಯಾರಿಗೂ ಗೊತ್ತಿಲ್ಲ ಎಂದರಿತ ಹೋಟೆಲ್‌ನವರು ಆರಾಮಾಗಿದ್ದರು. ಯಾವಾಗ ಹೋಟೆಲ್ ಒಳಗೆ ನುಗ್ಗಿದ್ದರೋ ಬೆಚ್ಚಿ ಬೀಳುವ ಸರದಿ ಹೋಟೆಲ್ ನವರದ್ದಾಗಿತ್ತು.

ಹೋಟೆಲ್‌ನ ರೂಮ್‌ನ ಬಾಗಿಲು ಬಡಿದವರಿಗೆ ಅದರೊಳಗೆ ಕಂಡು ಬಂದ ದೃಶ್ಯ ನೋಡಿ ಶಾಕ್ ಆಗಿದ್ದರು. ಥೈಲ್ಯಾಂಡ್ ಸೇರಿದಂತೆ ಸ್ಥಳೀಯ ಹುಡುಗಿ ಈ ವೇಳೆ ಅಲ್ಲಿದ್ದರು. ಹೀಗಾಗಿ ಅವರನ್ನು ರಕ್ಷಿಸಿದ್ದು ದಂಧೆಗೆ ಸಂಬಂಧಿಸಿದಂತೆ ಸುಮಾರು ಏಳು ಮಂದಿಯನ್ನು ವಶಕ್ಕೆ ಪಡೆಯಲಾಯಿತು. ದಂಧೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ವೇಳೆ ರತನ್ ಕಿಂಗ್ ಎನ್ನುವುದು ಗೊತ್ತಾಗಿದೆ.

ಥೈಲ್ಯಾಂಡ್ ಹುಡ್ಗಿ ಪರ್ಪಸ್‌ಗೆ ಬಂದಿದ್ದಾಗಿ ತಿಳಿಸಿದ್ದಾಳೆ. ಆದರೆ ರತನ್ ಟೂರ್ ವಿಸಾದಲ್ಲಿ ಹುಡ್ಗೀರನ್ನು ಕರೆಯಿಸಿಕೊಂಡು ಒಂದಷ್ಟು ದಿನ ಇಲ್ಲಿಟ್ಟುಕೊಂಡು ದಂಧೆ ನಡೆಸಿ ಬಳಿಕ ಕಳುಹಿಸಿಕೊಡುತ್ತಿದ್ದ ಎನ್ನಲಾಗುತ್ತದೆ. ವೇಶ್ಯಾವಾಟಿಕೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೋಟೆಲ್‌ನಲ್ಲಿ ಸಿಕ್ಕ ಯುವತಿ ಥೈಲ್ಯಾಂಡ್‌ನಿಂದ ಮೈಸೂರಿಗೆ ಒಂದು ದಿನದ ಹಿಂದೆಯಷ್ಟೇ ಬಂದಿದ್ದಾಗಿ ಹೇಳಿದ್ದಾಳೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಈ ದಂಧೆ ಕೇವಲ ಈಗಲ್ ಪ್ಯಾಂಟಸಿ ಹೋಟೆಲ್‌ನಲ್ಲಿ ಮಾತ್ರ ನಡೆಯುತ್ತಿಲ್ಲ. ಎಲ್ಲೆಲ್ಲಿ ನಡೆಯುತ್ತಿದೆಯೋ ಗೊತ್ತಿಲ್ಲ. ☯





**ಕೊಡಗಿನ ಮಡಿಕೇರಿ ತಾಲೂಕಿನ ಕಟ್ಟೆಮಾಡು ಗ್ರಾಮದಲ್ಲಿರುವ ಮೃತ್ಯುಂಜಯ ದೇಗುಲಕ್ಕೆ ಪ್ರವೇಶಕ್ಕೆ ಕೊಡವರು ಸಾಂಪ್ರದಾಯಿಕ ಉಡುಪು ಧರಿಸಿ ತೆರಳುವುದಕ್ಕೆ ಅನುಮತಿ ನೀಡದ ವಿಚಾರಕ್ಕೆ ಸಂಬಂಧಿಸಿದ ಪ್ರಕರಣ ಬೂದಿ ಮುಚ್ಚಿದ ಕೆಂಡದಂತಿರುವಾಗಲೇ ಕಾಂಗ್ರೆಸ್ ಕಾರ್ಯಕರ್ತನೊಬ್ಬ ಅದೇ ದೇಗುಲದ ಪ್ರಧಾನ ಅರ್ಚಕರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆಯೊಂದು ಜನವರಿ 27ರಂದು ನಡೆದಿದೆ.**

# ಅರ್ಚಕನ ಮೇಲೆ ಕೈ ಕಾರ್ಯಕರ್ತ ಹಲ್ಲೆ ಮಾಡಿದ್ದೇಕೆ?


ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿಘ್ನೇಶ್


ಆರೋಪಿ ಅನಿಲ್

**ಕೊಡಗು**
✍ಬಿ.ಎಂ. ಲವಕುಮಾರ್

ಕೊಡಗಿನ ಕಟ್ಟೆಮಾಡು ಗ್ರಾಮದಲ್ಲಿರುವ ಮೃತ್ಯುಂಜಯ ದೇಗುಲಕ್ಕೆ ಕೊಡವ ಸಾಂಪ್ರದಾಯಿಕ ಉಡುಗೆ ಧರಿಸಿ ಪ್ರವೇಶಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಹುಟ್ಟಿಕೊಂಡ ಆಕ್ಷೇಪ ಇದೀಗ ಗ್ರಾಮವನ್ನು ದಾಟಿ ಜಿಲ್ಲೆಯಲ್ಲಿ ಕೊಡವರು ಮತ್ತು ಕೊಡವೇತರರ



ನಡುವಿನ ವೈಮಸ್ಸಿಗೆ ಕಾರಣವಾಗುತ್ತಿದ್ದು, ಹೋರಾಟ, ಪ್ರತಿಭಟನೆಗಳ ನಡುವೆ ಅರ್ಚಕರ ಮೇಲೆ ಹಲ್ಲೆ ನಡೆದಿರುವುದು ಶಾಂತಿಯುತ ಕೊಡಗಿನಲ್ಲಿ ಏನಾಗುತ್ತಿದೆ ಎಂಬ ಪ್ರಶ್ನೆಯನ್ನು ಹುಟ್ಟು ಹಾಕಿದೆ. ಒಂದೆಡೆ ಕುಳಿತು ಮಾತುಕತೆಯಿಂದ ಬಗೆಹರಿಸಿಕೊಳ್ಳಬೇಕಾದ ವಿಚಾರವೊಂದು ಬೇರೆ, ಬೇರೆ ರೂಪತಳೆಯುತ್ತಿರುವುದು ಆತಂಕಕ್ಕೆ ಕಾರಣವಾಗುತ್ತಿದೆ.

ಕೊಡಗಿನಲ್ಲಿ ಎಲ್ಲ ಸಮುದಾಯಗಳು ಒಗ್ಗಟ್ಟಿನಿಂದ ಜೀವನ ಮಾಡಿಕೊಂಡು ಬಂದಿದ್ದು ಕಟ್ಟೆಮಾಡಿನಲ್ಲಿ ಶುರುವಾದ ಸಂಘರ್ಷ ವಿಕೋಪಕ್ಕೆ ತೆರಳದಂತೆ ನೋಡಿಕೊಂಡು ಎಲ್ಲರೂ ಶಾಂತಿಯುತವಾಗಿ ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಿದ್ದರೆ ಸರಿಹೋಗುತ್ತಿತ್ತೇನೋ? ಆದರೆ ಹಾಗೆ ಆಗದ ಕಾರಣದಿಂದಾಗಿ ಇವತ್ತು ಅದು ಎಲ್ಲಿಂದ ಮತ್ತೆಲ್ಲಿಗೋ ಹೋದಂತೆ ಕಾಣುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕಿಡಿಗೇಡಿಗಳು ಇಲ್ಲಸಲ್ಲದ ಪೋಸ್ಟ್‌ಗಳನ್ನು ಹಾಕುವ ಮೂಲಕ ಸಮುದಾಯದ ನಡುವೆ ಕಿಚ್ಚು ಹಚ್ಚುವ ಕೆಲಸ ನಡೆದಿದ್ದರಿಂದ ವಿಕೋಪಕ್ಕೆ ತೆರಳುವಂತಾಗಿದೆ.


ವಿಘ್ನೇಶ್‌ನ ಪತ್ನಿ

ಈಗಾಗಲೇ ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ ಫೆಬ್ರವರಿ 2ರಿಂದ 7ರವರೆಗೆ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ. ಇದರ ನಡುವೆ ಕಟ್ಟೆಮಾಡು ಮೃತ್ಯುಂಜಯ ದೇವಾಲಯದಲ್ಲಿ ಪ್ರಧಾನ ಅರ್ಚಕರಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಕಿಡಿಗೇಡಿಗಳು ಅವರನ್ನು ಮನೆಯಿಂದ ಹೊರಗೆ ಕರೆದು ಮನಬಂದಂತೆ ತೀವ್ರ ಹಲ್ಲೆ ಮಾಡಿದ್ದಾರೆ. ಇದು ಖಂಡನೀಯವಾಗಿದೆ. ಇಲ್ಲಿ ಯಾರೋ ಒಂದಿಬ್ಬರು ಮಾಡುವ ಕೃತ್ಯಗಳು ಇಡೀ ಸಮುದಾಯಕ್ಕೆ ಕೆಟ್ಟ ಹೆಸರನ್ನು ತರಿಸುತ್ತಿದೆ.


ಕಟ್ಟೆಮಾಡು ದೇವಾಲಯದ ಅರ್ಚಕರಾದ ವಿಘ್ನೇಶ್ ಎಂಬುವರು ಮೂರ್ನಾಡು ನಿವಾಸಿಯಾಗಿದ್ದು ಸ್ಟುಡಿಯೋ ಇಟ್ಟುಕೊಂಡಿದ್ದಾರೆ. ಅವರು ದೇಗುಲದಲ್ಲಿ ಪ್ರಧಾನ ಅರ್ಚಕರಾಗಿದ್ದಾರೆ ಎನ್ನುವುದನ್ನು ಹೊರತು ಪಡಿಸಿದರೆ ಅಲ್ಲಿ ಅವರದ್ದೇನು ಪಾತ್ರವಿಲ್ಲ. ದೇವಸ್ಥಾನ ಆಡಳಿತ ಮಂಡಳಿಯಿದ್ದು, ಈ ಆಡಳಿತ ಮಂಡಳಿಯಲ್ಲಿ ಎಲ್ಲ ಸಮುದಾಯದವರು ಸದಸ್ಯರಾಗಿದ್ದಾರೆ. ಹೀಗಾಗಿ ಪ್ರಧಾನ ಅರ್ಚಕರ ಮೇಲೆ ಏಕೆ ದಾಳಿ ಮಾಡಿದರು? ಎಂಬುದು ಮಾತ್ರ ಪ್ರಶ್ನೆಯಾಗಿ ಉಳಿದಿದೆ.

ಕಟ್ಟೆಮಾಡು ಮೃತ್ಯುಂಜಯ ದೇಗುಲದ ಪ್ರವೇಶ ವಿಚಾರದ ಸಂಘರ್ಷ ಒಮ್ಮತಕ್ಕೆ ಬರಲಿಲ್ಲ. ಶಾಂತಿಸಭೆಯೂ ಫಲಕೊಡಲಿಲ್ಲ. ಹೀಗಾಗಿ ತಾರ್ಕಿಕ ಅಂತ್ಯ ಕಾಣುವ ಮೊದಲೇ ಅರ್ಚಕರ ಮೇಲೆ ಹಲ್ಲೆ ನಡೆದಿರುವುದು ಬೇಸರದ ಸಂಗತಿಯಾಗಿದೆ. ಸೋಮವಾರ ಎಂದಿನಂತೆ ವಿಘ್ನೇಶ್ ಅವರು ಅವರು ದೇವಾಲಯದಿಂದ ಪೂಜೆ ಮುಗಿಸಿ ಮನೆಗೆ ಬಂದಿದ್ದರು. ಅವರ ಪತ್ನಿ ಸ್ಟುಡಿಯೋದಲ್ಲಿದ್ದರು. ಸಂಜೆ ವೇಳೆಯಲ್ಲಿ ಮೂರ್ನಾಡುವಿನ ಅವರ ಸ್ಟುಡಿಯೋಕ್ಕೆ ಆಗಮಿಸಿದ ಇಬ್ಬರು ಅವರ ಪತ್ನಿ ಬಳಿ ಮಾತನಾಡಿ ಪೂಜೆ ಮಾಡಿಸಬೇಕಾಗಿದೆ. ವಿಘ್ನೇಶ್ ಎಲ್ಲಿದ್ದಾರೆ ಎಂದು ಕೇಳಿದ್ದಾರೆ. ಅದಕ್ಕೆ ಅವರ ಪತ್ನಿ, ಮನೆಯಲ್ಲಿದ್ದಾರೆ ಎಂದು ಹೇಳಿದ್ದಾರೆ.

ಆ ನಂತರ ಪತ್ನಿ ಹತ್ತಿರ ವಿಘ್ನೇಶ್ ಅವರ ಮೊಬೈಲ್ ನಂಬರ್ ಪಡೆದು ಫೋನ್ ಮಾಡಿ ನಿಮ್ಮನ್ನು ಭೇಟಿಯಾಗಬೇಕು ಎಂದು ಹೇಳಿದ್ದಾರೆ.

ಈ ವೇಳೆ ವಿಘ್ನೇಶ್ ತಮ್ಮ ಮನೆಯ ವಿಳಾಸ ನೀಡಿ ಬರುವಂತೆ ಹೇಳಿದ್ದಾರೆ. ಅದಕ್ಕೆ ಅವರು ನಾವು ನಾನ್‌ವೆಜ್ ತಿಂದಿದ್ದೇವೆ. ಹೀಗಾಗಿ ಮನೆಗೆ ಬರಲ್ಲ ನೀವೇ ಬನ್ನಿ ಎಂದು ಮನೆಯ ಸಮೀಪ ಕರೆಯಿಸಿಕೊಂಡಿದ್ದಾರೆ. ಅರ್ಚಕ ವಿಘ್ನೇಶ್ ಬರುತ್ತಿದ್ದಂತೆಯೇ ನೀವು ವಿಘ್ನೇಶ್ ಅಲ್ವಾ, ಕಟ್ಟೆಮಾಡು ದೇವಾಲಯದ ಅರ್ಚಕರು ಯಾರು ಎಂದು ಕೇಳಿದಾಗ ನಾನೇ ಪ್ರಧಾನ ಅರ್ಚಕ ಎಂದು ವಿಘ್ನೇಶ್ ಹೇಳಿದ್ದಾರೆ.

ಈ ವೇಳೆ ಏಕಾಏಕಿ ಒಬ್ಬ ವ್ಯಕ್ತಿ ಅವರ ಮೇಲೆ ಹಲ್ಲೆ ಮಾಡಿದ್ದಾನೆ. ನಂತರ ಮತ್ತೊಬ್ಬನು ಕೂಡ ಹಲ್ಲೆ ಮಾಡಿ ಚಾಕುವನ್ನು ತೆಗೆದು ತಿವಿಯಲು ಮುಂದಾದಾಗ ವಿಘ್ನೇಶ್ ಅವರ ತಾಯಿ ಓಡಿ ಬಂದು ತಡೆಯಲು ಮುಂದಾಗಿದ್ದಾರೆ. ಈ ವೇಳೆ ಅವರ ಮೇಲೆಯೂ ಕಿಡಿಗೇಡಿಗಳು ಹಲ್ಲೆ ಮಾಡಿ ನಂತರ ತೆರಳಿದ್ದಾರೆ. ಇನ್ನು ಹೊಡೆದ ವ್ಯಕ್ತಿಯನ್ನು ವಿಘ್ನೇಶ್ ಅವರು ಗುರುತಿಸಿದ್ದು ಕಾಕೋಟುಪರಂಬು ನಿವಾಸಿ ಮಂಡೇಟೀರ ಅನಿಲ್ ಎಂದು ಹೇಳಲಾಗಿದೆ. ಆತನ ಜೊತೆಯಲ್ಲಿ ಇರುವವರು ಯಾರು ಎಂದು ತಿಳಿದು ಬಂದಿಲ್ಲ. ಸದ್ಯ ವಿಘ್ನೇಶ್ ಅವರು ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಅರ್ಚಕರ ಮೇಲಿನ ಹಲ್ಲೆಗೆ ತೀವ್ರ ಖಂಡನೆ ವ್ಯಕ್ತವಾಗಿದ್ದು, ಬ್ರಾಹ್ಮಣ ಸಮಾಜ ಮತ್ತು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ ಕೊಡಗು ಅಧ್ಯಕ್ಷ ರಾಮಚಂದ್ರ ಮೂಗೂರು ಕೃತ್ಯವನ್ನು ಖಂಡಿಸಿದ್ದಾರೆ. ಅಲ್ಲದೆ, ಮಡಿಕೇರಿಯ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿರುವ ಅರ್ಚಕ ವಿಘ್ನೇಶ್ ಭಟ್‌ಗೆ ಸಾಂತ್ವಾನ ಹೇಳಿದ್ದಾರೆ. ಘಟನೆಗೆ ಕಾರಣರಾದವರ ವಿರುದ್ಧ ತಡ ಮಾಡದೆ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಮಾಡಿದ್ದಾರೆ.

ಇನ್ನು ಆರೋಪಿ ಪತ್ತೆಗೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಎರಡು ತನಿಖಾ ತಂಡ ರಚನೆ ಮಾಡಿ ಕಾರ್ಯಾಚರಣೆ ಆರಂಭಿಸಲಾಗಿದ್ದು, ಆರೋಪಿ ಮಂಡೇಟಿರ ಅನಿಲ್ ಮೈಸೂರು ಅಥವಾ ಬೆಂಗಳೂರಿಗೆ ತೆರಳಿರುವ ಶಂಕೆ ವ್ಯಕ್ತವಾಗಿದೆ. ಮೊಬೈಲ್ ಸ್ವಿಚ್ ಆಫ್ ಆಗಿದೆ ಎಂದು ಹೇಳಲಾಗಿದೆ. ಆರೋಪಿ ಅನಿಲ್ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನಾಗಿದ್ದು, ಆತ ಮಾಡಿದ ಕೃತ್ಯಕ್ಕೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ ವಿಷಾಧ ವ್ಯಕ್ತಪಡಿಸಿದ್ದು, ಕಾಂಗ್ರೆಸ್‌ನಿಂದ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಮಂಡೇಟಿರ ಅನಿಲ್ ಎಂಬ ವ್ಯಕ್ತಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನಾಗಿದ್ದು, ಇವತ್ತು ನಡೆದ ಘಟನೆಯಿಂದ ನಮಗೆ ತುಂಬಾ ನೋವಾಗಿದೆ. ಆರೋಪಿ ಅನಿಲ್ ಮೇಲಿರುವ ಆರೋಪದ ಬಗ್ಗೆ ತನಿಖೆ ನಡೆಸಿ, ಆರೋಪ ಸಾಬೀತಾದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಅಲ್ಲದೆ, ಮೇಲ್ನೋಟಕ್ಕೆ ಈ ಪ್ರಕರಣದಲ್ಲಿ ಅನಿಲ್ ಭಾಗಿ ಎಂದು ಗೊತ್ತಾಗಿರುವುದರಿಂದ ಈತನನ್ನು ಕಾಂಗ್ರೆಸ್ ಪಕ್ಷದಿಂದ ಅಮಾನತ್ತು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ☯





# ಗ್ರಾಮೀಣದಲ್ಲಿ ಮರೆಯಾದ ಸುಗ್ಗಿ ಸಡಗರ; ಒಕ್ಕಣೆ ಕಣವಾದ ಗ್ರಾಮೀಣ ರಸ್ತೆಗಳು, ವಾಹನ ಸವಾರರ ಪರದಾಟ!

✍ ಶಾಂತರಾಜು ಜಿ. ಕಲ್ಲಹಳ್ಳಿ

ಕಾಲ ಕ್ರಮೇಣ ವರ್ಷಗಳು ಕಳೆದಂತೆ ಹವಾಮಾನ ವ್ಯತ್ಯಾಸ, ಕೃಷಿಯಲ್ಲಿ ಅಧಿಕ ಲಾಭದ ಆಸೆಯಿಂದ ರಸಗೊಬ್ಬರ, ಕ್ರಿಮಿನಾಶಕ ಸಿಂಪಡಣೆಯಿಂದ ಭೂಮಿ ಜೊತೆಗೆ ಧವಸ, ಧಾನ್ಯವೂ ತನ್ನ ಮೂಲ ಗುಣಮಟ್ಟವನ್ನು ಕಳೆದುಕೊಂಡಿದೆ. ಇತ್ತೀಚೆಗೆ ಕೃಷಿ ಕಾರ್ಮಿಕರ ಅಭಾವದಿಂದ ರೈತರು ಯಾಂತ್ರಿಕ ಕೃಷಿಗೆ ಮಾರು ಹೋಗಿದ್ದು, ಭತ್ತ, ರಾಗಿ, ಇನ್ನಿತರ ಬೆಳೆಗಳನ್ನು ಒಂದು ಗಂಟೆಯಲ್ಲಿ ಕೊಯ್ಲು ಮಾಡಲಾಗುತ್ತಿದೆ.



ಅಂದು ಒಕ್ಕಣೆ ಮಾಡಿದ ರಾಶಿಗೆ ಪೂಜಿಸುತ್ತಿರುವುದು

ರಾಗಿ, ಭತ್ತ ಮತ್ತು ಹುರುಳಿ ಬೆಳೆ ಕಟಾವು ಕಾಲ ಬಂದರೆ ರಸ್ತೆಗಳೇ ಒಕ್ಕಣೆ ಕಣವಾಗಿ ಬದಲಾಗುತ್ತವೆ. ರಾಗಿ, ಭತ್ತ ಹಾಗೂ ಹುರುಳಿ ಬೆಳೆಯನ್ನು ರಸ್ತೆಗಳಲ್ಲಿ ಹಾಕಿ ಒಕ್ಕಣೆ ಮಾಡುವುದರಿಂದ ವಾಹನ ಸವಾರರಿಗೆ ಕಿರಿಕಿರಿ ಮತ್ತು ಅಷ್ಟೇ ಅಪಾಯವೂ ಹೌದು. ರಾಗಿ, ಭತ್ತ ಹಾಗೂ ಹುರುಳಿ ಹುಲ್ಲಿನ ಮೇಲೆ ವಾಹನ ಚಲಾವಣೆ ಮಾಡುವಾಗ ಸವಾರರು ಎದ್ದು ಬಿದ್ದು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಪೂರ್ವಿಕರ ಕಾಲದಲ್ಲಿ ಕಣಕ್ಕೆ ವಿಶೇಷ ಆದ್ಯತೆ



ಒಕ್ಕಣೆಗೆ ಬಳಸುತ್ತಿದ್ದ ಹುರುಳುಗಲ್ಲು ಸೈಲೆಂಟ್ ಆಗಿ ನಿಂತಿರುವುದು

ನೀಡಿದ್ದರು. ಈಗ ಯಂತ್ರೋಪಕರಣಗಳ ಬಳಕೆಯಿಂದ ಒಕ್ಕಣೆ ಸುಲಭವಾಗಿದ್ದರೂ ಕೃಷಿ ಬೆಳೆಗಳನ್ನು ಒಕ್ಕಣೆ ಮಾಡಲು ತಗಲುವ ಖರ್ಚುವೆಚ್ಚ ಹೆಚ್ಚಿದ ಪರಿಣಾಮ ರೈತರು ರಸ್ತೆಗಳಲ್ಲಿ ಹಾಕಿ ಒಕ್ಕಣೆ ಮಾಡುವುದು ಶುರುವಾಗಿದೆ. ಗ್ರಾಮೀಣ ಭಾಗದ ರಸ್ತೆಗಳು ರಾಗಿ, ಭತ್ತ ಹಾಗೂ ಹುರುಳಿ ಬೆಳೆಗಳ ಒಕ್ಕಣೆ ಕಣವಾಗಿ ಬದಲಾಗುತ್ತಿದೆ. ಒಕ್ಕಣೆ ಮೇಲೆ ವೇಗವಾಗಿ ಬರುವ ದ್ವಿಚಕ್ರ ವಾಹನ ಸವಾರರು ರಾಗಿ, ಭತ್ತದ ಹುಲ್ಲಿನ ಮೇಲೆ ಸಾಗುವಾಗ ವಾಹನವನ್ನು ನಿಯಂತ್ರಿಸಲು ಬ್ರೇಕ್ ಹಾಕಿದರೆ ಆಯತಪ್ಪಿ ಬೀಳಬೇಕಾಗುತ್ತದೆ. ಅದರಲ್ಲಿ ನಾಲ್ಕು ಚಕ್ರದ ಕಾರುಗಳು, ಸರಕು ಸಾಗಾಣಿಕೆ ವಾಹನಗಳ ಇಂಜಿನ್ ಬಳಿ ರಾಗಿ, ಭತ್ತ ಹಾಗೂ ಹುರುಳಿ ಹುಲ್ಲು ಸಿಕ್ಕಿಕೊಂಡು ಅದರಿಂದ ವಾಹನಕ್ಕೂ ತೊಂದರೆಯಾಗಲಿದೆ, ಸ್ವಲ್ಪ ಯಾಮಾರಿದರೆ ಬೆಂಕಿ ಹತ್ತಿಕೊಂಡು ವಾಹನ ಸುಟ್ಟುಕರಕಲಾಗುವುದರ ಜೊತೆಗೆ ಅದರಲ್ಲಿರುವ ಮನುಷ್ಯರಿಗೂ ಅಪಾಯ ತಪ್ಪಿದಲ್ಲ ಎನ್ನುವಂತಾಗಿದೆ.

ರಸ್ತೆಗಳಲ್ಲಿ ರಾಗಿ, ಭತ್ತ ಹಾಗೂ ಹುರುಳಿ ಹಾಕಿ ಒಕ್ಕಣೆ ಮಾಡುವುದರಿಂದ ರಸ್ತೆಯಲ್ಲಿರುವ ಗಲೀಜು, ಧೂಳು, ಮೇಲೆ ಓಡಾಡುವ ವಾಹನಗಳ ಚಕ್ರದಲ್ಲಿರುವ ಧೂಳು ಮಿಶ್ರವಾಗಿ ಪೌಷ್ಠಿಕ ಆಹಾರವಾಗಿದ್ದ ರಾಗಿ ಕಲುಷಿತ ಆಹಾರವಾಗಿ ಬದಲಾಗುತ್ತಿದೆ ಎಂಬ ವಿಚಾರಗಳು ವಿಜ್ಞಾನಿಗಳು ಮನ ಮುಟ್ಟಿಸುತ್ತಿದ್ದಾರೆ. ನಮ್ಮ ಪೂರ್ವಿಕರು ರೈತರು ತಾವು ರಾಗಿ ಬೆಳೆದು ತಮ್ಮ ಜಮೀನಿನಲ್ಲಿ ಸ್ವಚ್ಛ ಮಾಡಿ ಕಣ ಸಿದ್ದಪಡಿಸಿ ಹಸುವಿನ ಸಗಣೆಯಿಂದ ಕಣ ಸಿದ್ದಪಡಿಸುತ್ತಿದ್ದರು. ಅಲ್ಲಿ ಹುರುಳು ಗಲ್ಲು ಗುಂಡು ಸಹಾಯದಿಂದ ಜೋಡಿ ಎತ್ತುಗಳು, ಹಸುಗಳನ್ನು ಕಟ್ಟಿಕೊಂಡು ರಾಗಿ, ಭತ್ತ ಹಾಗೂ ಹುರುಳಿ ಸೇರಿದಂತೆ ಎಲ್ಲ ಕೃಷಿ ಬೆಳೆಗಳನ್ನು ಒಕ್ಕಣೆ ಮಾಡುತ್ತಿದ್ದರು. ಇದರಿಂದ ರಾಗಿ, ಭತ್ತ ಹಾಗೂ ಹುರುಳಿ ಬೆಳೆಗಳು ಸಿದ್ಧತೆಯನ್ನು ಮಾಡಿ ಪೌಷ್ಠಿಕತೆಯನ್ನು ಕಾಪಾಡಿಕೊಳ್ಳುತ್ತಿದ್ದರು.

ಆದರೆ ಇತ್ತೀಚಿನ ದಿನಗಳಲ್ಲಿ ರಸ್ತೆಗಳಲ್ಲಿ ಒಕ್ಕಣೆ ಮಾಡುವುದು ಕಾನೂನುಬಾಹಿರ ಎಂಬುದು ತಿಳಿದಿದ್ದರೂ, ರಸ್ತೆಯಲ್ಲಿ ಕೃಷಿ ಬೆಳೆಗಳನ್ನು ಹಾಕಿ ಒಕ್ಕಣೆ ಮಾಡುವಾಗ ಏನಾದರೂ ಅವಘಡ ಸಂಭವಿಸಿದರೆ, ರೈತರಿಗೆ ಸಂಕಷ್ಟ ಎದುರಾಗಲಿದೆ. ಪೊಲೀಸ್ ಇಲಾಖೆಯ ಅಧಿಕಾರಿಗಳು ರಸ್ತೆಗಳಲ್ಲಿ ರಾಗಿ, ಭತ್ತ ಹಾಗೂ ಹುರುಳಿ ಬೆಳೆಗಳನ್ನು ಹಾಕಿ ಒಕ್ಕಣೆ ಮಾಡುವವರ ವಿರುದ್ಧ ಕ್ರಮ ವಹಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯವಾಗಿದೆ.



ಕೆಲವರು ಈಗಲೂ ಕಣದಲ್ಲಿ ಒಕ್ಕಣೆ ಮಾಡುತ್ತಿರುವುದು

ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ರಾಗಿ, ಭತ್ತ ಒಕ್ಕಣೆ ಕಣ ನಿರ್ಮಾಣ ಮಾಡಿಕೊಳ್ಳಲು ರೈತರಿಗೆ ಅವಕಾಶ ಕಲ್ಪಿಸಲಾಗಿತ್ತು. ಕೆಲವು ಗ್ರಾಮಗಳಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ (ನರೇಗಾ)ಯಲ್ಲಿ ಬಳಕಿಕೊಂಡು ರಾಗಿ, ಭತ್ತ ಒಕ್ಕಣೆ ಕಣ ನಿರ್ಮಾಣ ಮಾಡಿಕೊಂಡಿದ್ದಾರೆ. ಆದರೆ ಈಗ ನರೇಗಾ ಯೋಜನೆಯಲ್ಲಿ ಒಕ್ಕಣೆ ಕಣ ನಿರ್ಮಾಣ ಮಾಡಿಕೊಳ್ಳಲು ಅವಕಾಶವಿಲ್ಲ. ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ನರೇಗಾ ಯೋಜನೆಯಲ್ಲಿ ಒಕ್ಕಣೆ ಕಣ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟು ರೈತರಿಗೆ ಅರಿವು ಮೂಡಿಸುವ ಅಗತ್ಯವಿದೆ. ಮತ್ತು ಸಂಬಂಧಪಟ್ಟ ಪೊಲೀಸ್ ಇಲಾಖೆ ರಸ್ತೆಗಳಲ್ಲಿ ಒಕ್ಕಣೆ ಮಾಡದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ರೈತರು ಹಾಗೂ ವಾಹನ ಸವಾರರ ಒತ್ತಾಯವಾಗಿದೆ.

ರೈತರು ರಸ್ತೆಗಳಲ್ಲಿ ರಾಗಿಯಂತಹ ಕೃಷಿ ಬೆಳೆಗಳನ್ನು ಹಾಕಿ ಒಕ್ಕಣೆ ಮಾಡುವುದರಿಂದ ಸುಗಮ ಸಂಚಾರಕ್ಕೆ ತೊಂದರೆಯಾಗಲಿದೆ. ದ್ವಿಚಕ್ರ ವಾಹನ ಸವಾರರು ಆಯತಪ್ಪಿ ಬೀಳುವ ಸಾಧ್ಯತೆಗಳಿವೆ. ಏನಾದರು ಅವಘಡ ಸಂಭವಿಸಿದರೆ ರೈತರಿಗೆ ತೊಂದರೆ. ರಸ್ತೆಗಳಲ್ಲಿ ಕೃಷಿ ಬೆಳೆಗಳನ್ನು ಹಾಕಿ ಒಕ್ಕಣೆ ಮಾಡದಂತೆ ಆಯಾ ಗ್ರಾಮಗಳ ಬೀಟ್ ಪೊಲೀಸರ ಮೂಲಕ ತಿಳುವಳಿಕೆ ಮಾಡಿಸಲಾಗುತ್ತಿದೆ ಎಂದು ಪೊಲೀಸ್ ಇಲಾಖಾಧಿಕಾರಿಗಳು ಗ್ರಾಮ ಪಂಚಾಯಿತಿಯ ಗ್ರಾಮಸಭೆಗಳಲ್ಲಿ ವಿಚಾರ ತಿಳಿಸುತ್ತಾರೆ.



ಇಂದು ಒಕ್ಕಣೆ ಮಾಡುವ ರೀತಿ

## ಸಂಕ್ರಾಂತಿ ಹಬ್ಬದ ಸಡಗರ ಕೊಚ್ಚಿ ಹೋಗಿದೆ

ಇತ್ತೀಚಿನ ವರ್ಷಗಳಲ್ಲಿ ಸಂಕ್ರಾಂತಿ ಹಬ್ಬವೆಂಬುದು ಎಳ್ಳುಬೀರು, ಒಳ್ಳೆ ಮಾತನಾಡು ಎಂಬಂತೆ, ಎಳ್ಳು ಬೆಲ್ಲ ಹಂಚುವುದರಲ್ಲಿ ತೊಡಗಿಸಿಕೊಂಡಿದ್ದಾರೆ. ಗ್ರಾಮೀಣ ಭಾಗದಲ್ಲಿ ಇದ್ದ ಸಂಕ್ರಾಂತಿ ಹಬ್ಬದ ಸಡಗರ ಕೊಚ್ಚಿ ಹೋಗಿದೆ ಎನ್ನುವ ಬೇಸರ ಗ್ರಾಮೀಣ ಭಾಗದ ಹಳೆ ತಲೆಮಾರಿನ ಮಹಿಳೆಯರದ್ದು.

ಇತ್ತೀಚೆಗೆ ಕಣವೂ ಇಲ್ಲ, ಒಕ್ಕಣೆಯಾದ ರಾಗಿ, ಭತ್ತದ ರಾಶಿ ಗುಡ್ಡೆಯೂ ಇಲ್ಲ. ಹಿಂದೆ ಸಂಕ್ರಾಂತಿ ಹಬ್ಬವನ್ನು ಕಣದ ಹಬ್ಬವೆಂದು ಪರಿಗಣಿಸಿ ಭತ್ತ, ರಾಗಿ ರಾಶಿ ರೌಂಡ್ ಹುರುಳುಗಲ್ಲು, ಎತ್ತುಗಳನ್ನು ಪೂಜೆ ಮಾಡುತ್ತಿದ್ದರು. ಈಗ ಕಣವೂ ಇಲ್ಲ, ಭತ್ತ, ರಾಗಿಯ ರಾಶಿಯ ಗುಡ್ಡೆಗಳೂ ಇಲ್ಲ ಎನ್ನುವಂತಾಗಿದೆ. ಜಮೀನಿನಲ್ಲೇ ಒಕ್ಕಲಾಟ ಮುಗಿಸುತ್ತಿರುವುದರಿಂದ ಸಂಕ್ರಾಂತಿ ಹಬ್ಬ ಕೇವಲ ಹೆಸರಿಗಷ್ಟೇ ಎಂಬಂತಾಗಿದೆ. ಹಿಂದೆ ರೈತರ ಮನೆಯಲ್ಲಿ ಜೋಡೆತ್ತು ಗಾಡಿ ಸೇರಿದಂತೆ ಎಲ್ಲ ಕೃಷಿ ಪರಿಕರಗಳು ಇರುತ್ತಿದ್ದವು. ಈಗ ಏನೂ ಇಲ್ಲ, ಇದ್ದರೂ ಅನಾಥವಾಗಿದೆ. ಇದು ವಿಪರ್ಯಾಸವೇ ಸರಿ.

ಹಬ್ಬಗಳ ಆಚರಣೆ ಸಂದರ್ಭದಲ್ಲಿ ಕಾಲಕ್ಕೆ ಅನುಗುಣವಾಗಿ ತಿಂಡಿ, ತಿನಿಸು, ಆಹಾರ ಪದಾರ್ಥಗಳನ್ನು ತಯಾರಿಸಿ ಸವಿಯುತ್ತಿದ್ದರು. ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಕಡಬು, ಅವರೇಕಾಳು, ಸಾರು, ಗೌರಿಗಣೇಶ ಹಬ್ಬದಲ್ಲಿ ತಟ್ಟೆ ಇಡ್ಲಿ, ಕಾಯಿ ಕಡುಬು, ದೀಪಾವಳಿಯಲ್ಲಿ ದೋಸೆ, ಸೋರೆಕಾಯಿ ಪಲ್ಯ, ಯುಗಾದಿ ಹಬ್ಬದಲ್ಲಿ ಹೋಳಿಗೆ, ಚಿರೋಟಿ, ದವಸ, ಧಾನ್ಯಗಳಿರುವ ಕಣಗಳಲ್ಲಿ ಹಾಕುತ್ತಿದ್ದರು. ವರ್ಷಗಳು ಕಳೆದಂತೆ ನಿತ್ಯ ತಮಗಿಷ್ಟವಾದ ಅಡುಗೆ ತಯಾರಿಸಿಕೊಂಡು ಸೇವಿಸುತ್ತಿರುವುದರಿಂದ ಹಬ್ಬಗಳು ವೈಶಿಷ್ಟವನ್ನು ಕಳೆದುಕೊಂಡಿವೆ.

ಏನೇ ಆದರೂ ರೈತರು ಕಷ್ಟಪಟ್ಟು ಬೆಳೆದ ರಾಗಿ, ಭತ್ತ ಹಾಗೂ ಹುರುಳಿಯಂತಹ ಬೆಳೆಗಳನ್ನು ರಸ್ತೆಗಳಲ್ಲಿ ಹಾಕಿ ಒಕ್ಕಣೆ ಮಾಡುವುದನ್ನು ನಿಲ್ಲಿಸಿ ಪೂರ್ವಜರು ತಮ್ಮ ಜಮೀನಿನಲ್ಲಿ ಒಕ್ಕಣೆ ಕಣವನ್ನು ನಿರ್ಮಿಸಿ, ಅದರಲ್ಲಿ ಒಕ್ಕಣೆ ಮಾಡುತ್ತಿದ್ದ ಹಾಗೆ ಮುಂದೆ ಪ್ರತಿಯೊಬ್ಬ ರೈತನೂ ಸಹ ಅಳವಡಿಸಿಕೊಂಡರೆ ಉತ್ತಮ ಪೌಷ್ಠಿಕ ಆಹಾರ ದೊರೆಯುವುದರ ಜೊತೆಗೆ ವಾಹನ ಸವಾರರು ಸುಗಮವಾಗಿ ಸಂಚರಿಸಲು ಮತ್ತು ಯಾವುದೇ ಅವಘಡಗಳು ಸಂಭವಿಸದಂತೆ ಕಾಪಾಡಿಕೊಂಡಂತಾಗುತ್ತದೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.



ರಸ್ತೆಯಲ್ಲಿ ಒಕ್ಕಣೆ ಮಾಡಲು ಸಿದ್ದವಾಗಿರುವುದು



ಈಗ ರಸ್ತೆಯಲ್ಲಿ ಒಕ್ಕಣೆ ಮಾಡುತ್ತಿರುವುದು

## ಗೋಕಾಕ : ಸಿಪಿಐ ಸುರೇಶಬಾಬು ಮತ್ತು ಸಿಬ್ಬಂದಿಗಳ ಮಿಂಚಿನ ಕಾರ್ಯಾಚರಣೆ...

# ರೈತರ ಪಂಪ್‌ಸೆಟ್‌ಗಳನ್ನು ಕದಿಯುತ್ತಿದ್ದ ನಾಲ್ವರು ಚಂಡಾಳ ಚೌಕಡಿ ಕಳ್ಳರ ಬಂಧನ; ಬಂಧಿತರಿಂದ 5.60 ಲಕ್ಷ ರೂ.ಗಳ ಸ್ವತ್ತು ವಶಕ್ಕೆ

**ಮೈ ಮುರಿದು ನಡುಬಗ್ಗಿಸಿ ದುಡಿದು ತಿನ್ನಲಾರದ ನಾಲ್ವರು ಐನಾತಿ ಚಂಡಾಳ ಚೌಕಡಿ ಗ್ಯಾಂಗ್ ಊರಿನಲ್ಲಿ ಅಂಡಲೆಯುತ್ತಿತ್ತು. ಮೋಜು-ಮಜಾ, ಶೋಕಿ, ಖಯಾಲಿ ಹೊಂದಿರುವ ಇವರು ದುಡ್ಡಿಗಾಗಿ ಚಡಪಡಿಸುತ್ತಿದ್ದರು. ಇದಕ್ಕಾಗಿ ರೈತರು ಹಳ್ಳದ ದಂಡೆಗೆ ತಮ್ಮ ಜಮೀನಿನಲ್ಲಿ ಕೂಡ್ರಿಸಿದ್ದ ಕರೆಂಟ್ ಮೋಟಾರ್ ಪಂಪ್ ಸೆಟ್‌ಗಳನ್ನು ಗುರಿಯಾಗಿರಿಸಿ ಯಾರಿಗೂ ಗೊತ್ತಾಗದಂತೆ ಎಗರಿಸಿಬಿಡುತ್ತಿದ್ದರು. ರೈತರು ನೀಡಿದ ದೂರಿನ ಹಿಂದೆ ಬಿದ್ದ ಧಾಡಸಿ ಸಿಪಿಐ ಸುರೇಶಬಾಬು, ಪಿಎಸ್‌ಐ ಕಿರಣ ಮೋಹಿತೆ ಮತ್ತು ಸಿಬ್ಬಂದಿಗಳು ಡಿವೈಎಸ್ಪಿ ಡಿ.ಹೆಚ್. ಮುಲ್ಲಾರವರ ನಿರ್ದೇಶನದಲ್ಲಿ ಖಚಿತ ಮಾಹಿತಿ ಆಧರಿಸಿ ಓರ್ವ ಅಪ್ರಾಪ್ತ ತರುಣ ಸೇರಿದಂತೆ ನಾಲ್ಕು ಜನರನ್ನು ಬಂಧಿಸಿದ್ದಾರೆ. ಬಂಧಿತರಿಂದ 5.60 ಲಕ್ಷ ರೂ. ಮೌಲ್ಯದ ಸ್ವತ್ತನ್ನು ಜಪ್ತಿ ಮಾಡಿಕೊಂಡಿರುವ ಪ್ರಕರಣ ಬೆಳಗಾವಿ ಜಿಲ್ಲೆಯ ಗೋಕಾಕ ಗ್ರಾಮೀಣ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**


ಪಂಪ್‌ಸೆಟ್‌ಗಳನ್ನು ಕದಿಯುತ್ತಿದ್ದ ಖದೀಮ ಕಳ್ಳರಾದ ಲಕ್ಷ್ಮಣ ಸತ್ತೆಪ್ಪ ತಳವಾರ, ಬಸಪ್ಪ ಲಕ್ಷ್ಮಣ ತಳವಾರ, ರಾಜು ಸತ್ತೆಪ್ಪ ನಾಯಿಕ

**ಪೊ**ಲೀಸರು ತಮ್ಮ ಕರ್ತವ್ಯದಲ್ಲಿ ಶ್ರದ್ಧೆ, ದಕ್ಷತೆ, ಪ್ರಾಮಾಣಿಕತೆ ಮೈಗೂಡಿಸಿಕೊಂಡು ಚತುರತೆ ಮತ್ತು ಧಾಡಸಿತನದಿಂದ ಕಾರ್ಯ ನಿರ್ವಹಿಸಿದ್ದೇ ಆದರೆ ಎಂತಹ ಜಟಿಲ ಪ್ರಕರಣವಾದರೂ ಸರಿ... ಅದನ್ನು ಬೇಧಿಸದೇ ಇರಲಾರರು. ಬೆಳಗಾವಿ ಜಿಲ್ಲೆ ಗೋಕಾಕ ಪೊಲೀಸ್


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

ಉಪವಿಭಾಗದ ಗೋಕಾಕ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರೈತರಿಗೆ ಸೇರಿದ್ದ ಕರೆಂಟ್ ಮೋಟಾರ್ ಪಂಪ್ ಸೆಟ್‌ಗಳನ್ನು ಕಳ್ಳತನ ಮಾಡಿದ್ದ ಚಂಡಾಳ ಚೌಕಡಿ ಗ್ಯಾಂಗ್‌ನ ನಾಲ್ಕು ಜನರನ್ನು ಬಂಧಿಸುವಲ್ಲಿ ಸಿಪಿಐ ಸುರೇಶಬಾಬು, ಪಿಎಸ್‌ಐ ಕಿರಣ ಮೋಹಿತೆ ಮತ್ತು ಸಿಬ್ಬಂದಿಗಳು ಯಶಸ್ವಿ ಆಗಿದ್ದಾರೆ. ಬಂಧಿತರಿಂದ 5.60 ಲಕ್ಷ ರೂ. ಗಳ ಸ್ವತ್ತನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಕಳ್ಳತನ ಪ್ರಕರಣ ಪತ್ತೆ ಮಾಡುವಲ್ಲಿ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರ ಸೂಕ್ತ ನಿರ್ದೇಶನಗಳು ಬಹಳಷ್ಟು ಉಪಯುಕ್ತವಾಗಿದ್ದವು.

**ಬೆಳಗಾವಿ**
✍ ಮನ್ನಾಪೂರ

**ದುಂಡಾನಟ್ಟಿಯಲ್ಲಿ ಪಂಪ್‌ಸೆಟ್‌ಗಳ ಕಳ್ಳತನ...**

ಗೋಕಾಕ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ದುಂಡಾನಟ್ಟಿ ಗ್ರಾಮದಲ್ಲಿ ಯಲ್ಲಪ್ಪ ಪರಸಪ್ಪ ಧರೆನ್ನವರ ಎಂಬುವರ ಜಮೀನಿತ್ತು. ಇವರು ಹಳ್ಳದ ದಂಡೆಗೆ ಕರೆಂಟ್ ಮೋಟಾರ್ ಪಂಪ್‌ಸೆಟ್ ಕೂಡ್ರಿಸಿ ಅದರ ಮೂಲಕ ಹಳ್ಳದ ನೀರನ್ನು ತಮ್ಮ ಜಮೀನಿಗೆ ಉಣಿಸುತ್ತಿದ್ದರು. ಇದರಂತೆ ಇವರ ಪಕ್ಕದ ಜಮೀನಿನ ಮಾಲೀಕರಾದ ಸಂತೋಷ ಲಕ್ಷ್ಮಣ ಬಂಡಿ ಮತ್ತು ಕರೆಪ್ಪ ರಂಗಪ್ಪ ಗೌಡರ ಇವರು ತಮ್ಮ ಜಮೀನಿಗೆ ನೀರು ಉಣಿಸಲು ಹಳ್ಳದ ದಂಡೆಗೆ ಕರೆಂಟ್ ಮೋಟಾರ್ ಪಂಪ್‌ಸೆಟ್ ಕೂಡ್ರಿಸಿದ್ದರು. ತಮ್ಮ ಕರೆಂಟ್ ಮೋಟಾರ್ ಪಂಪ್ ಸೆಟ್‌ಗಳಿಂದ ಜಮೀನಿಗೆ ಹಳ್ಳದಿಂದ ನೀರನ್ನು ಉಣಿಸಿ ತಮ್ಮ ಮನೆಗೆ ಹೋಗುತ್ತಿದ್ದರು.

ಇದನ್ನು ಯಾರೋ ಹರಾಮಿ ಕಳ್ಳರು ಸೂಕ್ಷ್ಮವಾಗಿ ಗಮನಿಸಿ ಇತ್ತೀಚಿಗೆ ರಾತ್ರಿ ಸಮಯದಲ್ಲಿ ಅದ್ಯಾರಿಗೂ ಗೊತ್ತಿಲ್ಲದಂತೆ ಎಗರಿಸಿದ್ದರು. ಮರುದಿನ ತಮ್ಮ ಜಮೀನಿಗೆ ನೀರು ಉಣಿಸಲು ಬಂದಾಗಲೇ ಹಳ್ಳದ ದಂಡೆಗೆ ಕೂಡ್ರಿಸಿದ್ದ ತಮ್ಮ ಕರೆಂಟ್ ಮೋಟಾರ್ ಪಂಪ್‌ಸೆಟ್‌ಗಳು ಕಳ್ಳರ ಪಾಲಾಗಿವೆ ಎಂದು ತಿಳಿದುಕೊಂಡು ಯಲ್ಲಪ್ಪ ಪರಸಪ್ಪ ಧರೆನ್ನವರ, ಸಂತೋಷ ಲಕ್ಷ್ಮಣ ಬಂಡಿ ಮತ್ತು ಕರೆಪ್ಪ ರಂಗಪ್ಪ ಗೌಡರ ಕೈ-ಕೈ ಹಿಚುಕಿಕೊಂಡು ಚಿಂತಾಕ್ರಾಂತರಾದರು.

**ಪೊಲೀಸರಿಗೆ ದೂರು...**

ಹಳ್ಳದ ದಂಡೆಗೆ ಕರೆಂಟ್ ಮೋಟಾರ್ ಕೂಡ್ರಿಸಿದ್ದ ರೈತರೆಲ್ಲರೂ ಗೋಕಾಕದ ಗ್ರಾಮೀಣ ಪೊಲೀಸ್ ಠಾಣೆಗೆ ಧಾವಿಸಿ ಬಂದು ಅಂದು ಕರ್ತವ್ಯದ ಮೇಲಿದ್ದ ಪಿಎಸ್‌ಐ ಕಿರಣ ಮೋಹಿತೆ ಅವರನ್ನು ಕಂಡು ತಮ್ಮ ಮೂರು ಜನರ ಕರೆಂಟ್ ಮೋಟಾರ್ ಪಂಪ್‌ಸೆಟ್‌ಗಳನ್ನು ಅದ್ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದಾರೆಂದು ಯಲ್ಲಪ್ಪ ಪರಸಪ್ಪ ಧರೆನ್ನವರ ದೂರನ್ನು ದಾಖಲಿಸಿದನು.

ಒಂದೇ ದಿವಸ ಮೂವರು ರೈತರ ಪಂಪ್ ಸೆಟ್‌ಗಳು ಕಳ್ಳತನವಾಗಿದ್ದ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಪಿಎಸ್‌ಐ ಕಿರಣ ಮೋಹಿತೆಯವರು ಸಿಪಿಐ ಸುರೇಶಬಾಬು, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರ ಗಮನಕ್ಕೆ ತಂದು ಅದರ ನಿರ್ದೇಶನದಂತೆ ಕ್ರೈಂ ನಂ. 215/2024 ಕಲಂ 303(2) ಬಿಎನ್‌ಎಸ್ 2023ನೇದ್ದಕ್ಕೆ ಪ್ರಕರಣವನ್ನು ದಾಖಲಿಸಿಕೊಂಡರು. ತಡಮಾಡದೇ ಸಿಪಿಐ ಸುರೇಶಬಾಬು, ಪಿಎಸ್‌ಐ ಕಿರಣ ಮೋಹಿತೆ ಅವರು ತಮ್ಮ ಸಿಬ್ಬಂದಿಗಳೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿ ಪಂಚನಾಮೆ ಮಾಡಿದರು. ಸದರಿ ಪ್ರಕರಣದಲ್ಲಿ 5 ಹೆಚ್‌ಪಿಯ 2 ಕರೆಂಟ್ ಮೋಟಾರ್, 10ನೇ ಹೆಚ್‌ಪಿಯ 1 ಕರೆಂಟ್ ಮೋಟಾರ್ ಮನೋ ಬ್ಲಾಕ್ ಕಂಪನಿಯದ್ದು ಕಳುವಾಗಿದ್ದವು. ಇವುಗಳ ಮೌಲ್ಯ 86,500 ರೂ.ಗಳಾಗಿತ್ತು.

**ಕಳ್ಳರ ಪತ್ತೆಗೆ ವಿಶೇಷ ತಂಡ...**

ಸಿಪಿಐ ಸುರೇಶಬಾಬು ಕರ್ತವ್ಯದಲ್ಲಿ ತುಂಬಾ ದಕ್ಷ, ಚತುರತೆ ಮತ್ತು ಪ್ರಾಮಾಣಿಕತೆ, ಧಾಡಸಿತನ ಮೈಗೂಡಿಸಿಕೊಂಡ ಅಧಿಕಾರಿ. ದುಂಡಾನಟ್ಟಿಯಲ್ಲಿ ನಡೆದ ಕರೆಂಟ್ ಮೋಟಾರ್ ಪಂಪ್‌ಸೆಟ್‌ಗಳ ಕಳ್ಳತನವನ್ನು ಸವಾಲಾಗಿ ಸ್ವೀಕರಿಸಿದರು. ಪ್ರಕರಣ ಕುರಿತು ಡಿವೈಎಸ್ಪಿ ಡಿ.ಹೆಚ್.


ಡಿವೈಎಸ್ಪಿ ಡಿ.ಹೆಚ್. ಮುಲ್ಲಾ


ಸಿಪಿಐ ಸುರೇಶಬಾಬು



ಪಿಎಸ್‌ಐ ಕಿರಣ ಮೋಹಿತೆ

ಮುಲ್ಲಾ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ ಮತ್ತು ಡೈನಾಮಿಕ್ ಎಸ್ಪಿ ಡಾ. ಭೀಮಾಶಂಕರ್ ಗುಳೇದ ಅವರೊಂದಿಗೆ ವಿವರವಾಗಿ ಸಮಾಲೋಚಿಸಿದರು ಮತ್ತು ಸೂಕ್ತ ನಿರ್ದೇಶನಗಳನ್ನು ಪಡೆದುಕೊಂಡರು. ಅದರಂತೆ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ನಿರ್ದೇಶನದಂತೆ ಒಂದು ಧಾಡಸಿ ಸಿಬ್ಬಂದಿಗಳನ್ನು ಒಳಗೊಂಡಂತೆ ಒಂದು ತನಿಖಾ ತಂಡ ರಚಿಸಲು ಮುಂದಾದರು.

ಪಿಎಸ್‌ಐ ಕಿರಣ ಮೋಹಿತೆ, ಸಿಬ್ಬಂದಿಗಳಾದ ಬಿ.ವ್ಹಿ. ನೇರ್ಲಿ, ಜಗದೀಶ ಗುಡ್ಲಿ, ಎಂ.ವೈ. ಪಡದಲ್ಲಿ, ಡಿ.ಜಿ. ಕೊಣ್ಣೂರ, ಡಿ.ಬಿ. ಅಂತರಗಟ್ಟಿ, ಹೆಚ್.ಡಿ. ಗೌಡಿ, ಎನ್. ಎಲ್. ಮಂಗಿ, ವ್ಹಿ.ಎಲ್. ನಾಯಿಕವಾಡಿ, ಎನ್.ಜಿ. ದುರದುಂಡಿ ಹಾಗೂ ಬೆಳಗಾವಿಯ ಟೆಕ್ನಿಕಲ್ ಸೆಲ್‌ನ ವಿನೋದ ತಕ್ಕನವರ, ಸಚಿನ ಪಾಟೀಲ ಸೇರಿದಂತೆ ತಂಡ ರಚಿಸಿ ತಂಡದ ನೇತೃತ್ವವನ್ನು ಸಿಪಿಐ ಸುರೇಶಬಾಬು ವಹಿಸಿಕೊಂಡರು. ವಿಶೇಷ ತನಿಖಾ ತಂಡಕ್ಕೆ ಶತಾಯ-ಗತಾಯ ಕಳ್ಳರನ್ನು ಪತ್ತೆಹಚ್ಚಲೇಬೇಕು ಎಂದು ಅಗತ್ಯ ನಿರ್ದೇಶನಗಳನ್ನು ನೀಡಿ 'ಗೋ ಅಹೆಡ್' ಎಂದರು.

**ನಾಲ್ಕು ಜನ ಚಂಡಾಳ ಚೌಕಡಿಗಳ ಬಂಧನ...**

ಅಂದುಕೊಂಡ ಹಾಗೇ ವಿಶೇಷ ತನಿಖಾ ತಂಡ ಎರಡು ಗುಂಪುಗಳಾಗಿ ಕಳ್ಳರ ಪತ್ತೆಗೆ ಕಾರ್ಯಾಚರಣೆ ರೂಪಿಸತೊಡಗಿತು. ಖಚಿತ ಮಾಹಿತಿ ಆಧರಿಸಿ ನೇರವಾಗಿ ಕಾರ್ಯಾಚರಣೆಗೆ ಇಳಿದಿದ್ದ ವಿಶೇಷ ತನಿಖಾ ತಂಡಕ್ಕೆ ಕೆಲವು ಮಹತ್ವದ ಸುಳಿವುಗಳು ಘಟನಾ ಸ್ಥಳಗಳಲ್ಲಿ ದೊರೆತಿದ್ದವು. ಇವುಗಳು ತಾಂತ್ರಿಕವಾಗಿ ಮಹತ್ವದ ಸುಳಿವುಗಳಾಗಿದ್ದವು. ಅಂಗೈಯಲ್ಲಿ ಕರೆಂಟ್ ಮೋಟಾರ್ ಕಳ್ಳರ ಜಾತಕವನ್ನಿಟ್ಟುಕೊಂಡು ವಿಶೇಷ ತನಿಖಾ ತಂಡ ಸಿಪಿಐ ಸುರೇಶಬಾಬು ಅವರಿಗೆ ತಿಳಿಸಿದರು. ಅವರ ನಿರ್ದೇಶನದಂತೆ ತಕ್ಷಣ ನೆಲಗಂಟಿ ಗ್ರಾಮದ ಲಕ್ಷ್ಮಣ ಸತ್ತೆಪ್ಪ ತಳವಾರ, ಬಸಪ್ಪ ಲಕ್ಷ್ಮಣ ತಳವಾರ, ರಾಜು ಸತ್ತೆಪ್ಪನಾಯಿಕ ಮತ್ತು ಬೆಳಗಾವಿ ಮೂಲದ ಮೊಡಕಾ ವ್ಯಾಪಾರಿ ಅಪ್ರಾಪ್ತ ತರುಣ ಸೇರಿದಂತೆ ನಾಲ್ಕು ಜನರನ್ನು ವಶಕ್ಕೆ ತೆಗೆದುಕೊಂಡು ಸಿಪಿಐ ಸುರೇಶ ಬಾಬು ಅವರ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ಐನಾತಿ ಕಳ್ಳರು ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ, ವಿಧಿಯಿಲ್ಲದೇ ತಮ್ಮ ಕಳ್ಳತನಗಳ ಕೃತ್ಯ ಒಪ್ಪಿಕೊಂಡರು. ಮೂರು ಜನ ನೆಲಗಂಟಿಯ ಕಳ್ಳರಿಗೆ ಬೆಳಗಾವಿಯ ಅಪ್ರಾಪ್ತ ಸುಮಾರು ದಿನಗಳಿಂದ ಪರಿಚಯವಾಗಿದ್ದನು


ಚಂಡಾಲ ಚೌಕಡಿ ಕಳ್ಳರಿಂದ ಗೋಕಾಕ ಗ್ರಾಮೀಣ ಪೊಲೀಸರು 5.60 ಲಕ್ಷ ರೂ.ಗಳ ಸ್ವತ್ತು ವಶಪಡಿಸಿಕೊಂಡಿರುವುದು

**5.60 ಲಕ್ಷ ರೂ.ಗಳ ಸ್ವತ್ತು ವಶಕ್ಕೆ...**

ಬಂಧಿತ ನಾಲ್ವರು ಕಳ್ಳರು ದುಂಡಾನಟ್ಟಿಯಲ್ಲಿ

☞12

# ಸಾಧು ಶೆಟ್ಟಿ ನಂಬಿ ಸತ್ತವನ ಹೆಸರು ಸುರೇಶ್ ರೈ

2 ☞

ಅದೊಂದು ದಿನ ಪುತ್ತೂರಿನಿಂದ ಟಾಟಾಸುಮೋ ವಾಹನದಲ್ಲಿ ಮಂಗಳೂರಿಗೆ ಬಂದಿದ್ದ ಸುರೇಶ, ನೇರವಾಗಿ ಕೋರ್ಟ್ ಆವರಣಕ್ಕೆ ಬಂದು ನ್ಯಾಯವಾದಿ ಕಳ್ಳಿಗೆ ತಾರಾನಾಥ ಶೆಟ್ಟ ಅವರೊಂದಿಗೆ ಲೋಕಾಭಿರಾಮವಾಗಿ ಮಾತನಾಡಿದ. ಮತ್ತೆ ಮುತ್ತಪ್ಪರೈಯನ್ನು ಬೈಯತೊಡಗಿದ. ಛೋಟಾರಾಜನ್, ಸಾಧು ಶೆಟ್ಟಿ, ಆಸ್ಟ್ರೇಲಿಯಾ ಅಂತೆಲ್ಲ ಬಡ ಬಡಿಸಿದ. ಪುತ್ತೂರಿನ ತನ್ನ ಹೈಸ್ಕೂಲ್ ದಿನಗಳ ಸಹಪಾಠಿಯಾಗಿದ್ದ ಸಂಜೆ ಪತ್ರಿಕೆಯ ವರದಿಗಾರರೊಂದಿಗೆ ಕೆ.ಎಸ್. ರಾವ್ ರಸ್ತೆಯಲ್ಲಿದ್ದ ಜನತಾ ಡಿಲೆಕ್ಸ್ ಹೋಟೆಲ್‌ನಲ್ಲಿ ಊಟ ಮುಗಿಸಿದ.

ಹೋಟೆಲ್‌ನ ವಾಶ್ ಬೇಸನ್ ಬಳಿ ದಿಢೀರ್ ಪ್ರತ್ಯಕ್ಷನಾಗಿದ್ದ ಬೇಕೂರು ಪ್ರವೀಣ ಗೊಂದಲಕ್ಕೊಳಗಾದಂತಿದ್ದ ಸುರೇಶ ಮತ್ತು ವರದಿಗಾರರಿಗೆ ನಮಸ್ಕಾರ ಹೇಳಿ ಪುಟ್ಟ ಕೈ ಚೀಲದೊಂದಿಗೆ ಅಲ್ಲಿಂದ ಹೊರಟು ಹೋದ.

ನಂತರ ಅದೇ ಟಾಟಾ ಸುಮೋ ಕಾರು ಬಂದು ನಿಂತದ್ದು ಕೆ.ಎಸ್. ರಾವ್ ರಸ್ತೆಯ ಹೋಟೆಲ್ ಪೂಂಜ ಆರ್ಕೆಡ್ ಆವರಣದೊಳಕ್ಕೆ. ಅಲ್ಲಿನ ನೆಲ ಮಾಳಿಗೆಯ ಟೆಲಿಫೋನ್ ಬೂತೊಂದರಲ್ಲಿ ಕೆಲಸಕ್ಕಿದ್ದ ಹುಡುಗಿಯೊಂದಿಗೆ ಸುರೇಶ್‌ಗೆ ಸಂಪರ್ಕವಿತ್ತು. ಪದೇ ಪದೇ ಆತ ಅಲ್ಲಿಗೆ ಭೇಟಿ ನೀಡುತ್ತಿರುವ ವಿಷಯ ಹಂತಕರಿಗೂ ತಿಳಿದಿತ್ತು.

ಒಂದೈದು ನಿಮಿಷದಲ್ಲಿ ಪ್ರವೀಣ್ ನೇತೃತ್ವದ ನಾಲ್ವರು ಹಂತಕರು ಹೋಟೆಲ್ ತಳ ಭಾಗದ ಮೂಲೆಯಲ್ಲಿ ಅಲರ್ಟ್ ಆಗಿ ನಿಂತರು. ಎದುರಿಗಿದ್ದವನು ಬೇಕೂರು ಪ್ರವೀಣ. ಜೊತೆಗಿದ್ದವರು ಅಡ್ಯಾರ್‌ನ ಶೇಖರ ಶೆಟ್ಟಿ, ಮಡಿಕೇರಿಯ ಲಕ್ಷ್ಮಣ ಮತ್ತು ಬೆಂಗಳೂರಿನ ರವಿ.

ಮುತ್ತಪ್ಪ ರೈಯ 'ನೀಲಿ ಕಣ್ಣಿನ ಹುಡುಗ'ನಿಗೆ ಮುಹೂರ್ತ ಸನ್ನಿಹಿತವಾಗಿತ್ತು!

ಟೆಲಿಫೋನ್ ಬೂತ್‌ನ ಸುಂದರ ಯುವತಿಯೊಂದಿಗೆ ಹರಟೆ ಹೊಡೆಯುತ್ತಿದ್ದ ಸುರೇಶ ರೋಮ್ಯಾಂಟಿಕ್ ಮೂಡ್‌ನಲ್ಲಿದ್ದ. ಮತ್ತೊಮ್ಮೆ ಅವನೆದುರಿಗೆ ಪ್ರತ್ಯಕ್ಷನಾದವನನ್ನು ನೋಡಿ 'ದಾನೆ ಮೂಲು ಪ್ರವೀಣ?' ಅಂತ ಕೇಳಿದ. 'ಎಡ್ಡೆ' ಎಂದಷ್ಟೇ ಪ್ರವೀಣ್ ಉತ್ತರಿಸಿದ. ಶೇಕ್ ಹ್ಯಾಂಡ್ ನೀಡಲು ಮುಂದಕ್ಕೆ ಬಂದ ಸುರೇಶನ ಬಲ ಕೈಯನ್ನು ಹಿಡಿದುಕೊಂಡವನೇ ಎಡಕೈಯನ್ನು ನಿಧಾನವಾಗಿ ಸೊಂಟದ ಬದಿಗೆ ಸರಿಸಿ ಬೆನ್ನಿನ ಭಾಗದಲ್ಲಿ ಅಡಗಿಸಿದ್ದ ಚಾಕು ಹೊರತೆಗೆದ. ಅದಕ್ಕೆ ಎರಡು ಕಡೆ ಮೊನಚಾದ ತುದಿಗಳಿತ್ತು. ಜೊತೆಗೆ ಹಿತ್ತಾಳೆಯ ಹಿಡಿ, ಅದು ಒಂದೇ ಒಂದು ಕ್ಷಣದ ಘಟನೆ. ಪ್ರವೀಣ್ ಮೈಯೊಳಗೆ ಹುಚ್ಚುಶಕ್ತಿ ನುಗ್ಗಿ ಬಂದಂತಾಯ್ತು, ಬಲ ಕೈಯಲ್ಲಿ ಅವನನ್ನು ಹಿಡಿದಿಟ್ಟವನೇ ಚಾಕು ಹಿಡಿದಿದ್ದ ಎಡಕೈಯನ್ನು ಅವನತ್ತ ನುಗ್ಗಿಸಿದ. 'ಏಯ್' ಅಂತ ಆತ ಅರಚುವ ಹೊತ್ತಿಗಾಗಲೇ ಹೊಟ್ಟೆಗೆ ನುಗ್ಗಿದ ಚಾಕು ಬೆನ್ನಿನ ಒಂದು ಬದಿಗೆ ಬಂದು ನಿಂತಿತು. 'ಮೋಸ' ಅಂತ ಸುರೇಶ್ ಅಂದುಕೊಳ್ಳುವಷ್ಟರಲ್ಲಿ ಪ್ರವೀಣ ಮತ್ತೊಮ್ಮೆ ದೇಹ ತಾಗುವಷ್ಟು ಹತ್ತಿರಕ್ಕೆ ಬಂತು ನಿಂತಿದ್ದ. ಸುರೇಶನಿಗಾಗ ಸಾವು ಅಸ್ಪಷ್ಟವಾಗಿ ಕಣ್ಣೆದುರಿನ ಗೋಡೆಯ ಮೇಲೆ ಸರಿದಾಡಿದಂತಾಯಿತೇನೋ. ಮೊದಲ ಇರಿತ ಸರಿಯಾಗಿ ಹೊಟ್ಟೆಯ ಬಲಬದಿಗೆ ಬಿದ್ದಿತ್ತು. 'ಪ್ರವೀಣ ಬೋಡ್ಚಿಯಾ' ಇದು ಸುರೇಶ್ ಬಾಯಿಂದ ಬಂದ ಕಟ್ಟಕಡೆಯ ಮಾತು. ಮುಂದಿನ ಶಬ್ದ ಹೇಳುವಷ್ಟರಲ್ಲಿ ಪ್ರವೀಣ್ ಮತ್ತೆರಡು ಸಲ ಎದೆಗೆ ಇರಿದುಬಿಟ್ಟ.


ಪ್ರವೀಣ್ ಶೆಟ್ಟಿ ಮತ್ತು ಮುತ್ತಪ್ಪ ರೈ

''ಅಮ್ಮ ಅಂತ ಕೂಗಿದನಾದರೂ ಪೂರ್ತಿ ಶಬ್ದ ಹೊರಗೆ ಬರಲೇ ಇಲ್ಲ. ಅಷ್ಟರಲ್ಲಾಗಲೇ ನನ್ನೊಂದಿಗೆ ಇದ್ದವರು ತಲವಾರಿನಿಂದ ಕಾಲಿಗೆ ಕಡಿದುಬಿಟ್ಟಿದ್ದರು. ಓಡಿ ಹೋಗಬಾರದು ಅಂತ. ಕೊನೆ ನಿಮಿಷದಲ್ಲಿ ತುಂಬಾ ಕೊಸರಾಡಿದ. ಕಿರುಚಿ ಕಿರುಚಿ ಬೇಡಿಕೊಂಡ. ಆದರೆ ಆ ಹೊತ್ತಿಗಾಗಲೇ ಚಾಕು ಮೂರ್‍ನಾಲ್ಕು ಬಾರಿ ಪೂರ್ತಿಯಾಗಿ ಮೈಯೊಳಗೆ ಇಳಿದಾಗಿತ್ತು. ದೇಹ ವಾಲಾಡುತ್ತಿತ್ತು. ಓಡಲು ಯತ್ನಿಸಿದನಾದರೂ ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ನನ್ನ ಜೊತೆಗಿದ್ದವರು ತಲವಾರಿನಿಂದ ಕಡಿಯಲಾರಂಭಿಸಿದರು. ಬೆಂಗಳೂರು ಭೂಗತ ಲೋಕದ ಮುಕುಟವಿಲ್ಲದ ಮಹಾರಾಜ ಮುತ್ತಪ್ಪ ರೈನ ನೀಲಿ ಕಣ್ಣಿನ ಹುಡುಗ ಸುರಿಯುತ್ತಿರುವ ನೆತ್ತರ ಸಮೇತ ಅಲ್ಲೇ ಕುಸಿದುಬಿದ್ದ. ಹಾಗಂತ ನನಗೆ ಕೊಟ್ಟ ಸಂದರ್ಶನದಲ್ಲಿ ಒಂದು ಹಂತದ ಕಥೆ ಹೇಳಿ ಮುಗಿಸಿದ ಪ್ರವೀಣ್ ಚಂದ್ರಶೆಟ್ಟಿ ನೆನಪುಗಳ ನಿಟ್ಟುಸಿರಿನಲ್ಲಿ ಮುಳುಗಿ ಹೋಗಿದ್ದ.

''ಕೆಲಸ ಮುಗಿದ ನಂತರ ನಮ್ಮನ್ನು ಯಾರಾದರೂ ಗಮನಿಸುತ್ತಿದ್ದಾರಾ? ಅಂತ ನೋಡಿದೆವು. ತಲವಾರು, ರಕ್ತ, ಹಣ ಒಟ್ಟೊಟ್ಟಿಗೆ ನೋಡಿದವರೆಲ್ಲರೂ ಚೆಲ್ಲಾಪಿಲ್ಲಿ ಆಗಿದ್ದರು. ಆನಂತರ ನಾವು ನಾಲ್ಕು ಜನ ಆಯುಧಗಳನ್ನು ಬ್ಯಾಗ್ ಒಳಗೆ ಇರಿಸಿ ಏಳು ಅಂತಸ್ತಿನ ಹೋಟೆಲ್ ಕಟ್ಟಡದ ಎದುರಿನ ರಸ್ತೆ ದಾಟಿ ಹಂಪನ ಕಟ್ಟೆ ಬಸ್ ಸ್ಟ್ಯಾಂಡಿಗೆ ಬಂದೆವು. ಎಲ್ಲರೂ ಒಂದು ಲಾಂಗ್ ಸಿಗರೇಟ್ ಸೇದಿದೆವು. ಅಲ್ಲಿಂದ ಮುಂದೆ ಏನೇನೋ ಆಗಿಲ್ಲ ಎಂಬಂತೆ ಬಲ್ಮಠದ ಕಡೆ ನಡೆದು ಹೋದದ್ದು ಮತ್ತು 'ಅಣ್ಣ'ನಿಗೆ ಪೋನ್ ಮಾಡಿ ವಿಷಯ ತಿಳಿಸಿದ್ದು'' ಅಂದಿದ್ದ ಪ್ರವೀಣ್ ಶೆಟ್ಟಿ.

ಘಟನೆ ನಡೆದ ಸ್ವಲ್ಪ ಹೊತ್ತಿನಲ್ಲೇ ಹೋಟೆಲ್ ಕಾಂಪ್ಲೆಕ್ಸ್ ಪೊಲೀಸರಿಂದ ಗಿಜಿಗುಟ್ಟುತ್ತಿತ್ತು. ಮೊದಲು ಸ್ಪಾಟ್‌ಗೆ ಬಂದವರೇ ಹೋಟೆಲ್ ಮಾಲೀಕರಾಗಿದ್ದ ಪ್ರಭಾಕರ್ ಪೂಂಜ. ತನ್ನದೇ ಕಾಂಪ್ಲೆಕ್ಸ್‌ನಲ್ಲಿ ನಡೆದ ಈ ಹತ್ಯಾಕಾಂಡದಿಂದ ಕೋಪದಲ್ಲಿ ಅವರ ತುಟಿ ನಡುಗುತ್ತಿತ್ತು. ಅಷ್ಟರಲ್ಲಿ ಇನ್ಸ್‌ಪೆಕ್ಟರ್ ಸುಭಾಷ್‌ಚಂದ್ರ ಬಂದಾಗಿತ್ತು. ನಂತರ ರೌಡಿ ನಿಗ್ರಹದಳದ ಮುಖ್ಯಸ್ಥರಾಗಿದ್ದ ಜಯಂತ್ ಶೆಟ್ಟಿ, ಅಶೋಕನ್ ಜೊತೆಯಾದರು. ಅಷ್ಟರಲ್ಲಾಗಲೇ ಸುರೇಶ್ ದೇಹ ತಣ್ಣಗಾಗಿತ್ತು. ಮೊಟ್ಟಮೊದಲ ಬಾರಿಗೆ ರಕ್ತಪಾತವೊಂದನ್ನು ಕಣ್ಣಾರೆ ಕಂಡ ಟೆಲಿಫೋನ್ ಬೂತಿನ ಹುಡುಗಿ ಭಯದಿಂದ ಮೂಲೆ ಸೇರಿದ್ದಳು. ನಂತರ ಶುರುವಾಗಿದ್ದೆ ಪೊಲೀಸ್ ತನಿಖೆ.

ಆವತ್ತು ರಾತ್ರಿಯೇ ದುಬೈನ ಮುತ್ತಪ್ಪ ರೈ ಬಂಗಲೆಯಿಂದ ಪಣಿಯೂರಿನ ಮನೆಗೆ ಮತ್ತೊಮ್ಮೆ ಫೋನ್ ಹೋಗಿತ್ತು. ಮತ್ತದೇ ನಮಸ್ಕಾರ... ವಿಠ್ಠಲ... ವಿನಿಮಯವಾಯಿತು.

ಸುರೇಶ್ ರೈ ಹತ್ಯೆಯಾಗಲಿದ್ದಾನೆ ಎಂಬ ವಿಷಯವನ್ನು ಮುತ್ತಪ್ಪರೈ ಎಷ್ಟೇ ಗುಟ್ಟಾಗಿ ಇಟ್ಟಿದ್ದರೂ ಪತ್ನಿ ರೇಖಾಗೆ ಅದು ಗೊತ್ತಿತ್ತು. ಎಷ್ಟಾದರೂ ತಮ್ಮ ಮನೆಯಲ್ಲಿ ಉಂಡು ಬೆಳೆದವನು. ತಮ್ಮನಂತಹ ಹುಡುಗ. ಈಗ ನೋಡಿದರೆ ಹಣದ ವ್ಯವಹಾರದಲ್ಲಿ ಶತ್ರುತ್ವ ಕಟ್ಟಿಕೊಂಡಿದ್ದಾನೆ. ''ನನ್ನ ಗಂಡನ ಕೋಪ ಮತ್ತು ತಾಕತ್ತು ನಿಮಗೂ ತಿಳಿದಿದೆ. ಒಮ್ಮೆ ಸುರೇಶ್‌ನಿಂದ ಸಾರಿ ಹೇಳಿಸಿಬಿಡಿ. ಮತ್ತೊಮ್ಮೆ ದುಬೈಗೆ ಬಂದು ಕೂತು ಮಾತನಾಡಿ ಬಿಡಲಿ. ಎಲ್ಲ ಸರಿಹೋಗುತ್ತದೆ'' ಅಂತ ಮಂಗಳೂರಿನಲ್ಲಿ ರೈ ಆಪ್ತರಾಗಿದ್ದ ಕೆ.ಎಸ್. ರಾವ್ ರಸ್ತೆಯ ಫೋರ್ ವಿಂಗ್ಸ್ ಟ್ರಾವೆಲ್ ಸಂಸ್ಥೆಯ ಆಡಳಿತ ನಿರ್ದೇಶಕ ಪುಷ್ಪರಾಜ್ ಶೆಟ್ಟಿ ಮತ್ತು ತಮ್ಮ ಕುಟುಂಬಕ್ಕೆ ಆತ್ಮೀಯರಾಗಿದ್ದ ಮಂಗಳೂರಿನ ಸಂಜೆ ಪತ್ರಿಕೆ ವರದಿಗಾರರ ಬಳಿ ಎರಡೆರಡು ಬಾರಿ ವಿನಂತಿಸಿದ್ದರು. ತಮ್ಮ ಮನೆಯಲ್ಲೇ ನಿಂತಿದ್ದ ನ್ಯಾಯವಾದಿ ರವೀಂದ್ರನಾಥ ರೈ ಅವರಿಗೂ ವಿಷಯ ತಲುಪಿಸಿದ್ದರು.

ಟ್ರಾವೆಲ್ ಮಾಲೀಕರು ಕಚೇರಿಗೆ ಕರೆದು ಬುದ್ದಿ ಹೇಳಿದರು. ಸುರೇಶ್ ಕ್ಯಾರೇ ಅನ್ನಲಿಲ್ಲ, ನ್ಯಾಯವಾದಿ ರೈ, 'ವಿಷಯ ಹೀಗೀಗಿದೆ' ಅಂತ ಎಸ್‌ಡಿಎಂ ಲಾ ಕಾಲೇಜಿನ ದಿನಗಳಲ್ಲಿ ಮಿತ್ರ, ರೌಡಿ ನಿಗ್ರಹದಳದ ಸಬ್‌ಇನ್ಸ್‌ಪೆಕ್ಟರ್ ಅಶೋಕನ್‌ಗೆ ಸುದ್ದಿ ಮುಟ್ಟಿಸಿದರು. ಸುರೇಶ್‌ಗೆ ಜಾಗ್ರತೆಯಾಗಿರಲು ಹೇಳಿ. ಅಥವಾ ಕ್ಷಮೆ ಕೇಳಲು ಹೇಳಿಬಿಡಿ ಅಂತಲೂ ಒಂದು ಮಾತು ಸೇರಿಸಿದರು. ಇನ್ನು ಸಂಜೆ ಪತ್ರಿಕೆಯ ವರದಿಗಾರರ ಹೈಸ್ಕೂಲ್ ದಿನಗಳ ಸಹಪಾಠಿ ಆತ. ಇಬ್ಬರೂ ಪುತ್ತೂರಿನವರು. ''ನೋಡು ಸುರೇಶ, ನನಗೀಗ 30 ವರ್ಷ. ದುಡ್ಡು ಬೇಕು ಅಂದರೆ ದುಡಿಯಲು ಸಾವಿರ ದಾರಿ ಇದೆ. ಇದೆಲ್ಲ ಎಷ್ಟು ದಿನ ಅಂತ ನಡೆಯುತ್ತದೆ. ಸುಮ್ಮನೆ ಯಾಕೆ ಶತ್ರುತ್ವ? ಒಮ್ಮೆ ಎಂಆರ್‌ಗೆ ಮಾತನಾಡಿ ಕ್ಷಮೆ ಕೇಳಿಬಿಡು. ಸರಿ ಹೋಗುತ್ತದೆ. ನಾನು ಮತ್ತು ಟ್ರಾವೆಲ್ಸ್ ಮಾಲೀಕರು ಕೂಡ ಒಂದು ಮಾತು ಹೇಳುತ್ತೇವೆ'' ಅಂತ ಅದೇ ದಿನ ಮಧ್ಯಾಹ್ನ ಜನತಾ ಡಿಲಕ್ಸ್ ಹೋಟೆಲ್‌ನಲ್ಲಿ ಕೂತು ಹೇಳಿದರು. ಆತ ಕೇಳಲಿಲ್ಲ. ''ನಿನಗೆ ನನ್ನ ತಾಕತ್ತಿನ ಪರಿಚಯವೇ ಇಲ್ಲ ಪೂರ್ಣಾ. ನಾನೀಗ ಅಂತಾರಾಷ್ಟ್ರೀಯ ಡಾನ್‌ನ ಟಚ್‌ನಲ್ಲಿದ್ದೇನೆ. ಮುತ್ತಪ್ಪ ರೈ ಆತನಿಗೆ ಕಸದ ಸಮಾನ, ನಿನ್ನ ಪತ್ರಿಕೆಗೆ ಛೋಟಾರಾಜನ್ ಸಂದರ್ಶನ ಬೇಕಾಯ ಹೇಳು. ನಾನೇ ಮಾತನಾಡಿಸುತ್ತೇನೆ'' ಅಂತ ಹೇಳಿ ಹೊರಟವನು ಒಂದೇ ಒಂದು ಗಂಟೆಯೊಳಗಾಗಿ ಕೊಲೆಯಾಗಿ ಹೋಗಿದ್ದ.

ಸುರೇಶನ ಸಾವಿನ ಸುದ್ದಿ ಕೇಳಿ ಮಧ್ಯಾಹ್ನವಷ್ಟೇ ಸಂಭ್ರಮಿಸಿದ್ದ ಮುತ್ತಪ್ಪ ರೈ, ಸುರೇಶನೊಂದಿಗಿನ ಗೆಳೆತನವನ್ನು ನೆನೆದು ಅಂದು ರಾತ್ರಿಯೇ ನ್ಯಾಯವಾದಿ ರವೀಂದ್ರನಾಥ ರೈ ಅವರನ್ನು ತಬ್ಬಿ ಕಣ್ಣೀರು ತಂದುಕೊಂಡರಂತೆ ಎಂಬುದು ಮಾತ್ರ ಸುದ್ದಿ ಆಗಲೇ ಇಲ್ಲ.

ಸುರೇಶ್ ರೈ ಹತ್ಯೆಯ ನಂತರ ಮುತ್ತಪ್ಪರೈ ಜೊತೆಗೆ ಬೇರೆ ಯಾರ್‍ಯಾರು ಖುಷಿ ಪಟ್ಟರೋ ಗೊತ್ತಿಲ್ಲ, ಪುತ್ತೂರಿನ ಒಂದು ಕಾಲದ ಡಾನ್ ಜಯಂತ್ ರೈ ಆತ್ಮ ಮಾತ್ರ ಸಮಾಧಾನದ ನಿಟ್ಟುಸಿರುಬಿಟ್ಟಿತ್ತಂತೆ ಅನ್ನುವುದು ಮಾತ್ರ ಸದ್ದು ಮಾಡಿತ್ತು.

ಸಾಯುವ ಮೊದಲು ಮನುಷ್ಯ ಬಹಳ ಮಾತನಾಡುತ್ತಾನಾ? ಗೊತ್ತಿಲ್ಲ. ಸುರೇಶ್ ರೈ ಹಾಗೆ ಮಾತನಾಡುವುದನ್ನು ರೂಢಿ ಮಾಡಿಕೊಂಡಿದ್ದ. ಅದೂ ತನ್ನ ಒಂದು ಕಾಲದ ಗುರು ಮುತ್ತಪ್ಪ ರೈ ವಿರುದ್ಧ. ☯

# ರೈತರ ಪಂಪ್‌ಸೆಟ್‌ಗಳನ್ನು ಕದಿಯುತ್ತಿದ್ದ ನಾಲ್ವರು ಚಂಡಾಳ ಚೌಕಡಿ

11 ☞

ಕರೆಂಟ್ ಮೋಟಾರ್ ಪಂಪ್ ಸೆಟ್‌ಗಳನ್ನು ಕಳ್ಳತನ ಮಾಡಿಕೊಂಡು ಅವುಗಳನ್ನು ಮಾರಿ ಬಂದ ಹಣ ಹತ್ತಿರವಿರಿಸಿಕೊಂಡಿದ್ದರು. ಬಂಧಿತರಿಂದ 86 ಸಾವಿರ ನಗದು ಹಣ, ಕೃತ್ಯಕ್ಕೆ ಬಳಸಿದ ಗೂಡ್ಸ್ ವಾಹನ ಅಂದಾಜು 4 ಲಕ್ಷ ರೂ.ಗಳು, ಎರಡು ಮೋಟಾರ್ ಬೈಕ್ ಅಂದಾಜು 80 ಸಾವಿರ ಹೀಗೆ ಒಟ್ಟು 5.60 ಲಕ್ಷ ರೂ.ಗಳ ಮೌಲ್ಯದ ಸ್ವತ್ತನ್ನು ವಶಪಡಿಸಿಕೊಂಡು ಕಳ್ಳತನದಲ್ಲಿ ಭಾಗಿಯಾದ ಅಪ್ರಾಪ್ತನನ್ನು ರಿಮ್ಯಾಂಡ್ ಹೋಂಗೆ ಸೇರಿಸಲಾಯಿತು. ಉಳಿದವರನ್ನು ಮೂವರನ್ನು ಜೈಲಿಗೆ ಅಟ್ಟಲಾಗಿದೆ. ಜೈಲಿನ ಕಂಬಿಗಳ ಹಿಂದೆ ತಂಗಲು ಮುರಿಯುತ್ತಲಿದ್ದಾರೆ.

**ಶ್ಲಾಘನೆ...**

ಗ್ರಾಮೀಣ ಪ್ರದೇಶದ ರೈತರಿಗೆ ಕಂಟಕಪ್ರಾಯರಾಗಿದ್ದ ಹರಾಮಿ ಕಳ್ಳರನ್ನು ಬಂಧಿಸಿ ಅವರಿಂದ 5.60 ಲಕ್ಷ ರೂ.ಗಳನ್ನು ವಶಪಡಿಸಿಕೊಂಡ ಗೋಕಾಕ ಸಿಪಿಐ ಸುರೇಶಬಾಬು ನೇತೃತ್ವದಲ್ಲಿ ಪಿಎಸ್‌ಐ ಕಿರಣ ಮೋಹಿತೆ ಮತ್ತು ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ವಿಶೇಷ ತನಿಖಾ ತಂಡದ ಸಿಬ್ಬಂದಿಗಳನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರುಗಳು ಶ್ಲಾಘಿಸಿದ್ದಾರೆ. ಸಾರ್ವಜನಿಕರು ಕೂಡಾ ಗೋಕಾಕ ಗ್ರಾಮೀಣ ಪೊಲೀಸರ ಕಾರ್ಯವೈಖರಿಗೆ ಅಭಿನಂದಿಸಿದ್ದಾರೆ. ☯


ಕಳ್ಳತನದ ಕೃತ್ಯಕ್ಕೆ ಬಳಸಿದ ಪಿಕಪ್ ವಾಹನ ಮತ್ತು ಬೈಕ್‌ಗಳು ಹಾಗೂ ಹಣ ಜಪ್ತಿ ಮಾಡಿಕೊಂಡಿರುವುದು


ವಿಶೇಷ ತನಿಖಾ ತಂಡದ ಸಿಬ್ಬಂದಿಗಳಾದ ಬಿ.ವ್ಹಿ. ನೇರ್ಲಿ, ಜಗದೀಶ ಗುಡ್ಡಿ, ಡಿ.ಜಿ. ಕೊಣ್ಣೂರ, ವ್ಹಿ.ಎಲ್. ನಾಯಕವಾಡಿ, ಡಿ.ಬಿ. ಅಂತರಗಟ್ಟಿ, ಎನ್.ಜಿ. ದುರದುಂಡಿ, ಹೆಚ್.ಡಿ. ಗೌಡಿ ಹಾಗೂ ಟೆಕ್ನಿಕಲ್ ಸೆಲ್‌ನ ವಿನೋದ ಠಕ್ಕನ್ನವರ

# ಪಾತಕ ಪ್ರಪಂಚ

# ಸಾವಿನ ಹುಚ್ಚ...!

ಈ ಜಗತ್ತಿನಲ್ಲಿ ಎಂತೆಂತಹ ವಿಚಿತ್ರ ವ್ಯಕ್ತಿಗಳು ಮತ್ತು ವಿಲಕ್ಷಣವಾದ, ತುಂಬಾ ಅಸಹಜವಾದ ಮತ್ತು ಅವರಿಗೆ ಪೈಶಾಚಿಕ ತೃಪ್ತಿ ಉಂಟು ಮಾಡುವಂತ ಆಟಗಳನ್ನು, ಬರೀ ಆಟವಲ್ಲ, ವಿಚಿತ್ರವಾದ ಆಟಗಳನ್ನು ಆಡುತ್ತಾರೆ. ಅಂತಹ ವಿಚಿತ್ರ ಕ್ರೇಜ್ ಬೆಳೆಸಿಕೊಂಡಿದ್ದ ಒಬ್ಬ ವ್ಯಕ್ತಿ ನಮ್ಮ ದೇಶದಲ್ಲೇ ಇದ್ದನು.

ರಾಜ್ಯ – ಆಂಧ್ರಪ್ರದೇಶ, ಗುಂಟೂರು ಪ್ರಾಂತ್ಯ, ಕಾಲಾವಧಿ– 2005ರಿಂದ 2007.

●●●

ಸಲೀಂ ಅವಳಿಗೆ ಫೋನ್ ಮಾಡಿದನು. ಆದರೆ ರಿಂಗ್ ಆಗುತ್ತಿದ್ದರೂ, ಅಟೆಂಡ್ ಮಾಡಿರಲಿಲ್ಲ. ನಾಲ್ಕಾರು ಸಲ ಮಾಡಿದರೂ ಪ್ರಯೋಜನ ಆಗಲಿಲ್ಲ.

ರಾತ್ರಿ ಎಂಟು ಗಂಟೆ. ಸಲೀಂಗೆ ಫೋನ್ ಕಾಲ್ ಬಂದಿತು. ಅವನು ನಂಬರ್ ನೋಡಿದನು.

ರಾಧಮಲ್ಲಿಕ ಮಾಡಿದ್ದಾಳೆ!

ಅವನಿಗೆ ಕೋಪ ಬಂದಿತು. ಮಧ್ಯಾಹ್ನದಿಂದ ಫೋನ್ ಮಾಡುತ್ತಿದ್ದಾನೆ. ಆದರೆ ಅವಳು ಈಗ ಉತ್ತರಿಸುತ್ತಿದ್ದಾಳೆ.

"ಏ ರಾಧಮಲ್ಲಿಕ... ಛೇ... ಛೇ... ನೀನು ಸೂಪರ್, ಬಂಪರ್ ಆಫರ್ ಕಳ್ಕೊಂಡೆ. ಅದ್ಯಾಕೆ ಫೋನ್ ಅಟೆಂಡ್ ಮಾಡಲಿಲ್ಲ. ನಿನಗೆ ಏನಾಗಿತ್ತು! ದೆಹಲಿಯಿಂದ ವಜ್ರದ ವ್ಯಾಪಾರಿ ಸ್ಟಾರ್ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದ. ಅವನಿಗೆ ನಿನ್ನ ಫೋಟೋಗಳ ಆಲ್ಬಂ ತೋರಿಸಿದೆ. ಅವರಿಗೆ ತುಂಬಾ ಖುಷಿಯಾಗಿತ್ತು. ಅವನು ಹೇಳಿದಂತೆ ಕೋ ಆಪರೇಟ್ ಮಾಡಿ ಖುಷಿ ಕೊಟ್ಟೆ, ಒಂದು ರಾತ್ರಿಗೆ ಐವತ್ತು ಸಾವಿರ ಕೊಡ್ತೀನಿ ಅಂತ ಹೇಳಿದ್ದ. ನಿನಗೆ ಹಣದ ಕೊಬ್ಬು ಜಾಸ್ತಿಯಾಗಿದೆ. ಅದಕ್ಕೆ ಫೋನ್ ಅಟೆಂಡ್ ಮಾಡದೆ ಅವಕಾಶ ಕಳ್ಕೊಂಡೆ."

ಅವನು ಕೋಪದಿಂದ ಎಗರಾಡುತ್ತಿದ್ದಾರೆ.

ಅವಳಿಂದ ಉತ್ತರ ಬರಲಿಲ್ಲ.

"ಏ... ಯಾಕೆ ಮಾತಾಡುತ್ತಿಲ್ಲ?"

"ಇನ್ನು ನಾಲ್ಕು ದಿವಸ ನನಗೆ ಫೋನ್ ಮಾಡ್ಬೇಡ. ನಾನು... ನಾನು ಅಟೆಂಡ್ ಮಾಡೋಲ್ಲ."

ಅವನಿಗೆ ಗಾಬರಿ ಆಯಿತು.

"ಯಾಕೆ... ಏನಾಯ್ತು ? ಆರೋಗ್ಯವಾಗಿದ್ದೀಯ ತಾನೇ" ಎಂದು ಕೇಳಿದನು.

ಅವಳಿಂದ ಉತ್ತರ ಬರಲಿಲ್ಲ.

"ಹಲೋ... ಹಲೋ..."

ಆಗ ಕೇಳಿಸಿತು ಬೇರೊಂದು ಹೆಣ್ಣಿನ ಧ್ವನಿ. ಆ ಧ್ವನಿಯ ಪರಿಚಯ ಇವನಿಗೆ ಇದೆ.

ರಾಧಮಲ್ಲಿಕಾಳ ಸೋದರತ್ತೆ.

ಆಕೆ ದೇವಿರಮ್ಮ.

"ಏ ಸಲೀಂ... ಅವಳು ನಾಲ್ಕು ದಿವಸ ಹೊರಗೆ ಬರೋಲ್ಲ. ಅವಳನ್ನ ಕಸ್ಟಮರ್‌ಗಳಿಗೆ ಬುಕ್ ಮಾಡ್ಬೇಡ."

"ಯಾಕೆ ದೇವಿರಮ್ಮ ಏನಾಯ್ತು . ಅವಳು ಆರೋಗ್ಯವಾಗಿದ್ದಾಳೆ ತಾನೆ?"

"ಆರೋಗ್ಯಕ್ಕೇನೂ ರೋಗ ಬಂದಿಲ್ಲ."

"ಹಾಗಾದರೆ ಏನಾಗಿದೆ?"

"ದೆವ್ವ... ಭೂತ ನೋಡಿ ಹೆದರಿದ್ದಾಳೆ. ಆ ಭಯದಿಂದ ಜ್ವರ ಬಂದಿದೆ."

"ಏನು... ದೆವ್ವನಾ?"

"ಹೌದು... ದೆವ್ವನ ತುಂಬಾ ಹತ್ತಿರದಿಂದ ಒಂದು ಗಂಟೆ ನೋಡಿದ್ದಾಳೆ."

ಅವನಿಗೆ ತಲೆ ಬಿಸಿ ಆಗುತ್ತಿದೆ.

"ಏ ದೇವಿರಮ್ಮ... ನೀನು ಏನೇನೋ ಮಾತಾಡ್ತ ಇದ್ದೀಯಲ್ಲ. ಈ ಕಾಲದಲ್ಲಿ ದೆವ್ವ, ಭೂತ ಇದೆ ಅಂದ್ರೆ ಯಾರು ನಂಬುತ್ತಾರೆ?"

ದೇವಿರಮ್ಮ ರೇಗುತ್ತಾ "ದೆವ್ವನ ಯಾರು ಪ್ರತ್ಯಕ್ಷವಾಗಿ ನೋಡಿರುತ್ತಾರೋ ಅವರಿಗೆ ಅನುಭವ ಆಗಿರುತ್ತದೆ. ಅವರಿಗೆ ದೆವ್ವದ ಬಗ್ಗೆ ನಂಬಿಕೆ ಬಂದಿರುತ್ತದೆ."

"ಹಾಗಲ್ಲ ದೇವಿರಮ್ಮ..."

"ಏ ತಲೆಕೆಟ್ಟವನೇ... ನನ್ನ ಜೊತೆ ಜಾಸ್ತಿ ಮಾತಾಡ್ಬೇಡ. ನಾಲ್ಕು ದಿನ ಕಳೆದ ಮೇಲೆ ಅವಳೇ ನಿನ್ನ ಮೀಟ್ ಮಾಡಿ ಎಲ್ಲಾ ಹೇಳ್ತಾಳೆ. ಜಾಸ್ತಿ ತಲೆ ತಿನ್ಬೇಡ ಫೋನ್ ಇಡು."

●●●

ಬ್ಲೂಹೆವೆನ್ ಬಾರ್ ಅಂಡ್ ರೆಸ್ಟೋರೆಂಟ್! ಸಲೀಂ ಕುಡಿಯುತ್ತಿದ್ದಾನೆ. ಫ್ರೈ ಮಾಡಿರುವ ಚಿಕನ್ ಇದೆ. ಸಿಗರೇಟ್ ... ಹೊಗೆಯಾಡುತ್ತಿದೆ. ಆಗ ಅಲ್ಲಿಗೆ ಬಂದನು ಇವನಂತೆ ಬ್ರೋಕರ್ ವೃತ್ತಿ ಮಾಡುವ ಖಾದರ್!

ಇಬ್ಬರೂ ಪರಸ್ಪರ ಕ್ಷೇಮ ವಿಚಾರಿಸಿದರು. ನಂತರ ಖಾದರ್ "ಏ... ನಿನಗೊಂದು ವಿಷಯ ಗೊತ್ತಾ ಸಲೀಂ" ಎಂದನು.

"ಏನು... ಏನದು?'

"ಚಂದನ್ ಬಾಟಿಯ... ಅವರು ಸತ್ತು ಹೋಗಿದ್ದಾರಂತೆ... ಇದು ನಿಜ."

ಚಂದನ್ ಬಾಟಿಯ! ನಗರದ ಶ್ರೀಮಂತ ಉದ್ಯಮಿಗಳಲ್ಲಿ ಹಿಟ್‌ಲಿಸ್ಟ್ ನಲ್ಲಿರುವ ಶ್ರೀಮಂತ. ಪ್ರಭಾವಶಾಲಿ ಶ್ರೀಮಂತ. ಬೇಕಾದಷ್ಟು ಆಸ್ತಿ ಇದೆ. ರಾಜಕಾರಣಿಗಳ ಬೆಂಬಲ ಇದೆ. ಕೆಲವು ಪೊಲೀಸ್ ಅಧಿಕಾರಿಗಳು ಇವನು ಹೇಳಿದಂತೆ ಕೇಳುತ್ತಾರೆ. ಸಿನಿಮಾರಂಗದ ಪ್ರಸಿದ್ಧ ನಟರು ಸಹ ಇವನ ಜೊತೆ ಆಗಾಗ ಸೇರುತ್ತಾರೆ. ಇವನು ಕೊಡುವ ಪಾರ್ಟಿಗಳಿಗೆ ಬಂದು ಕುಡಿದು, ಕುಣಿದು, ಆ ಶ್ರೀಮಂತನಿಗೆ ಖುಷಿ ಕೊಡುತ್ತಾರೆ.

ಅಂತಹ ಶ್ರೀಮಂತ ಸತ್ತಿದ್ದಾನೆ ಅಂದರೆ ರಾಜ್ಯದಾದ್ಯಂತ ಸುದ್ದಿ ಆಗದಿರುವುದೆ?" ಎಂದು ಸಲೀಂ ಕೇಳಿದನು.

"ಅದೇನೋ ಗೊತ್ತಿಲ್ಲ. ಆದರೆ ಅವನು ಮಾಮೂಲಿನ ರೀತಿಯಲ್ಲಿ ಇಲ್ಲ."

ಹೊರಗೆಲ್ಲೂ ಕಾಣುತ್ತಿಲ್ಲ. ಬಿಸಿನೆಸ್ ಸ್ಟಾಪ್ ಆಗಿದೆ.

ಅವನು ಎಲ್ಲಿದ್ದಾನೆ ಅಂತ ಗೊತ್ತಿಲ್ಲ. ಮನೆಯವರು ಹೇಳುವ ಪ್ರಕಾರ ಬಿಸಿನೆಸ್ ಟೆನ್‌ಷನ್‌ನಿಂದ ದೂರಾಗಲು ಯಾವುದೋ ದ್ವೀಪದಲ್ಲಿ ಇದ್ದಾನೆ ಅಂತಾರೆ."

ಇನ್ನು ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಅಂತಾರೆ. ಸಾವಿನ ಬಗ್ಗೆ ಖಚಿತವಾಗಿಲ್ಲ. ಇದು ಪೂರ್ತಿ ಬಹಿರಂಗ ಆಗಿಲ್ಲ, ಇದೇ ಕಗ್ಗಂಟಾಗಿದೆ.

ಸಲೀಂ ಬೆಚ್ಚಿಬಿದ್ದನು. ಅವನಿಗೆ ಆ ಕ್ಷಣಗಳಲ್ಲಿ, ಡಿಲಕ್ಸ್ ಲೆವೆಲ್ ಕಾಲ್‌ಗರ್ಲ್ ರಾಧಮಲ್ಲಿಕಾ ನೆನಪಾದಳು.

ಅವಳು ದೆವ್ವ ನೋಡಿ ಹೆದರಿದ್ದಾಳೆ! ಕೇವಲ ಆರು ದಿನಗಳ ಹಿಂದೆ ಶ್ರೀಮಂತ ಉದ್ಯಮಿ ಚಂದನ್ ಬಾಟಿಯನ ಜೊತೆ ನೈಟ್ ಪ್ರೋಗ್ರಾಂಗೆ ಫಿಕ್ಸ್ ಆಗಿದ್ದಳು.

ಅವಳು... ಅವಳು ದೆವ್ವ ನೋಡಿ ಭೀತಳಾಗಿದ್ದಾಳೆ. ಭಯದ ಕಾರಣದಿಂದ ಚಳಿ ಮತ್ತು ಜ್ವರ ಬಂದಿದೆ!

●●●

ಗ್ರೀನ್ ಹಿಲ್ ಎಸ್ಟೇಟ್! ರಾತ್ರಿ ಏಳು ಗಂಟೆ. ಟ್ಯಾಕ್ಸಿಯಲ್ಲಿ ರಾಧಮಲ್ಲಿಕಾ ಗ್ರಾಂಡ್ ಮತ್ತು ಗ್ಲಾಮರಸ್ ಆಗಿ ಕಾಣುವಂತೆ, ಸೆಕ್ಸ್ ಅಪೀಲ್ ತುಂಬಿರುವಂತೆ ಡ್ರೆಸ್ ಮತ್ತು ಲೈಟ್ ಆಗಿ ಮೇಕಪ್ ಮಾಡಿಕೊಂಡು ಬಂದಿದ್ದಾಳೆ.

ಚಂದನ್ ಬಾಟಿಯ.

ಈಗಾಗಲೇ ಅವನ ಜೊತೆ ಎರಡು ಸಲ ಲೈಟ್ ಪ್ರೋಗ್ರಾಂಗೆ ಸಹಕರಿಸಿದ್ದಳು ಮತ್ತು ಅವನಿಂದ ಧಾರಾಳವಾಗಿ ಹಣವನ್ನು ವಸೂಲಿ ಮಾಡಿದ್ದಳು.

ಅವಳ ಸೌಂದರ್ಯ ಮತ್ತು ಅವಳಾಡುವ ಪ್ರಣಯ ಶೃಂಗಾರ, ರಸಿಕ ಆಟಗಳು ಇವನಿಗೆ ಇಷ್ಟ ಆಗಿತ್ತು.

ಹಾಗಾಗಿ ಮೂರನೆಯ ಸಲ ಸಹ ಅವಳೇ ಬೇಕು ಅಂತ ಸಲೀಂಗೆ ಫೋನ್ ಮಾಡಿದ್ದನು.

ಗ್ರೀನ್ ಹಿಲ್ ಫಾರಂಹೌಸ್ ಮಿನಿ ಪ್ಯಾಲೇಸ್ ರೀತಿ ಇದೆ. ಸೆಕ್ಯುರಿಟಿಯವರು ಇವರಿಬ್ಬರನ್ನು ಚೆಕ್ ಮಾಡಿ ಒಳಗೆ ಬಿಟ್ಟರು.

ಬಾಟಿಯನ ಸೆಕ್ರೆಟರಿ ಸಲೀಂಗೆ ಕಮೀಷನ್ ಹಣ ಕೊಟ್ಟು ಬೆಳಿಗ್ಗೆ ಆರು ಗಂಟೆಗೆ ಟ್ಯಾಕ್ಸಿ ತಗೊಂಡು ಬಂದು ಅವಳನ್ನ ಕರ್ಕೊಂಡು ಹೋಗು ಎಂದಿದ್ದನು.

ಎಲ್ಲಾ... ಎಲ್ಲಾ... ಓಕೆ ಆಗಿದೆ. ಅವಳನ್ನು ಮೊದಲ ಮಹಡಿಯಲ್ಲಿರುವ ಬೆಡ್‌ರೂಮಿನಲ್ಲಿ ಕೂರಿಸಿದ್ದಾರೆ.

ಟೇಬಲ್ ಮೇಲೆ ಎಲ್ಲಾ ಇದೆ.

ಬಾರ್ ಅಂಡ್ ರೆಸ್ಟೋರೆಂಟ್.

ಅವಳು ಟೈಂ ಪಾಸ್ ಮಾಡಲು ಫಾರಿನ್ ವಿಸ್ಕಿ ಸೀಸೆ ಎತ್ತಿಕೊಂಡು ಗಾಜಿನ ಗ್ಲಾಸ್‌ಗೆ ಸುರಿದಳು. ಅವಳು ಬೆಚ್ಚಿಬಿದ್ದಳು.

ವಿಸ್ಕಿ ಅಲ್ಲ ರಕ್ತ...!

ಅವಳಿಗೆ ಗಾಬರಿಯಾಗಿ ದೂರ ಸರಿದಳು. ಕ್ಷಣಗಳ ನಂತರ ದೊಡ್ಡ ಹಾಟ್ ಬಾಕ್ಸ್ ಅನ್ನು ಓಪನ್ ಮಾಡಿದಳು. ಅದರಲ್ಲಿ ತಲೆಬುರುಡೆ ಇದೆ!

ಅವಳು ಹೆದರಿ ಡೈನಿಂಗ್ ಹಾಲ್‌ನಿಂದ ದೂರ ... ಬಂದಳು. ಸಣ್ಣಗೆ ನಡುಗುತ್ತಿದ್ದಾಳೆ. ಮುಖ ಬೆವರಾಡುತ್ತಿದೆ.

ಆಗ ಆ ರೂಮಿನ ಲೈಟ್ ಆಫ್ ಆಯಿತು. ಎಲ್ಲಾ ಕಡೆ ಕತ್ತಲು... ಕತ್ತಲಾವರಿಸಿತು. ಈಗಾಗಲೇ ಗಾಬರಿಯಾಗಿದ್ದ ಅವಳಿಗೆ ಭಯ ಹೆಚ್ಚಾಯಿತು. ಆದರೂ ಸಹ ಧೈರ್ಯ ತುಂಬಿಕೊಂಡು ಈಗ ಮೊಬೈಲ್ ಟಾರ್ಚ್ ಆನ್ ಮಾಡಲು ಟ್ರೈ ಮಾಡುತ್ತಿರುವಾಗಲೇ ಆ ದೃಶ್ಯ ಕಂಡಿತು.

ದಿಗ್ಗನೆ ಬೆಂಕಿ ಹತ್ತಿಕೊಂಡಿತು.

ಆ ವಿಶಾಲವಾದ ರೂಮಿನ ಯಾವುದೋ ಒಂದು ಮೂಲೆಯಲ್ಲಿ ಬೆಂಕಿ ಉರಿಯುತ್ತಿದೆ.

ಅವಳು ಭಯಗೊಂಡಳು.

ಅವಳು ಅಲ್ಲಿಂದ ಎದ್ದು ರೂಮಿನ ಬಾಗಿಲಿನ ಕಡೆ ಓಡಿದಳು. ಯಾರನ್ನಾದರೂ ಕೂಗಿ ಕರೆಯಬೇಕು ಎಂದುಕೊಂಡು ಹೇಳುತ್ತಿರುವಾಗ ತಟ್ಟನೆ ನಿಂತಳು.

ಬಾಗಿಲಿನ ಹತ್ತಿರ ಆ ದೃಶ್ಯ ಕಂಡಿತು.

ನೀಲಿ–ಹಸಿರು–ಕೆಂಪು ಬಣ್ಣದ ಜ್ವಾಲೆ ಹಂತ ಹಂತವಾಗಿ ಮೇಲೇಳುತ್ತಿದೆ. ಚಕ್ರದ ರೀತಿ ತಿರುಗುತ್ತಿದೆ. ಆ ಬೆಳಕಲ್ಲಿ ಆಕೃತಿ ಕಂಡಿತು. ಮಾನವ ಆಕೃತಿ.

ಚಂದನ್ ಬಾಟಿಯ....!

ಇಡೀ ಶರೀರ ನೀಲಿಮಯವಾಗಿದೆ ಮತ್ತು ಕಣ್ಣುಗಳು ಕೆಂಡದ ಉಂಡೆಗಳ ರೀತಿ ಪ್ರಜ್ವಲಿಸುತ್ತಿದೆ.

ಬಾಯಿ ತೆರೆದನು. ಬಾಯಿಂದ ಉದ್ದವಾದ ನಾಲಿಗೆ ಹೊರ ಬಂದಿತು. ಆ ನಾಲಿಗೆ ನೆಲ ಸ್ಪರ್ಶಿಸುವಷ್ಟು ಉದ್ದವಾಗಿದೆ. ಹಾವಿನ ರೀತಿ ಹೊರಳಾಡುತ್ತಿದೆ. ಅವನು ಹತ್ತಿರ ಬರುತ್ತಿದ್ದಾನೆ. ವಿಕೃತವಾಗಿ ನಗುತ್ತಿದ್ದಾನೆ.

ಕಣ್ಣುಗಳಿಂದ ಮತ್ತು ಬಾಯಿಂದ ಕೆಂಪು ಬಣ್ಣದ ಹೊಗೆ ಬರುತ್ತಿದೆ. ಅವಳು ಭಯದಿಂದ ನಡುಗುತ್ತಾ ಹಿಂದೆ, ಹಿಂದೆ ಸರಿಯುತ್ತಿದ್ದಾಳೆ.

ಅವನು ನಗುತ್ತಿದ್ದಾನೆ.

ಅಸಹಜವಾದ ವಿಲಕ್ಷಣ ನಗು.

ನೀಲಿ ಬಣ್ಣದ ದೇಹ.

ಕೆಂಪು ಕಣ್ಣುಗಳ ಜ್ವಾಲೆ.

ಆ ವಿಲಕ್ಷಣ ನಗು...!

ಅವಳಿಗೆ ಫೋನ್ ಕಾಲ್ ಬಂದಿತು. ಅವಳು ಹೆದರಿ ದೂರ ಸರಿಯುತ್ತಲೇ ಅಟೆಂಡ್ ಮಾಡಿದಳು.

ಅವಳ ಧ್ವನಿ ನಡುಗುತ್ತಿದೆ.

"ರಾಧಮಲ್ಲಿಕಾ... ನಾನು ಈ ಬಂಗಲೆ ಸೆಕ್ಯುರಿಟಿಯವನು. ನೀವು ಬೇಗ ಆ ಬಂಗಲೆಯಿಂದ ಹೊರಗೆ ಬನ್ನಿ. ಚಂದನ್ ಬಾಟಿಯ ಆತ್ಮಹತ್ಯೆ ಮಾಡಿಕೊಂಡು ಎರಡು ಇದನಗಳಾಗಿವೆ. ಈ ಸಾವಿನ ಸಂಗತಿ ಈಗಲೇ ಬಹಿರಂಗ ಆಗಬಾರದು ಅಂತ ಎಚ್ಚರಿಕೆ ಪತ್ರ ಬರೆದು, ಸಾಯುವ ಮೊದಲು ಫೋನ್ ಮಾಡಿ ಆದೇಶಿಸಿದ್ದಾರೆ.

ಅವಳು ತತ್ತರಿಸುತ್ತಿದ್ದಾಳೆ.

ಭಯ... ವಿಪರೀತ ಭಯ.

ಮೊಬೈಲ್ ಜಾರುತ್ತಾ ನೆಲದ ಮೇಲೆ ಬಿದ್ದಿದೆ.

ದೆವ್ವ ವಿಲಕ್ಷಣವಾಗಿ ವರ್ತಿಸುತ್ತಾ ಇವಳ ಹತ್ತಿರ ಬರುತ್ತಿದೆ.

ವಿಪರೀತ ಭಯದ ಕಾರಣದಿಂದ ಆಘಾತ ವಾಯಿತು.

ಅವಳು ಪ್ರಜ್ಞಾಶೂನ್ಯಳಾದಳು.

ನಿಂತಲ್ಲೇ ತೂರಾಡುತ್ತಾ ಕುಸಿದಳು. ಎಚ್ಚರವಾದಾಗ ಅವಳು ತನ್ನ ಮನೆಯಲ್ಲಿ ಇದ್ದಳು. ಅವಳ ಎದುರಿಗೆ ಸೋದರತ್ತೆ ನಿಂತಿದ್ದಳು.

ಅಪ್ಪ–ಅಮ್ಮ ಇಲ್ಲದ ರಾಧಮಲ್ಲಿಕಾಳಿಗೆ ಆಶ್ರಯ ನೀಡಿ ಈ ದಂಧೆ ಮಾಡಿ ಹಣ ಸಂಪಾದನೆ ಮಾಡಲು ಪ್ರಚೋದನೆ ಮಾಡಿದ್ದವಳು ಈ ಸೋದರತ್ತೆ.

ರಾಧಮಲ್ಲಿಕಾ ತನ್ನ ಭಯಾನಕ ಅನುಭವವನ್ನು ಹೇಳುತ್ತಿದ್ದಾಳೆ.

ದೇವಿರಮ್ಮ "ಏ ನಿಜವಾಗಿ ನೀನು ದೆವ್ವ ನೋಡಿದ್ಯ ?"

ತನ್ನ ಅನುಭವ ಹೇಳಿದಳು.

ದೇವಿರಮ್ಮ "ನಿನ್ನನ್ನು ಯಾರೋ ಕಾರಲ್ಲಿ ಕರೆದುಕೊಂಡು ಬಂದು ಫೋನ್ ಮಾಡಿದ್ರು. ಪ್ರಜ್ಞೆ ಇಲ್ಲದ ನಿನ್ನನ್ನು ನಾನು ಒಳಗೆ ಕರ್ಕೊಂಡು ಬಂದೆ. ಇನ್ನು ಮುಂದೆ ನೀನು ಕಸ್ಟಮರ್‌ಗಳ ಮನೆಗೆ ಹೋಗ್ಬೇಡ. ಯಾವುದಾದರೂ ಸ್ಟಾರ್ ಹೋಟೆಲ್‌ಗೆ ಬರಲು ಹೇಳು" ಎಂದಳು.

ರಾಧಮಲ್ಲಿಕಾ ತಲೆಯಾಡಿಸಿದಳು.

ಅವಳು ಚೇತರಿಸಿಕೊಂಡಿದ್ದಾಳೆ.

ಬ್ರೋಕರ್ ಸಲೀಂಗೆ ಫೋನ್ ಮಾಡಿ ತಾನು ನೈಟ್ ಪ್ರೋಗ್ರಾಂಗೆ ರೆಡಿಯಾಗಿದ್ದೀನಿ ಎಂದು ಹಳಿದ ನಂತರ ಕಂಡೀಷನ್ ಬಗ್ಗೆ ಹೇಳಿದಳು.

●●●

ಡಿ.ವೈ.ಎಸ್.ಪಿ. ಪ್ರತಾಪ್ ಬಾಗಡೆ!

ಪ್ರಾಯ ಮೂವತ್ತೈದು.

ಅವರು ಆಫೀಸ್‌ನಲ್ಲಿ ಕೆಲಸ ಮಾಡುತ್ತಿರುವಾಗ ಫೋನ್ ಕಾಲ್ ಬಂದಿತು.

ಬಾಟಿಯ ಕಾಲಿಂಗ್!

ಈ ಪೊಲೀಸ್ ಅಧಿಕಾರಿ ಮಾಡುತ್ತಿದ್ದ ಕೆಲಸ ಬಿಟ್ಟು "ನಮಸ್ಕಾರ ಸಾಹೇಬರೆ" ಎಂದು.

"ನಾನು ಅವರ ಸೆಕ್ರೆಟರಿ."

"ಓ... ಹೌದಾ... ಏನ್ ವಿಷಯ.'

"ಇವತ್ತು ಏನು ಅಂತ ಗೊತ್ತಿದೆ."

"ರೀ ಪೊಲೀಸ್ ಸಾಹೇಬರೆ. ಇವತ್ತು ಫ್ರೈಡೇ ಅಂತ ಎಲ್ಲರಿಗೂ ಗೊತ್ತಿದೆ. ಇವತ್ತು ನಮ್ಮ ಬಾಟಿಯಾ ಸಾಹೇಬರ ಬರ್ತ್‌ಡೇ. ನೀವು ಸ್ಪೆಷಲ್ ಗೆಸ್ಟ್ ಆಗಿ ಬರಬೇಕಂತೆ. ನಿಮಗೆ ಅವರೇ ಸ್ಪೆಷಲ್ ಗಿಫ್ಟ್ ಕೊಡ್ತಾರೆ."

ಪೊಲೀಸ್ ಅಧಿಕಾರಿ ಪ್ರತಾಪ್ ಬಾಗಡೆ ಮುಖ ಅರಳಿತು.

ಉತ್ತಮ ಗರಿ ಕೆದರಿತು!

"ಪ್ರೋಗ್ರಾಂ ಎಲ್ಲಿ?

"ಗ್ರೀನ್ ಹಿಲ್ ಬಂಗಲೆಯಲ್ಲಿ.

"ಎಷ್ಟು ಹೊತ್ತಿಗೆ ಬರಲಿ?"

"ರಾತ್ರಿ ಎಂಟು ಗಂಟೆಗೆ."

"ಆಗಲಿ ಬರ್ತೀನಿ."

☞14

13 ☞

●●●

ಆ ರೂಮಿನಲ್ಲಿ ಹರಡಿದೆ. ನೀಲಿ ಬಣ್ಣದ ಛಾಯೆ ಇರುವ ಮಂದರವಾದ ವಿದ್ಯುತ್ ಬೆಳಕು. ವಿದೇಶದಿಂದ ತರಿಸಿಕೊಂಡಿರುವ ಬಲು ವಿಶಾಲವಾದ ಕನ್ನಡಿ ಇದೆ.

ಆ ಕನ್ನಡಿಯಲ್ಲಿ ಕಂಡು ಬರುತ್ತಿದೆ ಬಲು ವಿಕೃತವಾದ ಪ್ರತಿರೂಪ!

ಇಡೀ ಶರೀರ ನೀಲಿಯಾಗಿದೆ. ಕಣ್ಣುಗಳು ಕೆಂಪಾಗಿದೆ. ಆಗಾಗ ಬೆಳಕಿನ ಕಿಡಿಗಳು ಬ್ಲಿಂಕ್ ಆಗುತ್ತಿದೆ. ನಗು ಕೇಳಿ ಬರುತ್ತಿದೆ. ಕನ್ನಡಿಯಲ್ಲಿ ಕಂಡು ಬರುತ್ತಿದೆ. ವಿಲಕ್ಷಣ ರೀತಿಯಲ್ಲಿ ನಗುತ್ತಿರುವ ದೃಶ್ಯ! ನಗುವಿನ ಧ್ವನಿ ತಾರಕ್ಕೆ ಏರುತ್ತಿದೆ. ಆ ರೂಮಿನಲ್ಲಿ ನಗು ಪ್ರತಿಧ್ವನಿಸುತ್ತಿದೆ.

●●●

ಪೊಲೀಸ್ ವಾಹನದಲ್ಲೇ ಬಂದಿರುವ ಈ ಅಧಿಕಾರಿ ಪ್ರತಾಪ್ ಬಾಗಡೆ, ತ್ರೀ ಪೀಸ್ ಸೂಟ್ ಧರಿಸಿ ಟ್ರಿಮ್ ಆಗಿ ಬಂದಿದ್ದಾರೆ.

ರಾತ್ರಿ ಎಂಟು ಗಂಟೆ. ಗ್ರೀನ್ ಹೌಸ್ ಬಂಗಲೆಯ ಕಾಂಪೌಂಡ್ ಆವರಣದಲ್ಲಿ ಕಾರುಗಳು ಇರಲಿಲ್ಲ. ಫಂಕ್ಷನ್ ಲಕ್ಷಣ ಕಂಡು ಬರುತ್ತಿಲ್ಲ. ಗೆಸ್ಟ್‌ಗಳು ಯಾರೂ ಇರಲಿಲ್ಲ.

ಅವನು ಒಳಗೆ ಬಂದು ಸೆಕ್ಯುರಿಟಿಯವನನ್ನು ''ಇವತ್ತು ಬರ್ತ್‌ಡೇ ಫಂಕ್ಷನ್ ಇಲ್ವ'' ಎಂದು ಕೇಳಿದನು.

''ಇದೇ ಸಾರ್ ಒಳಗೆ ಹೋಗಿ.''

''ಗೆಸ್ಟ್‌ಗಳು ಇನ್ನೂ ಬಂದಿಲ್ವ?''

''ನಿಮ್ಮ ಹತ್ತು ನಿಮಿಷದೊಳಗೆ ಬರ್ತೀವಿ ಅಂತ ಫೋನ್ ಮಾಡಿದ್ದಾರೆ.''

ಪ್ರತಾಪ್ ಬಾಗಡೆ ಈಗ ಬಂಗಲೆಯ ಒಳಗೆ ಬಂದನು.

ಸೆಕ್ರೆಟರಿ ಎದುರಾದನು.

ಅಲ್ಲಿ ಯಾರೊಬ್ಬರೂ ಇರಲಿಲ್ಲ!

''ವೆಲ್‌ಕಮ್ ಸಾರ್. ಸೆಕೆಂಡ್ ಫ್ಲೋರ್‌ನಲ್ಲಿರುವ ಕಾರಿಡಾರ್‌ನಲ್ಲಿ ಸಾಹೇಬರು ಇದ್ದಾರೆ. ನೀವು ಬಂದ ಕೂಡಲೇ ಅಲ್ಲಿಗೆ ಕಳಿಸಲು ಹೇಳಿದ್ದಾರೆ.''

ಅವನು ಪುಳುಕಗೊಂಡನು.

ಸಾಹೇಬರು ಪರ್ಸನಲ್ ಆಗಿ ಮಾತಾಡಲು ಕರೆದಿದ್ದಾರೆ ಅಂದರೆ ಏನೋ ವಿಶೇಷತೆಯೇ ಇರಬೇಕು ಎಂದುಕೊಂಡು ''ಆಗಲಿ... ನಾನು ಅಲ್ಲಿಗೆ ಹೋಗ್ತೀನಿ'' ಎಂದು ಹೇಳುತ್ತಲೇ ಏನೋ ಅನುಮಾನ ಬಂದು ''ಬರ್ತ್‌ಡೇ ಫಂಕ್ಷನ್ ಎಲ್ಲಿ? ಯಾಕೆ ಇನ್ನೂ ರೆಡಿ ಮಾಡಿಲ್ಲ'' ಎಂದು ಕೇಳಿದನು.

''ಸಾರ್... ನೀವು ಸಾಹೇಬರ ರೂಮಿಗೆ ಹೋಗಿ. ಅಲ್ಲಿಗೆ ಹೋದ ಮೇಲೆ ಎಲ್ಲಾ ಗೊತ್ತಾಗುತ್ತೆ'' ಎಂದನು.

ಎಲ್ಲವೂ ಸಹಜವಾಗಿಲ್ಲ. ಏನೋ ವಿಚಿತ್ರ ಅಂತ ಅಂದುಕೊಂಡು ಈಗ ಸೆಕೆಂಡ್ ಫ್ಲೋರ್ ಕಡೆ ಹೊರಟನು.

ಕೆಲವು ಲಕ್ಷಗಳ ಬೆನಿಫಿಟ್ ಆಗುತ್ತದೆ ಎಂದುಕೊಂಡು ಉತ್ಸಾಹದಿಂದ ಬಂದನು.

ರೂಮಿನ ಬಾಗಿಲು ಓರೆಯಾಗಿ ತೆರೆದಿದೆ.

''ಸಾರ್... ಸಾರ್.''

ಉತ್ತರ ಬರಲಿಲ್ಲ.

ಅವನು ಡೋರ್ ತಳ್ಳುತ್ತಾ ಒಳಗೆ ಬಂದನು. ಆಗ ಕಂಡು ಬಂದಿತು ಆ ರೂಮಿನ ತುಂಬಾ ಹರಡಿದೆ ಕಡು ನೀಲಿ ಬಣ್ಣದ ಬೆಳಕು.

ಅವನಿಗೆ ಗಾಬರಿಯಾಗಿದೆ. ಬೇರೆ ಏನೋ ಅನುಮಾನ ಬರುತ್ತಿದೆ. ಇದ್ಯಾಕೆ ಈ ರೀತಿ ಆಗಿದೆ?

ಸಾಹೇಬರು... ಸಾಹೇಬರು ಇಂತಹ ರೂಮಿಗೆ ಯಾಕೆ ಬರಲು ಹೇಳಿದ್ದಾರೆ.

ಆಗ ಏನೋ ಶಬ್ದ ಆಯಿತು. ಆ ಕಡೆ ತಿರುಗಿದನು. ನೆಲದಿಂದ ಮೇಲೆ ಏಳಲಾರಂಭಿಸಿತು ಕೆಂಪು ಮತ್ತು ನೀಲಿ ಬಣ್ಣದ ಹೊಗೆ...! ಬೆಳಕು ಮತ್ತು ಹೊಗೆಯ ನಡುವೆ ಕಂಡು ಬರುತ್ತಿದೆ ಆಕೃತಿ...! ಭಯ ಉಂಟಾಗುವ ರೀತಿ ಇದೆ. ಆಕೃತಿ ಯಾರು? ಚಂದನ್ ಬಾಟಿಯ...! ಇದ್ಯಾಕೆ ಈ ರೀತಿ ಇದ್ದಾರೆ? ಆಗ ಮತ್ತೊಂದು ಕಡೆಯಿಂದ ಕೇಳಿ ಬಂದಿತು ನಗುವಿನ ಶಬ್ದ...! ಆ ಕಡೆ ತಿರುಗಿದನು. ಅಲ್ಲಿ ಕಂಡು ಬಂದಿತು ಚಂದನ್ ಬಾಟಿಯನ ಆಕೃತಿ! ಮತ್ತೊಂದು ಕಡೆ ಶಬ್ದ ಕೇಳಿ ಬಂದಿದ್ದರಿಂದ ಆ ಕಡೆ ತಿರುಗಿದನು. ಅಲ್ಲಿ ಸಹ ಕಂಡು ಬಂದಿತು ಭಯಾನಕ ಆಕೃತಿ. ನಾಲ್ಕು ಕಡೆಗಳಲ್ಲಿ ವಿಕೃತ-ವಿಲಕ್ಷಣ ರೂಪದ ಚಂದನ್ ಬಾಟಿಯ ಕಂಡು ಬರುತ್ತಿದ್ದಾನೆ.

ನೀಲಿ ದೀಪದ ಬೆಳಕು ಈಗ ಮತ್ತಷ್ಟು ಮಂಕಾಯಿತು. ಆಗ ನಾಲ್ಕು ಕಡೆಗಳಿಂದ ಏಕಕಾಲದಲ್ಲಿ ನಗು... ವಿಲಕ್ಷಣ ರೀತಿಯ ನಗು ಕೇಳಿ ಬರಲಾರಂಭಿಸಿತು.

ಪೊಲೀಸ್ ಅಧಿಕಾರಿ ಪ್ರತಾಪ್ ಬಾಗಡೆ ಭಯದಿಂದ ನಡುಗುತ್ತಿದ್ದಾನೆ. ಇಂತಹ ಸನ್ನಿವೇಶ ಅವನ ಬದುಕಲ್ಲಿ ಯಾವತ್ತೂ ಸಹ ಎದುರಾಗಿರಲಿಲ್ಲ.

ಅವನು ಭಯಗೊಂಡನು. ಜೀವಿತದ ಅವಧಿಯಲ್ಲಿ ಇಂತಹ ಭಯಾನಕ ದೃಶ್ಯವನ್ನು ನೋಡಿರಲಿಲ್ಲ. ಅಲ್ಲಿಂದ ಹೋಗಲು ಪ್ರಯತ್ನಿಸುತ್ತಿರುವಾಗಲೇ ನೆಲದ ಮೇಲೆ ಇದ್ದ ಟೀಪಾಯಿ ಕಾಲನ್ನು ಎಡವಿ ತೂರಾಡುತ್ತಾ ದಬಾಲನೆ ಬಿದ್ದನು.

ವಿಕೃತ-ವಿಲಕ್ಷಣ ರೂಪದ ದೆವ್ವ ಹತ್ತಿರ... ತುಂಬಾ ಹತ್ತಿರ ಬಂದಿತು. ಇವನ ಮುಖದತ್ತ ಬಾಗಿತು.

ಗಹಿಗಹಿ ನಗುತ್ತಿದೆ ದೆವ್ವ!

ಪ್ರತಾಪ್ ಬಾಗಡೆ ಭಯ, ಗಾಬರಿಯಿಂದ ಹಿಂದೆ-ಹಿಂದೆ ಸರಿಯುತ್ತಾ, ಸರ್ರನೆ ಮೇಲೆ ಎದ್ದು ಅಲ್ಲಿಂದ ಓಡಿದನು.

ಮಬ್ಬು ಬೆಳಕಿನ ಕಾರಣದಿಂದ ಅವನು ಬಾಗಿಲಿಗೆ ದಡಾಲನೆ ಗುದ್ದಿದನು. ಆದರೂ ಸಹ ಸಾವರಿಸಿಕೊಂಡು ಅಲ್ಲಿಂದ ಓಡಿದನು.

ಆ ಬಂಗಲೆಯಲ್ಲಿ ಯಾರೂ ಇರಲಿಲ್ಲ. ಹೊರಗೆ ಬಂದು ಏದುಸಿರು ಬಿಡುತ್ತಾ ಆಗ ತಿರುಗಿ ನೋಡಿದನು.

ಆಗ ಅಲ್ಲಿಗೆ ಬಂದನು ಸೆಕ್ಯುರಿಟಿ ಗಾರ್ಡ್. ಈಗ ಎಲ್ಲಾ ಕಡೆ ನೋಡಿದನು. ನಂತರ ಮೆಲ್ಲಗೆ ಏ... ಏ... ಸಾರಿ... ಸಾರಿ... ಸಾರ್... ಪೊಲೀಸ್ ಸಾರ್... ಯಾಕೆ ತುಂಬಾ ಭಯಗೊಂಡಿದ್ದೀರ'' ಎಂದು ಕೇಳಿದನು.

''ಅದು... ಅದು... ಅಲ್ಲಿ... ಅಲ್ಲಿ...''

''ಅಲ್ಲಿ... ಎಲ್ಲಿ... ಏನಿದೆ?''

''ಅದು... ಅದು ದೆವ್ವ... ದೆವ್ವ.... ಆ ದೆವ್ವ... ನಿಮ್ಮ ಸಾಹೇಬರ ತರಾನೇ ಇತ್ತು.''

''ತರಾನೇ ಇತ್ತು ಅಲ್ಲ. ಸಾಹೇಬರೇ ದೆವ್ವ ಆಗಿದ್ದಾರೆ.''

ಅವನು ಬೆಚ್ಚಿಬಿದ್ದನು.

''ನೀನು... ನೀನು ಏನು... ಏನು ಹೇಳುತ್ತಿದ್ದೀಯ... ದೆವ್ವ... ಸಾಹೇಬರು...''

''ಅಸಲು ಸಂಗತಿ ಯಾರಿಗೂ ಗೊತ್ತಿಲ್ಲ.

''ಹೌದಾ... ಏನದು?''

''ನಮ್ಮ ಸಾಹೇಬರು ಆತ್ಮಹತ್ಯೆ ಮಾಡಿಕೊಂಡು ನಾಲ್ಕು ದಿನಗಳಾಗಿದೆ.''

ಇದು ಶಾಕಿಂಗ್ ನ್ಯೂಸ್!

ನಂಬಲಾಗುತ್ತಿಲ್ಲ ಅವನಿಂದ.

''ಏ.... ನೀನು ಏನೇನೋ ಹೇಳ್ಬೇಡ.'

''ಅವರು ಸತ್ತಿರೋದು ಸತ್ಯ.''

''ಹಾಗಾದರೆ ಈ ಸುದ್ದಿ ಯಾಕೆ ಎಲ್ಲಾ ಕಡೆ ಪ್ರಚಾರ ಆಗಿಲ್ಲ. ಚಂದನ್ ಬಾಟಿಯ ಈ ನಗರದ ಪ್ರಭಾವಶಾಲಿ ಪ್ರಖ್ಯಾತ ಉದ್ಯಮಿ. ಅವನ ಸಾವಿನ ವಿಚಾರ ಗೌಪ್ಯವಾಗಿ ಇರಲು ಹೇಗೆ ಸಾಧ್ಯ?''

''ಅದಕ್ಕೆ ಬಲವಾದ ಕಾರಣ ಇದೆ.''

''ಕಾರಣ... ಏನದು?''

''ಸಾಹೇಬರು ಸಾಯುವ ಮೊದಲು ಎಲ್ಲರಿಗೂ ಎಚ್ಚರಿಕೆಯ ಆದೇಶ ನೀಡಿದ್ದರು. ನನ್ನ ಸಾವಿನ ಸಂಗತಿ ಎಂದು ತಿಂಗಳು ಬಹಿರಂಗ ಆಗಬಾರದು ಅಂತ ಆಜ್ಞೆ ಮಾಡಿದ್ದರು. ಹಾಗಾಗಿ ಅವರ ಕೊನೆ ಆಸೆಗೆ ಭಂಗ ತರಬಾರದು ಅಂತ ನಾವ್ಯಾರೂ ಸಹ ಬಹಿರಂಗ ಮಾಡಿಲ್ಲ. ಆಸೆ ತೀರದೆ ಸತ್ತಿರೋದ್ರಿಂದ ಇಲ್ಲಿ ದೆವ್ವವಾಗಿ ತುರುಗುತ್ತಿದ್ದಾರೆ. ತಾವು ಇಷ್ಟ ಪಡುವ ಮತ್ತು ತುಂಬಾ ಆತ್ಮೀಯ ಸಂಪರ್ಕದಲ್ಲಿರುವ ಎಲ್ಲರನ್ನೂ ಸಹ ತುಂಬಾ ವಿಚಿತ್ರ ಸನ್ನಿವೇಶ ಸೃಷ್ಟಿ ಮಾಡಿ ಭೇಟಿ ಮಾಡಲು ಬಯಸುತ್ತಾರೆ.''

''ಇದು ತಪ್ಪಲ್ವ?''

''ಯಾವುದು ಸಾರ್?''

''ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣವನ್ನು ಪೊಲೀಸ್ ಇಲಾಖೆಗೆ ತಿಳಿಸದಿರೋದು ಕಾನೂನಿನ ಪ್ರಕಾರ ಅಪರಾಧ.''

ಆದರೆ ನಮಗೆ ಅದು ಮುಖ್ಯ ಅಲ್ಲ. ಅವರ ಋಣದಲ್ಲಿರುವ ನಾವು ಅವರ ಕೊನೆ ಆಸೆಯಂತೆ ಒಂದು ತಿಂಗಳು ಸಾವಿನ ಸಂಗತಿನ ಗೌಪ್ಯವಾಗಿಡುತ್ತೇನೆ.''

ಪೊಲೀಸ್ ಅಧಿಕಾರಿ ''ಒಂದು ವೇಳೆ ಇದು ನನ್ನಿಂದ ಇಲಾಖೆಗೆ ತಿಳಿದು ರಾಜ್ಯದಲ್ಲಿ ಇದು ಬ್ರೇಕಿಂಗ್ ನ್ಯೂಸ್ ಆಗಬಹುದು'' ಎಂದನು.

''ಆದರೆ ನೀವು ಆ ರೀತಿ ಮಾಡೋಲ್ಲ.''

''ಮಾಡೋಲ್ಲ ಅಂತ ಅದು ಹೇಗೆ ಅಷ್ಟೊಂದು ನಿಖರವಾದ ಹೇಳ್ತೀಯ?''

ಸೆಕ್ಯುರಿಟಿಯವನು ನಗುತ್ತಾ ''ಸಾರ್... ನೀವೂ ಸಹ ಸಾಹೇಬರ ಋಣದಲ್ಲಿ ಇದ್ದೀರ ಅಂತ ಗೊತ್ತಿದೆ.''

ಪೊಲೀಸ್ ಅಧಿಕಾರಿಯ ಮುಖ ಕೆಂಪಾಯಿತು. ಮತ್ತೊಂದು ಮಾತಾಡದೆ ಅಲ್ಲಿಂದ ಹೊರಟನು.

ಸೆಕ್ಯುರಿಟಿಯವನು ಈಗ ಜೋರಾಗಿ ಕೂಗಿ ಹೇಳಿದನು. ''ಸಾರ್... ನೀವು ಈ ಸಂಗತಿನ ಬಹಿರಂಗ ಪಡಿಸೋಲ್ಲ... ಪಡಿಸಲೇಬಾರದು. ಒಂದು ವೇಳೆ ಆ ರೀತಿ ಮಾಡಿದರೆ ಇಲ್ಲಿ ದರ್ಶನ ಕೊಟ್ಟಿರುವ ದೆವ್ವ ನಿಮ್ಮ ಮನೆಗೂ ಬಂದು ಕಾಡಿಸಬಹುದು.''

ಪೊಲೀಸ್ ಅಧಿಕಾರಿಯ ವಾಹನ ವೇಗವಾಗಿ ಹೋಗುತ್ತಿದೆ.

ಅವನು ಗಾಬರಿಯಾಗಿದ್ದಾನೆ.

ಗೊಂದಲ ಕಾಡುತ್ತಿದೆ.

●●●

ಶಾಸಕರಾದ ಶ್ರೀ ರಮಾನಂದ ಶಿಂದೆ ಅವರು ಅವತ್ತಿನ ಕಾರ್ಯ ಮುಗಿಸಿ, ವಿಧಾನಸೌಧದಿಂದ ಹೊರಗೆ ಬರುತ್ತಿರುವಾಗ ಫೋನ್ ಕಾಲ್ ಬಂದಿತು.

ಅವರ ಮುಖ ಅರಳಿತು.

ಚಂದನ್ ಬಾಟಿಯ...!

ಅವರಿಗೆ ತುಂಬಾ ಸಂತೋಷವಾಗಿದೆ. ಯಾಕೆ ಅಂದರೆ ರಮಾನಂದ ಶಿಂದೆ ಅವರಿಗೆ ಆಡಳಿತ ಪಕ್ಷದ ಅಭ್ಯರ್ಥಿಯಾಗಿ ಅವಕಾಶ ಸಿಗಲು ಇವರ ಪ್ರಭಾವ ಕಾರಣ ಮತ್ತು ಎಲೆಕ್ಷನ್ ಟೈಂನಲ್ಲಿ ಇವರ ಬೆಂಬಲ ಮತ್ತು ಹಣದಿಂದ ಗೆಲ್ಲಲು ಸಾಧ್ಯವಾಗಿದೆ. ಹಾಗಾಗಿ ಚಂದನ್ ಬಾಟಿಯ ಅಂದರೆ ಇವರಿಗೆ ತುಂಬಾ ಅಭಿಮಾನ, ಗೌರವ ಇದೆ.

''ಹೇಳಿ... ಹೇಳಿ ಸಾರ್... ಒಂದು ತಿಂಗಳಿನ ನಂತರ ನನ್ನ ನೆನಪಾಗಿರೋದು ನಿಜವಾಗಿ ಅದೃಷ್ಟ. ಹೇಳಿ ಸಾರ್... ನಾನು ತಮಗಾಗಿ ಏನು ಮಾಡಬೇಕು'' ಎಂದರು.

ಕೂಡಲೇ ಉತ್ತರ ಬರಲಿಲ್ಲ.

''ಸಾರ್... ಸಾರ್... ಹಲೋ...''

''ಮಿಸ್ಟರ್ ರಮಾನಂದ ನೀವು ಗ್ರೀನ್ ಹಿಲ್‌ಗೆ ಬಂದು ಪಾರ್ಟಿಗೆ ಜಾಯಿನ್ ಆಗಬೇಕು. ಯಾಕೋ ಏನೋ ಇವತ್ತು ನಿಮ್ಮ ಜೊತೆ ಮಾತ್ರ ಪಾರ್ಟಿ ಮಾಡ್ಬೇಕು ಅಂತ ಆಸೆ ಆಗಿದೆ.''

''ಅದು ನನ್ನ ಭಾಗ್ಯ ಸಾರ್.''

''ರಾತ್ರಿ ಎಂಟು ಗಂಟೆಗೆ ಬರಬೇಕು.''

''ಆಗಲಿ... ಆಗಲಿ ಸಾರ್.''

●●●

ರಾತ್ರಿ ಎಂಟು ಗಂಟೆ!

'ಇನೋವಾ' ಕಾರು ಈಗ ನಿರ್ಜನ ಪ್ರದೇಶದಲ್ಲಿರುವ ಒಂಟಿ ಬಂಗಲೆಯ ಎದುರಿಗೆ ನಿಂತಿತು. ಸೆಕ್ಯುರಿಟಿಯವನು ಮುಂದೆ ಬಂದು ಗೇಟನ್ನು ತೆರೆದು ''ವೆಲ್‌ಕಮ್ ಸಾರ್'' ಎಂದನು.

ರಮಾನಂದ ಕಾರಿನಿಂದ ಇಳಿದರು. ಈಗ ಅವರು ಮುಂದೆ ಬಂದು ''ಸಾಹೇಬರು ಬಂದಿದ್ದಾರ?''

''ಇತ್ತೀಚೆಗೆ ಅವರು ಹಗಲು-ರಾತ್ರಿ ಈ ಬಂಗಲೆಯಲ್ಲೇ ಇರುತ್ತಾರೆ.''

''ಓಹ... ಹೌದಾ...''

ಈಗ ರಮಾನಂದ ಶಿಂದೆ ಅವರು ಬಂಗಲೆಯ ಒಳಗೆ ಬಂದರು.

ಸೆಕ್ರೆಟರಿ ಅವರನ್ನು ಸ್ವಾಗತಿಸಿ ''ಸಾರ್... ಸಾಹೇಬರು ಸೆಕೆಂಡ್ ಫ್ಲೋರ್‌ನ ರೂಮಲ್ಲಿ ಇದ್ದಾರೆ. ನಿಮಗಾಗಿ ಕಾಯುತ್ತಿದ್ದಾರೆ'' ಎಂದು ಹೇಳಿದಾಗ ಅವರು ಉತ್ಸಾಹದಿಂದ ಅಲ್ಲಿಗೆ ಹೊರಟರು.

ಸೆಕೆಂಡ್ ಫ್ಲೋರ್‌ನ ರೂಮಿಗೆ ಬಂದರು. ಒಳಗಿನ ದೃಶ್ಯ ಕಂಡು ಸ್ವಲ್ಪಕಾಲ ಗಲಿಬಿಲಿ ಉಂಟಾಯಿತು. ಯಾಕೆ ಅಂದರೆ ಆ ರೂಮಿನ ತುಂಬಾ ಹಸಿರು ಮತ್ತು ಕೆಂಪು ಬೆಳಕು ಹರಡಿದೆ.

ಅನುಮಾನದಿಂದಲೇ ಒಳಗೆ ಬಂದರು. ಅಲ್ಲಿನ ಆ ವಾತಾವರಣ ತುಂಬಾ ವಿಚಿತ್ರವಾಗಿದೆ.

ಆ ದೃಶ್ಯ ಕಂಡಿತು. ಡೈನಿಂಗ್ ಟೇಬಲ್ ಮೇಲೆ ಬಾರ್ ಅಂಡ್ ರೆಸ್ಟೋರೆಂಟ್ ಓಪನ್ ಆಗಿದೆ. ಚಂದನ್ ಬಾಟಿಯ ಗುಂಡು ಹಾಕುತ್ತಾ ಸಿಗರೇಟ್ ಸೇದುತ್ತಿದ್ದಾರೆ. ಅವರು ಬೆನ್ನು ತಿರುಗಿಸಿ ಕುಳಿತಿದ್ದಾರೆ. ಗಾಳಿ ಜೋರಾಗಿ ಬೀಸುತ್ತಿದೆ.

''ನಮಸ್ಕಾರ ಸಾರ್'' ಎಂದು ಹತ್ತಿರ ಬಂದನು.

'ಬನ್ನಿ ರಮಾನಂದ'' ಎಂದು ಸ್ವಾಗತಿಸಿ ಅವರಿಗೆ ವಿಸ್ಕಿ ಆಫರ್ ಮಾಡಿದರು.

ಸೀಸೆ ಓಪನ್ ಮಾಡಿದರು. ಅದು ವಿಸ್ಕಿ ಅಲ್ಲ ರಕ್ತ! ರಮಾನಂದ ಬೆಚ್ಚಿಬಿದ್ದರು. ಹಾಟ್ ಬಾಕ್ಸ್‌ಗಳನ್ನು ಓಪನ್ ಮಾಡಿದರು. ಮೂಳೆಯ ತುಂಡುಗಳು. ಸಣ್ಣ ಗಾತ್ರದ ತಲೆಬುರುಡೆ. ಕಾಲಿನ ಮಂಡಿ ಚಿಪ್ಪುಗಳು. ಮತ್ತೊಂದರಲ್ಲಿ ರಕ್ತ.

ರಮಾನಂದ ಶಿಂದೆ ಗಾಬರಿ, ಭಯದಿಂದ ''ಸಾರ್... ಇದೇನಿದು...'' ಎಂದರು.

ಬೆನ್ನು ತಿರುಗಿಸಿ ಕುಳಿತಿದ್ದ ಚಂದನ್ ಬಾಟಿಯ ತಿರುಗಿದರು.

ವಿಲಕ್ಷಣ ಭಯಂಕರ ರೂಪ!

ಅವರು ವಿಲಕ್ಷಣವಾಗಿ ನಗುತ್ತಿದ್ದಾರೆ.

ರಮಾನಂದ ಶಿಂದೆ ಗಾಬರಿಯಾಗಿ ಅಲ್ಲಿಂದ ಓಡುವ ರೀತಿ ನಡೆಯುತ್ತಾ ಹೊರಗೆ ಬಂದರು.

ಗಡಗಡನೆ ನಡುಗುತ್ತಿದ್ದಾರೆ.

ಸೆಕ್ಯುರಿಟಿಯವರು ''ಸಾರಿ ಸಾರ್... ಸಾಹೇಬರು ಆತ್ಮಹತ್ಯೆ ಮಾಡಿಕೊಂಡು ಒಂದು ವಾರ ಆಗಿದೆ. ನೀವು ನೋಡಿದ್ದು ಅವರ ಪ್ರತಿರೂಪದ ಆತ್ಮರೂಪಿ ದೆವ್ವವನ್ನು.''

ಅಟ್ಯಾಕ್... ತೀವ್ರ ರೀತಿಯ ಹೃದಯಾಘಾತವಾಗಿ ಅವರು ಕೆಳಗೆ ಬಿದ್ದರು.

ಪ್ರಾಣಪಕ್ಷಿ ಹಾರಿಹೋಗಿದೆ.

●●●

ಈ ಸಾವಿನ ಪ್ರಕರಣದ ನಂತರ ಚಂದನ್ ಬಾಟಿಯ ತಮ್ಮ ವಿಲಕ್ಷಣ-ವಿಚಿತ್ರ ಬಯಕೆಯ ಈ ಹುಚ್ಚಾಟ ನಿಲ್ಲಿಸಿದರು. ವಿಪರೀತ ಹಣ ಮತ್ತು ಅಧಿಕಾರದ ಪ್ರಭಾವದಿಂದ ಶಾಸಕ ರಮಾನಂದರ ಸಾವಿನ ಪ್ರಕರಣಕ್ಕೆ ಬೇರೆ ತಿರುವು ನೀಡಿದರು.

ಬದುಕಿರುವ ತಾವು ದೆವ್ವದ ಆಟ ಆಡಿ ಎಲ್ಲರನ್ನೂ ಭಯಪಡಿಸಬೇಕು ಮತ್ತು ಅವರು ಭಯ ಪಡುವುದನ್ನು ಕಲ್ಪಿಸಿಕೊಂಡು ಏಕಾಂತದಲ್ಲಿ ಪೈಶಾಚಿಕ ಆನಂದ ಅನುಭವಿಸುತ್ತಿದ್ದರು.

☯

# ಪ್ರೇಕ್ಷಕರ ಬೆಂಬಲ ಯಾವತ್ತೂ ರಾಯಲ್ ಚಿತ್ರಕ್ಕಿದೆ ದಿನಕರ್




ಜಯಣ್ಣ ಫಿಲಂಸ್ ಮೂಲಕ ಜಯಣ್ಣ ಭೋಗೇಂದ್ರ ಅವರು ನಿರ್ಮಾಣ ಮಾಡಿರವು ಹಾಗೂ ದರ್ಶನ್ ಸಹೋದರ ದಿನಕರ್ ತೂಗುದೀಪ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರ 'ರಾಯಲ್' ಈ ಚಿತ್ರ ಇದೇ ಶುಕ್ರವಾರ ರಾಜ್ಯಾದ್ಯಂತ ಬಿಡುಗಡೆಯಾಗಿದ್ದು ಪ್ರೇಕ್ಷಕರು ಹಾಗೂ ಪತ್ರಿಕಾ ವಿಮರ್ಶಕರಿಂದ ಉತ್ತಮ ಪ್ರತಿಕ್ರಿಯೆಯನ್ನು ಪಡೆದುಕೊಂಡಿದೆ. ಕಳೆದ ಕೆಲ ದಿನಗಳಿಂದ ನಿರ್ದೇಶಕ ದಿನಕರ್ ತೂಗುದೀಪ ಹಾಗೂ ಚಿತ್ರತಂಡ ಭರ್ಜರಿಯಾಗಿ ಚಿತ್ರದ ಪ್ರಚಾರವನ್ನು ಮಾಡಿತ್ತು.



ಬಹಳ ದಿನಗಳ ನಂತರ ದಿನಕರ್ ತೂಗುದೀಪ ನಿರ್ದೇಶನ ಮಾಡಿದ ಚಿತ್ರ ಅಲ್ಲದೆ ಜಯಣ್ಣ ಫಿಲಂಸ್ ನಿರ್ಮಾಣದ ಚಿತ್ರ ಎಂಬ ಕಾರಣಕ್ಕೆ ರಾಯಲ್ ಸಿನಿಮಾ ಮೇಲೆ ಗಾಂಽನಗರದಲ್ಲಿ ದೊಡ್ಡ ಮಟ್ಟದ ನಿರೀಕ್ಷೆಯೂ ಇತ್ತು. ಇದೀಗ ಅದೆಲ್ಲಕ್ಕೂ ಉತ್ತರವೆಂಬಂತೆ ತೆರೆಗೆ ಬಂದಿರುವ ರಾಯಲ್ ಸಿನಿಮಾಗೆ ಸಿಂಗಲ್ ಸ್ಕ್ರೀನ್ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಎಲ್ಲೆಡೆಯಿಂದ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ಆದರೂ, ಸಹ ಬುಕ್ ಮೈ ಶೋ ಆಪ್‌ನಲ್ಲಿ ಮಾತ್ರ ಚಿತ್ರಕ್ಕೆ ನೆಗೆಟಿವ್ ರಿವ್ಯೂ ಕೊಡುತ್ತಿದ್ದಾರೆ, ಇದು ನಿರ್ದೇಶಕ ದಿನಕರ್ ಅವರಿಗೆ ಬೇಸರ ತಂದಿದೆ. ಚಿತ್ರ ಚೆನ್ನಾಗಿದ್ರೂ ಬುಕ್ ಮೈ ಶೋನಲ್ಲಿ ನಮ್ಮ ಸಿನಿಮಾಗೆ ನೆಗೆಟಿವ್ ರಿವ್ಯೂ ಕೊಡುತ್ತಿದ್ದಾರೆ, ಎಂದು ನಿರ್ದೇಶಕ ದಿನಕರ್ ತೂಗುದೀಪ ಅವರು ತಮ್ಮ ಅಸಮಧಾನವನ್ನು ಹೊರಹಾಕಿದ್ದಾರೆ.

ಚಿತ್ರ ನೋಡಿದ ಪ್ರೇಕ್ಷಕರೆಲ್ಲರೂ ರಾಯಲ್ ಸಿನಿಮಾ ಬಗ್ಗೆ ಉತ್ತಮ ಅಭಿಪ್ರಾಯವನ್ನೇ ನೀಡಿದ್ದಾರೆ. ಇದು ಚಿತ್ರತಂಡಕ್ಕೆ ಸಂತಸ ತಂದಿದೆ. ಅಲ್ಲದೆ ನಾಯಕ ವಿರಾಟ್, ನಾಯಕಿ ಸಂಜನಾ ಆನಂದ್, ಖಳನಾಯಕ ರಘು ಮುಖರ್ಜಿ ಸೇರಿದಂತೆ ಇಡಿ ಚಿತ್ರತಂಡ ಬೆಂಗಳೂರಿನ ಥಿಯೇಟರ್‌ಗಳಿಗೆ ಭೇಟಿ ಕೊಟ್ಟು ಪ್ರೇಕ್ಷಕರ ಅಭಿಪ್ರಾಯ ಸಂಗ್ರಹಿಸುತ್ತಿದೆ, ಈ ಸಂದರ್ಭದಲ್ಲಿ ಮಾಧ್ಯಮದ ಜತೆ ಮಾತನಾಡಿದ ದಿನಕರ್ ತೂಗುದೀಪ, ದರ್ಶನ್ ಮೇಲಿನ ಕೋಪವನ್ನು ತನ್ನ ಮೇಲೆ ತೀರಿಸಿಕೊಳ್ಳುತ್ತಿದ್ದಾರೆ ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ, ನಿನ್ನೆಯಷ್ಟೇ ಬಿಡುಗಡೆಯಾದ ರಾಯಲ್ ಸಿನಿಮಾದ ಇಡೀ ಚಿತ್ರತಂಡ ಪ್ರೇಕ್ಷಕರ ಅಭಿಪ್ರಾಯ ತಿಳಿಯಲು ನಗರದ ಸಿಂಗಲ್ ಸ್ಕ್ರೀನ್ ಹಾಗೂ ಮಲ್ಟಿಪ್ಲೆಕ್ಸ್ ಥೇಟರ್‌ಗಳಿಗೆ ಭೇಟಿ ಕೊಟ್ಟಿತ್ತು. ಈ ವೇಳೆ ದಿನಕರ್ ತೂಗುದೀಪ ಮೀಡಿಯಾ ಹಾಗೂ ಪ್ರೇಕ್ಷಕರ ಮುಂದೆ ಮಾತನಾಡುತ್ತ ನೀವೆಲ್ಲ ನಮ್ಮ ಚಿತ್ರವನ್ನು ನೋಡಿ ಸೂಪರ್ ಆಗಿದೆ ಅಂತ ಹೇಳುತ್ತಿದ್ದೀರ. ಆದರೆ ಬುಕ್ ಮೈ ಶೋನಲ್ಲಿ ಸುಮ್‌ಸುಮ್ನೆ ನೆಗೆಟಿವ್ ರಿವ್ಯೂಗಳನ್ನು ಹಾಕುತ್ತಿದ್ದಾರೆ. ಬರೀ ಒಂದೊಂದು ಸ್ಟಾರ್‌ಗಳನ್ನು ಕೊಟ್ಟಿದ್ದಾರೆ. ಬೇಕು ಬೇಕು ಅಂತಾನೇ ತುಂಬಾ ಜನ ಇದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ನೀವುಗಳೆಲ್ಲ ನಮಗೆ ಸಪೋರ್ಟ್ ಮಾಡಿದರೆ, ಅವರದ್ದು ಏನೇ ಪ್ರಯತ್ನವಿದ್ದರೂ ಫಲಿಸುವುದಿಲ್ಲ, ನಮ್ಮನ್ನು ಗೆಲ್ಲಿಸುವ ಜವಾಬ್ದಾರಿ ನಿಮ್ಮದು. ನೀವು ಚಿತ್ರವನ್ನು ಖಂಡಿತ ಗೆಲ್ಲಿಸುತ್ತೀರ ಅನ್ನೋ ನಂಬಿಕೆ ನನಗಿದೆ. ನಮ್ಮ ಸೆಲೆಬ್ರಿಟಿಗಳು ನೀವು. ನೀವೆಲ್ಲ ಸೇರಿ ಚಿತ್ರವನ್ನು ಗೆಲ್ಲಿಸುತ್ತೀರ ಎಂಬ ನಂಬಿಕೆ ಇದೆ ಎಂದು ಪ್ರೇಕ್ಷಕರಲ್ಲಿ ದಿನಕರ್ ಮನವಿ ಮಾಡಿಕೊಂಡಿದ್ದಾರೆ. ಅದೇನೋ ಗೊತ್ತಿಲ್ಲ, ದರ್ಶನ್ ಮೇಲಿನ ಕೋಪವನ್ನು ನನ್ನ ಮೇಲೆ ತೀರಿಸಿಕೊಳ್ಳುತ್ತಿದ್ದಾರೆ ಅನಿಸುತ್ತಿದೆ. ನೀವುಗಳು ನಮಗೆ ಸಪೋರ್ಟ್ ಮಾಡಬೇಕು. ನಿಮ್ಮಗಳ ಸಪೋರ್ಟ್ ಇದ್ದರೆ ನಮಗೆ ಆನೆ ಬಲವಿದ್ದಂತೆ. ನಾವುಗಳು ಧೈರ್ಯವಾಗಿ ಮುಂದೆ ನಿಂತಿರುತ್ತೇವೆ. ಅವರು ಏನೇ ಪ್ರಯತ್ನಪಟ್ಟರೂ ನೀವು ನಮ್ಮ ಬೆಂಬಲಕ್ಕೆ ನಿಂತು ಚಿತ್ರವನ್ನು ಗೆಲ್ಲಿಸುತ್ತೀರ ಅಂತ ನಮಗೆ ಗೊತ್ತು. ಆ ನಂಬಿಕೆ ನಮಗಿದೆ ಎಂದಿದ್ದಾರೆ. ರಾಯಲ್ ಸಿನಿಮಾ ನೋಡಿದ ಬಳಿಕ ನಿಮಗೆ ಏನೇ ಅನಿಸಿದರೂ ಹೇಳಿ ಪರವಾಗಿಲ್ಲ, ಚೆನ್ನಾಗಿದೆ ಅಂತ ಅನಿಸಿದರೆ ಎಲ್ಲರಿಗೂ ಹೇಳಿ. ಥಿಯೇಟರಿಗೆ ಬಂದು ಸಿನಿಮಾವನ್ನು ನೋಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ರಿಲೀಸಾದ ದಿನವೇ ರಾಯಲ್ ಚಿತ್ರದ ಬಗ್ಗೆ ನೆಗೆಟಿವ್ ಕಾಮೆಂಟ್ ಹಾಗೂ ರಿವ್ಯೂ ಹಾಕಿದ್ದಕ್ಕೆ ಚಿತ್ರತಂಡವೂ ಬೇಸರ ಹೊರ ಹಾಕಿದೆ.




# ಕ್ಯಾನ್ಸರ್ ಗೆದ್ದ ಶಿವಣ್ಣ ಮರಳಿ ತಾಯ್ನಾಡಿಗೆ



ಅಮೆರಿಕಾದಲ್ಲಿ ಯಶಸ್ವಿಯಾಗಿ ಚಿಕಿತ್ಸೆ ಪಡೆದು ವಿಶ್ರಾಂತಿಯಲ್ಲಿದ್ದ ಶಿವಣ್ಣ ಭಾನುವಾರ ಬೆಳಿಗ್ಗೆ ತಾಯ್ನಾಡಿಗೆ ಮರಳಿ ಬಂದಿದ್ದಾರೆ. ಅಮೆರಿಕಾದಿಂದ ದುಬೈಗೆ ಬಂದಿಳಿದ ಶಿವಣ್ಣ ಅಲ್ಲಿಂದ ಕನೆಕ್ಟಡ್ ವಿಮಾನದಲ್ಲಿ ಬೆಂಗಳೂರಿಗೆ ಬಂದಿಳಿದಿದ್ದಾರೆ. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಶಿವಣ್ಣ ಅವರನ್ನು ಕನ್ನಡ ಚಿತ್ರರಂಗದ ಅನೇಕ ಗಣ್ಯರು ಸ್ವಾಗತಿಸಿದ್ದಾರೆ. ವಿಮಾನ ನಿಲ್ದಾಣದಲ್ಲಿ ಚಿತ್ರರಂಗದವರಿಂದ ಸಿಕ್ಕ ಪ್ರೀತಿ ಮತ್ತು ಅಭಿಮಾನಿಗಳ ಅಭಿಮಾನದ ಹರ್ಷೋದ್ಗಾರಕ್ಕೆ ಪುಳಕಿತಗೊಂಡ ಶಿವಣ್ಣ, ಅಭಿಮಾನಿಗಳತ್ತ ಕೈ ಬೀಸಿ ಮುಗುಳು ನಗೆಯೊಂದಿಗೆ ನಾಗವಾರದ ಮನೆಗೆ ಬಂದಿಳಿದು ಮಾಧ್ಯಮಗಳ ಜತೆ ಮಾತನಾಡಿದ್ದಾರೆ.

ಸದ್ಯ ಕನ್ನಡ ಚಿತ್ರರಂಗದ ಸಾರಥ್ಯ ವಹಿಸಿಕೊಂಡಿರುವ ನಟ ಶಿವರಾಜಕುಮಾರ್ ಅವರಿಗೆ 2 ತಿಂಗಳ ಹಿಂದೆ ಆರೋಗ್ಯ ಸಮಸ್ಯೆ ಎದುರಾದಾಗ ಅವರ ಅಭಿಮಾನಿಗಳು, ಕುಟುಂಬದವರು ತುಂಬಾ ಆತಂಕಕ್ಕೆ ಒಳಗಾಗಿದ್ದರು. ಆನಂತರ ಶಿವಣ್ಣ ಯುಎಸ್‌ನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿ ಯಶಸ್ವಿಯಾಗಿ ಚಿಕಿತ್ಸೆ ಮುಗಿಸಿಕೊಂಡು ಜ.26ರಂದು ತಾಯ್ನಾಡಿಗೆ ಹಿಂತಿರುಗಿದ್ದಾರೆ. ಅಮೆರಿಕದಲ್ಲಿ ಶಸ್ತ್ರಚಿಕಿತ್ಸೆ ಪಡೆದ ಬಳಿಕ ಸುಮಾರು ಒಂದು ತಿಂಗಳ ಕಾಲ ಅಲ್ಲೇ ವಿಶ್ರಾಂತಿ ಪಡೆದಿದ್ದ ಶಿವಣ್ಣ ಇದೀಗ ಬೆಂಗಳೂರಿಗೆ ವಾಪಸಾಗಿದ್ದಾರೆ. ತನ್ನ ಅನಾರೋಗ್ಯದ ಕಾರಣ ಶಿವಣ್ಣ ಕಳೆದ ಕೆಲ ತಿಂಗಳಿಂದ ದೈಹಿಕವಾಗಿ ಹಾಗೂ ಮಾನಸಿಕವಾಗಿ ಸಾಕಷ್ಟು ಸವಾಲುಗಳನ್ನು ಎದುರಿಸಿದ್ದರು. ಒತ್ತಡಕ್ಕೆ ಒಳಗಾಗಿದ್ದರು. ಅವರ ಅಭಿಮಾನಿಗಳು ಕೂಡ ಶಿವಣ್ಣ ಸಂಪೂರ್ಣವಾಗಿ ಗುಣಮುಖರಾಗಿ ಬರಬೇಕೆಂದು ದೇವರಲ್ಲಿ ಮೊರೆ ಹೋಗಿದ್ದರು. ಅವರೆಲ್ಲರ ಹರಕೆಯಂತೆ ಶಿವಣ್ಣನ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು ಕ್ಯಾನ್ಸರ್ ಫ್ರೀಯಾಗಿ ತಾಯ್ನಾಡಿಗೆ ಹಿಂತಿರುಗಿದ್ದಾರೆ. ಅವರು ಬೆಂಗಳೂರಿಗೆ ಹಿಂತಿರುಗುತ್ತಿದ್ದಂತೆ ಮಾಧ್ಯಮಗಳೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಚಿಕಿತ್ಸೆ ಹೇಗೆ ನಡೀತು? ಚಿಕಿತ್ಸೆಯ ಬಳಿಕ ಹೇಗೆ ರಿಕವರಿ ಆಯಿತು? ಪತ್ನಿ ಗೀತಾ ಹೇಗೆ ತನಗೆ ಬೆಂಬಲವಾಗಿ ನಿಂತಿದ್ದರು? ಅನ್ನೋದನ್ನು ಹೇಳಿಕೊಂಡಿದ್ದಾರೆ. ಇದೇ ವೇಳೆ ಶಿವರಾಜ ಕುಮಾರ್ ಅವರ ಕ್ಯಾನ್ಸರ್ ಫ್ರೀ ಜರ್ನಿಯನ್ನು ಗೀತಾ ಶಿವರಾಜಕುಮಾರ್ ಒಂದು ಡಾಕ್ಯುಮೆಂಟರಿ ಮಾಡುವುದಕ್ಕೆ ನಿರ್ಧರಿಸಿದ್ದಾರೆ.

ಅಮೆರಿಕದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದ ಬಳಿಕ ಶಿವಣ್ಣ ಎರಡೇ ದಿನಕ್ಕೆ ಎದ್ದು ಓಡಾಡುವುದಕ್ಕೆ ಶುರು ಮಾಡಿದ್ದರು. ಅಲ್ಲಿಂದ ಅವರ ದಿನಚರಿ ಹೇಗಿತ್ತು ಅನ್ನೋದನ್ನು ಮಾಧ್ಯಮಗಳ ಮುಂದೆ ಅವರೇ ಹಂಚಿಕೊಂಡಿದ್ದಾರೆ. ಹೊರಡುವಾಗ ಸ್ವಲ್ಪ ಎಮೋಷನಲ್ ಆಗಿದ್ದೆ. ಅಲ್ಲಿ ಆಪರೇಶನ್ ಆದ ನಂತರ ಎರಡನೇ ದಿನಕ್ಕೆ ಸಪೋರ್ಟ್ ಹಿಡಿದುಕೊಂಡು ಎದ್ದು ಓಡಾಡುವುದಕ್ಕೆ ಶುರು ಮಾಡಿದೆ. ಯಾಕಂದ್ರೆ ಆರಂಭದಲ್ಲಿಯೇ ಹೆಚ್ಚು ಪೋರ್ಸ್ ಮಾಡುವುದಕ್ಕೆ ಆಗಲಿಲ್ಲ, ಮೂರನೇ ದಿನದಿಂದ ಏನೂ ಸಪೋರ್ಟ್ ಇಲ್ಲದೆ ಸ್ವತ: ನಾನೇ ವಾಕಿಂಗ್ ಮಾಡುವುದಕ್ಕೆ ಶುರು ಮಾಡಿದೆ. ಆಪರೇಶನ್ ನಂತರ ನಾಲ್ಕೈದು ದಿನ ಮಾತ್ರವೇ ಲಿಕ್ವಿಡ್ ಆಹಾರ ತೆಗೆದುಕೊಂಡೆ. ನಂತರದ ದಿನಗಳಲ್ಲಿ ಅನ್ನ ರಸಂ ತಿನ್ನುವುದಕ್ಕೆ ಶುರು ಮಾಡಿದೆ ಎಂದು ಶಿವಣ್ಣ ಮಾಹಿತಿ ಹಂಚಿಕೊಂಡಿದ್ದಾರೆ.

ಅಮೆರಿಕದಲ್ಲೂ ಸಹ ಶಿವರಾಜಕುಮಾರ್ ಅವರು ತಮ್ಮ ವಾಕಿಂಗ್ ದಿನಚರಿಯನ್ನು ನಿಲ್ಲಿಸಿರಲಿಲ್ಲ. ಅಲ್ಲೂ ಪ್ರತಿದಿನ ಲಿಮಿಟೆಡ್ ವಾಕಿಂಗ್ ಮಾಡುತ್ತಿದ್ದರು. ದಿನ ಒಂದು ರೌಂಡ್ ವಾಕ್ ಮಾಡುತ್ತಿದ್ದೆ. ಆಮೇಲೆ ಅಲ್ಲೇ ದಾರಿಯಲ್ಲಿ ಒಂದು ಸ್ಟಾರ್ ಬಕ್ಸ್ ಇತ್ತು. ಅಲ್ಲಿ ಹೋಗಿ ಒಂದು ಲೋಟ ಕಾಫಿ ಕುಡಿದು ಆನಂತರ ವಾಪಾಸ್ ಬರುತ್ತಿದ್ದೆ. ಬರುವಷ್ಟರಲ್ಲಿ ಗೀತಾ ಅಡುಗೆ ಶುರು ಮಾಡಿರುತ್ತಿದ್ದರು. ಆ ಘಮ ಸಂಜೆವರೆಗೂ ಹಾಗೆ ಇರುತ್ತಿತ್ತು ಎಂದು ಹೇಳಿಕೊಂಡಿದ್ದಾರೆ. ಇದೇ ವೇಳೆ ಶಿವಣ್ಣ ಎಲ್ಲರಿಗೂ ಸ್ಫೂರ್ತಿಯಾಗಬೇಕು ಅಂತ ಅಲ್ಲಿನ ವೈದ್ಯರು ಸಲಹೆ ನೀಡಿದ್ದರು. ಈ ಕಾರಣಕ್ಕೆ ಗೀತಾ ಶಿವರಾಜಕುಮಾರ್ ಅವರು ಶಿವಣ್ಣ ಅವರ ಈ ಜರ್ನಿಯನ್ನು ಒಂದು ಡಾಕ್ಯೂಮೆಂಟರಿ ಮಾಡುವುದಕ್ಕೆ ನಿರ್ಧರಿಸಿದ್ದಾರೆ. ಅಲ್ಲದೆ ಅವರೇ ಶಿವಣ್ಣ ಹಾಗೂ ವೈದ್ಯರ ನಡುವೆ ನಡೆದ ಸಂದರ್ಶನವನ್ನು ಶೂಟ್ ಮಾಡಿಟ್ಟುಕೊಂಡಿದ್ದಾರೆ. ವೈದ್ಯರು ಇವರ ಧೈರ್ಯವನ್ನು ನೋಡಿ ಖುಷಿ ಪಟ್ಟಿದ್ದರು. ಎಲ್ಲರಿಗೂ ಶಿವಣ್ಣ ಅವರ ಮಾದರಿ ಆಗಬೇಕು ಅಂತ ವೈದ್ಯರು ಹೇಳಿದ್ದರು. ಅದಕ್ಕೆ ಆ ಎಲ್ಲಾ ಕ್ಷಣಗಳನ್ನು ನಾನೇ ಶೂಟಿಂಗ್ ಮಾಡಿದ್ದೇನೆ. ಅದನ್ನು ಡಾಕ್ಯೂಮೆಂಟರಿ ಮೂಲಕ ಜನರಿಗೆ ಹೇಳಬೇಕು ಅಂತ ಇದ್ದೀನಿ. ನಿಮ್ಮಂತೆಯೇ ಇಂಟರ್‌ವ್ಯೂ ಮಾಡಿದ್ದೀನಿ, ಇವರಿಗೆ ಚಿಕಿತ್ಸೆ ಕೊಟ್ಟ ವೈದ್ಯರನ್ನು ಮಾತಾಡಿಸಿದ್ದೇನೆ. ಅದನ್ನು ಯಾರಿಗೆ ಕೊಡಬೇಕು? ಹೇಗೆ ಬರುತ್ತೆ ಅಂತ ನೋಡಬೇಕು ಎಂದು ಗೀತಾ ಶಿವರಾಜಕುಮಾರ್ ಅವರು ಹೇಳಿದ್ದಾರೆ. ಕೆಲ ದಿನಗಳು ವಿಶ್ರಾಂತಿ ನಂತರ ಶಿವಣ್ಣ ಮತ್ತೆ ಶೂಟಿಂಗ್‌ಗೆ ಮರಳಲಿದ್ದಾರೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 26.1.2025


# ಬಿಗ್‌ಬಾಸ್ ಕನ್ನಡ ಸೀಸನ್ 11ರ ವಿಜೇತ ಉತ್ತರ ಕರ್ನಾಟಕದ ಹುಲಿ ಹನುಮಂತ



ಬಿಗ್‌ಬಾಸ್ ಕನ್ನಡ ಸೀಸನ್ 11ರಲ್ಲಿ ಗಾಯಕ ಹನುಮಂತ ಲಮಾಣಿ ಅವರು ವಿಜೇತರಾಗಿದ್ದಾರೆ. ಇದರೊಂದಿಗೆ ಕರ್ನಾಟಕದ ಕೋಟಿ ಕೋಟಿ ಜನರ ಆಸೆ ಈಡೇರಿದೆ. 52389318 ಮತಗಳನ್ನು ಪಡೆದು ಹನುಮಂತ ಗೆದ್ದು ಬೀಗಿದ್ದಾರೆ. ಕುರಿಗಾಯಿ ಹನುಮಂತ ಗೆಲ್ಲಬೇಕು ಎನ್ನುವುದು ಕನ್ನಡಿಗರ ಮನದಾಳದ ಮಾತಾಗಿತ್ತು. ಕೊನೆಗೂ ಹನುಮಂತನಿಗೆ ಜಯ ಸಿಕ್ಕಿದೆ.

ಹೌದು... ಕಿಚ್ಚ ಸುದೀಪ್ ಅವರು ಹನುಮಂತ ಈ ಬಾರಿ ವಿಜೇತ ಎಂದು ವೇದಿಕೆ ಮೇಲೆ ಘೋಷಣೆ ಮಾಡಿದರು. ಈ ಫಲಿತಾಂಶ ಎಲ್ಲರ ನಿರೀಕ್ಷೆಯ ಫಲಿತಾಂಶವಾಗಿದೆ. ಇನ್ನೂ ತ್ರಿವಿಕ್ರಮ್ ಅವರು ಬಿಗ್ ಬಾಸ್ ಕನ್ನಡ ಸೀಸನ್ 11ರ ರನ್ನರ್ ಅಪ್ ಆಗಿದ್ದಾರೆ. ತ್ರಿವಿಕ್ರಮ್ ಹಾಗೂ ಹನುಮಂತನ ಕೈ ಹಿಡಿದ ಕಿಚ್ಚಾ ಸುದೀಪ್ ಅವರು ಕೊನೆಯ ಕ್ಷಣದಲ್ಲಿ ಹನುಮಂತನ ಕೈ ಮೇಲೆತ್ತುವ ಮೂಲಕ ಹನುಮಂತನಿಗೆ ಅಭಿನಂದನೆ ತಿಳಿಸಿದ್ದಾರೆ. ಹನುಮಂತನ ಕೈಗೆ ಟ್ರೋಫಿ ನೀಡಿದ್ದಾರೆ.

ಹನುಮಂತ ವಿಜೇತರಾಗುತ್ತಿದ್ದಂತೆ ಬಾನಂಗಳದಲ್ಲಿ ಪಟಾಕಿ ಸದ್ದು ಕೇಳಿ ಬಂದಿದೆ. ಅಲ್ಲದೆ ಈ ಕಾರ್ಯಕ್ರಮವನ್ನು ವೀಕ್ಷಿಸಿದ




ಪ್ರೋಷಕರ ಕಂಗಳಲ್ಲಿ ಆನಂದಭಾಷ್ಪ ಹರಿದಿದೆ. ಈ ವೇಳೆ ವೇದಿಕೆ ಮೇಲೆ ಮಾತನಾಡಿದ ಹನುಮಂತ ಲಮಾಣಿ ಅವರು, 'ಬಿಗ್‌ಬಾಸ್ ಮನೆಯಲ್ಲಿ ನನ್ನನ್ನು ಇಲ್ಲಿವರೆಗೆ ಕಾಪಾಡಿಕೊಂಡು ಬಂದ ಪ್ರತಿಯೊಬ್ಬರಿಗೂ ನನ್ನ ಧನ್ಯವಾದಗಳು. ನನಗೆ ಮತ ಹಾಕಿದವರಿಗೆಲ್ಲಾ ತುಂಬು ಹೃದಯದಿಂದ ಧನ್ಯವಾದಗಳನ್ನು ತಿಳಿಸುತ್ತೇನೆ' ಎಂದರು. 'ಬಿಗ್ ಬಾಸ್ ಮನೆ ಹೇಗಿರುತ್ತೆ? ಇಲ್ಲಿ ಇರೋದು ಹೇಗೆ? ಆಡೋದು ಹೇಗೆ ಎಂದು ಭಯ ಆಗಿತ್ತು. ನಾನು ಮೂರು ದಿನ ಬಿಗ್‌ಬಾಸ್ ಮನೆಯಲ್ಲಿ ಉಳಿಯೋದು ಕಷ್ಟ ಎಂದು ಅನಿಸಿತ್ತು. ಹೀಗಿರುವಾಗ ನನ್ನನ್ನು ಹತ್ತತ್ರ ನೂರು ದಿನ ಈ ಮನೆಯಲ್ಲಿ ಕಾಪಾಡಿದಿರಿ. ನನಗೆ ಮತ ನೀಡಿದ ಪ್ರತಿಯೊಬ್ಬರಿಗೂ ತುಂಬು ಹೃದಯದಿಂದ ಧನ್ಯವಾದಗಳು' ಎಂದು ಹನುಮಂತ ಮನದಾಳದ ಮಾತುಗಳನ್ನು ಹೇಳಿದ್ದಾರೆ.

ಇನ್ನೂ ಹನುಮಂತ ವಿನ್ ಆಗಿದ್ದು ಕನ್ನಡಿಗರಿಗೆ ಖುಷಿ ತಂದಿದೆ. ಬಿಗ್‌ಬಾಸ್ ಮನೆಯಲ್ಲಿ ಹನುಮಂತ ವಿಜೇತ ಎಂದು ಘೋಷಣೆ ಮಾಡುತ್ತಿದ್ದಂತೆ ಸೋಶಿಯಲ್ ಮೀಡಿಯಾದಲ್ಲಿ ಹನುಮಂತನಿಗೆ ಅಭಿನಂದನೆಗಳನ್ನು ತಿಳಿಸಲು ಜನ ಶುರು ಮಾಡಿದ್ದಾರೆ. ಹನುಮಂತನಿಗೆ ಶುಭಾಶಯಗಳ ಮಹಾಪೂರವೇ ಹರಿದು ಬರುತ್ತಿದೆ.

ಬಿಗ್‌ಬಾಸ್ ಇತಿಹಾಸದಲ್ಲಿ ಒಬ್ಬ ವೈಲ್ಡ್ ಕಾರ್ಡ್ ಸ್ಪರ್ಧಿ ವಿಜೇತರಾಗಿದ್ದು ಇದೇ ಮೊದಲು. ಹನುಮಂತ ಬಿಗ್‌ಬಾಸ್ ಮನೆಗೆ ವೈಲ್ಡ್ ಕಾರ್ಡ್ ಆಗಿ ಎಂಟ್ರಿ ಕೊಟ್ಟ ಸ್ಪರ್ಧಿ. ಅವರು ವೇದಿಕೆಗೆ ಬರಲಿಲ್ಲ, ಕಿಚ್ಚ ಸುದೀಪ್ ಅವರೊಂದಿಗೆ ನೇರವಾಗಿ ಮಾತನಾಡಲಿಲ್ಲ, ನೇರವಾಗಿ ಮನೆಗೆ ಹೋಗಿದ್ದ ಹನುಮಂತ ಕಿಚ್ಚ ಸುದೀಪ್ ಅವರನ್ನು ಹತ್ತಿರದಿಂದ ನೋಡುತ್ತಿರುವುದು ಇದೇ ಮೊದಲು. ಹೀಗಾಗಿ ಕಿಚ್ಚ ಸುದೀಪ್ ಅವರು ಪ್ರೀತಿಯ ಅಪ್ಪುಗೆಯಿಂದ ಹನುಮಂತನನ್ನು ಸ್ವಾಗತಿಸಿ ಟ್ರೋಫಿ ನೀಡಿ ಶುಭ ಕೋರಿದ್ದಾರೆ. ಇದರಿಂದ ಹನುಮಂತ ತುಂಬಾ ಖುಷಿ ಪಟ್ಟಿದ್ದಾರೆ. ಇದು ನಿಜವಾಗಲು ಸರಳ ಸಜ್ಜನ ಬಡ ಮಕ್ಕಳಿಗೆ ಆದ ಜಯ. ಕರ್ನಾಟಕದಲ್ಲಿ ಬಡ ಮಕ್ಕಳನ್ನು ಗೌರವಿಸುವ ಒಳ್ಳೆತನವನ್ನು ಬೆಂಬಲಿಸುವ ಜನ ಇನ್ನೂ ಇದ್ದಾರೆ ಅನ್ನೋದಕ್ಕೆ ಹಿಡಿದ ಕೈಗನ್ನಡಿಯಾಗಿದೆ.

# ತಂದೆ ಮಗಳ ಕಥೆಯಲ್ಲಿ ವಿಜಿ ಲ್ಯಾಂಡ್ ಲಾರ್ಡ್

ಹದಿಮೂರು ವರ್ಷಗಳ ಹಿಂದೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿನಯದ ಸಾರಥಿ ಚಿತ್ರವನ್ನು ನಿರ್ಮಿಸಿದ್ದ ಕೆ.ವಿ. ಸತ್ಯಪ್ರಕಾಶ್ ಅವರು ದಶಕದ ಲಾಂಗ್ ಗ್ಯಾಪ್ ನಂತರ ತಮ್ಮ ಸಾರಥಿ ಫಿಲಂಸ್ ಮೂಲಕ ನೂತನ ಚಿತ್ರ ನಿರ್ಮಾಣಕ್ಕೆ ಕೈ



ಹಾಕಿದ್ದಾರೆ. ವಿಜಯ್‌ಕುಮಾರ್(ದುನಿಯಾ ವಿಜಯ್) ನಾಯಕನಾಗಿ ನಟಿಸುತ್ತಿರುವ ಈ ಚಿತ್ರದ ಹೆಸರು ಲ್ಯಾಂಡ್ ಲಾರ್ಡ್. ವಿಶೇಷವಾಗಿ ಸತ್ಯಪ್ರಕಾಶ್ ಅವರ ಪುತ್ರ ಸೂರಜ್‌ಗೌಡ ಅವರೂ ಸಹ ಚಿತ್ರದ ನಿರ್ಮಾಣದಲ್ಲಿ ಸಾಥ್ ನೀಡುತ್ತಿದ್ದಾರೆ. ಕಾಟೇರ ಚಿತ್ರದ ಕಥಾಲೇಖಕ ಜಡೇಶ್ ಕೆ. ಹಂಪಿ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಬೆಡಗಿ ರಚಿತಾರಾಮ್ ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದು, ದುನಿಯಾ ವಿಜಯ್ ಅವರ ಪುತ್ರಿ ರಿತನ್ಯ(ಮೋನಿಕಾ) ಚಿತ್ರದಲ್ಲೂ ಸಹ ಅವರ ಮಗಳಾಗಿಯೇ ನಟಿಸುವ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿದ್ದಾರೆ. ಡೇರ್ ಡೆವಿಲ್ ಮುಸ್ತಫಾ ಖ್ಯಾತಿಯ ಶಿಶಿರ್ ಕೂಡ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ವಿಜಯ್ ಕುಮಾರ್ (ದುನಿಯಾ ವಿಜಯ್) ಅವರ ಹುಟ್ಟುಹಬ್ಬ, ಈ ಸಲ ಅವರು ತಮ್ಮ ಹುಟ್ಟು ಹಬ್ಬವನ್ನು ಲ್ಯಾಂಡ್ ಲಾರ್ಡ್ ಚಿತ್ರದ ಶೂಟಿಂಗ್ ಲೊಕೇಶನ್ ನಲ್ಲೇ ಚಿತ್ರತಂಡ ಹಾಗೂ ಮಾಧ್ಯಮ ಮಿತ್ರರ ಜತೆ ಕೇಕ್ ಕಟ್ ಮಾಡುವ ಮೂಲಕ ಆಚರಿಸಿಕೊಂಡರು. ಸದ್ಯ ಲ್ಯಾಂಡ್ ಲಾರ್ಡ್ ಚಿತ್ರದ ಚಿತ್ರೀಕರಣ ನೆಲಮಂಗಲ ಸಮೀಪದ ಬರದಿ ಬೆಟ್ಟದ ಕೆಳಗೆ ನಡೆಯುತ್ತಿದೆ. ಚಿತ್ರದ ಶೂಟಿಂಗ್ ವೀಕ್ಷಣೆಗೆಂದು ಆಗಮಿಸಿದ ಪತ್ರಕರ್ತರ ಜತೆ ಚಿತ್ರತಂಡ ಸಿನಿಮಾ ಕುರಿತು ಒಂದಷ್ಟು ಮಾಹಿತಿಗಳನ್ನು ಹಂಚಿಕೊಂಡಿತು.

ನಿರ್ದೇಶಕ ಜಡೇಶ್ ಕೆ. ಹಂಪಿ ಮಾತನಾಡುತ್ತ ನಮ್ಮ ಚಿತ್ರಕ್ಕೆ ಅಧಿಕೃತವಾಗಿ ಲ್ಯಾಂಡ್‌ಲಾರ್ಡ್ ಟೈಟಲ್‌ನ್ನು ಅನೌನ್ಸ್ ಮಾಡಿದ್ದೇವೆ, ವಿಲೇಜ್ ಬ್ಯಾಕ್‌ಡ್ರಾಪ್‌ನಲ್ಲಿ ನಡೆವ ಕಥೆ, ನಾನು ಕಂಡು, ಕೇಳಿದ ಹಾಗೂ ನೋಡಿದ ನೈಜ ಘಟನೆಗಳನ್ನು ಇಟ್ಟುಕೊಂಡು ಮಾಡಿದ ಕಾನ್ಸೆಪ್ಟ್. 80-90ರ ಕಾಲಘಟ್ಟದಲ್ಲಿ ಕೋಲಾರ ಭಾಗದ ಗ್ರಾಮದಲ್ಲಿ ನಡೆಯುವ ಕಥಾಹಂದರ. ಚಿತ್ರದಲ್ಲಿ ಮಾಸ್ತಿ ಹಾಗೂ ಶ್ರೀಕಾಂತ್ ಸೇರಿ ಅದೇ ಸ್ಲಾಂಗ್‌ನಲ್ಲಿ ಹರಿತವಾದ ಡೈಲಾಗ್‌ಗಳನ್ನು ಬರೆದಿದ್ದಾರೆ, ವಿಜಯ್ ಅವರಿಗೆ ಈ ಕಥೆಯನ್ನು ಹೇಳಿದಾಗ ಅವರು ತುಂಬಾ ಇಷ್ಟಪಟ್ಟರು, ನಂತರ ಮಗಳ ಪಾತ್ರವನ್ನು ರಿತನ್ಯ ಮಾಡಿದರೆ ಚೆನ್ನಾಗಿರತ್ತೆ ಎಂದು ಹೇಳಿದೆ, ಇಬ್ಬರೂ ಒಪ್ಪಿದರು, ರಿತನ್ಯ ಮುಂಬೈಗೆ ಹೋಗಿ ಆಕ್ಟಿಂಗ್ ಕಲಿತು ಬಂದು ಆ್ಯಕ್ಟ್ ಮಾಡಿದ್ದಾರೆ. ಕೆ.ವಿ. ಸತ್ಯಪ್ರಕಾಶ್ ಅವರು ನನಗೆ ಸಿಕ್ಕ ಬೆಸ್ಟ್ ಪ್ರೊಡ್ಯೂಸರ್, ಯಾಕೆ, ಏನು ಅಂತ ಕೇಳಲ್ಲ, ಸಾರಥಿ ನಂತರ ಹತ್ತು ವರ್ಷದಲ್ಲಿ ನಾನು ಹಲವಾರು ಕಥೆಗಳನ್ನು ಕೇಳಿದ್ದೆ ಯಾವುದೂ ಇಷ್ಟವಾಗಲಿಲ್ಲ, ನಿಮ್ಮ ಕಥೆ ಲೈಕ್ ಆಯ್ತು ಎಂದಿದ್ದರು, ಖಂಡಿತ ಅವರ ನಂಬಿಕೆ ಉಳಿಸಿಕೊಳ್ಳುತ್ತೇನೆ, ಇಂದು ಚಿತ್ರದ ಕೆಲವು ಆಕ್ಷನ್ ಸೀನ್ ಚಿತ್ರೀಕರಿಸುತ್ತಿದ್ದೇವೆ. ಈಗಾಗಲೇ ಶೇ.60ರಷ್ಟು ಭಾಗದ ಚಿತ್ರೀಕರಣ ಮುಗಿದಿದೆ. ಈಗಾಗಲೇ ತಾವರಕೆರೆ ಬಳಿ ಹಳ್ಳಿಯ ಸೆಟ್ ಹಾಕಿ ಶೂಟಿಂಗ್ ಮಾಡಿದ್ದೇವೆ ಎಂದು ವಿವರಿಸಿದರು, ಲ್ಯಾಂಡ್ ಲಾರ್ಡ್ ಚಿತ್ರದ ವಿಶೇಷವೆಂದರೆ ತಂದೆ-ಮಗನ ನಿರ್ಮಾಣದ ಈ ಚಿತ್ರದಲ್ಲಿ, ರಿಯಲ್ ತಂದೆ - ಮಗಳು ತಂದೆ - ಮಗಳಾಗೇ ಅಭಿನಯಿಸುತ್ತಿದ್ದಾರೆ.



ನಿರ್ಮಾಪಕರ ಪುತ್ರ ಸೂರಜ್ ಗೌಡ ಮಾತನಾಡುತ್ತ ಈವರೆಗೆ ಲ್ಯಾಂಡ್ ಲಾರ್ಡ್ ಚಿತ್ರ ನಡೆದು ಬಂದ ಹಾದಿಯನ್ನು ಸವಿವರವಾಗಿ ವಿವರಿಸಿದರು, ನಂತರ ಮಾತನಾಡಿದ ನಿರ್ಮಾಪಕ ಸತ್ಯಪ್ರಕಾಶ್, ನಾನು ಆಕಸ್ಮಿಕವಾಗಿ ಚಿತ್ರರಂಗಕ್ಕೆ ಬಂದೆ. ಅದೇನು ಅದೃಷ್ಟವೋ ಗೊತ್ತಿಲ್ಲ, ಮೊದಲ ಚಿತ್ರವೇ ದೊಡ್ಡ ಗೆಲುವು ತಂದು ಕೊಟ್ಟಿತು, ಆನಂತರ ಹಲವಾರು ಕಥೆಗಳನ್ನು ಕೇಳಿದ್ದೆ, ಆಗಿರಲಿಲ್ಲ, ಜಡೇಶ್ ಅವರು ಹೇಳಿದ ಕಥೆ ತುಂಬಾ ಇಷ್ಟವಾಯಿತು. ನನ್ನ ಮಗ ಸೂರಜ್ ಗೌಡ ಚಿತ್ರದ ಎಲ್ಲ ಜವಾಬ್ದಾರಿ ಹೊತ್ತಿದ್ದಾರೆ ಎಂದು ಹೇಳಿದರು.

ನಾಯಕ ದುನಿಯಾ ವಿಜಯ್ ಮಾತನಾಡುತ್ತ ಆಗಿನ ಕಾಲದಲ್ಲಿ ಕರೆಂಟ್ ಇರಲಿಲ್ಲ, ದೀಪದ ಬೆಳಕಲ್ಲೇ ಬದುಕು ಸಾಗಿಸುತ್ತಿದ್ದ ಕಾಲವದು, ಒಬ್ಬ ಬಡವನ ಮನೆಯ ಕಥೆ. ಆಗ ಕಾಸಿನ ವ್ಯವಹಾರ ಜಾಸ್ತಿ ಇರುತ್ತಿರಲಿಲ್ಲ, ಧಾನ್ಯ ಕೊಟ್ಟು ತರಕಾರಿ ಪಡೆಯುತ್ತಿದ್ದೆವು, ಚಿತ್ರದಲ್ಲಿ ರಿತು ನನ್ನ ಮಗಳ ಪಾತ್ರದಲ್ಲೇ ಅಭಿನಯಿಸುತ್ತಿದ್ದಾಳೆ. ಒಳ್ಳೇ ಕಥೆ ಮಾಡಿದಾಗ ನಾವು ಸಾಥ್ ಕೊಡಲೇಬೇಕು. ಇದು ಆಳಿದವರ ಕಥೆಯಲ್ಲ, ಅಳಿದು ಉಳಿದವರ ಕಥೆ. ನಿರ್ದೇಶಕ ಜಡೇಶ್ ಹಂಪಿ ಒಳ್ಳೆಯ ಕಥೆ ಮಾಡಿಕೊಂಡಿದ್ದಾರೆ. ಅವರು ಕನ್ನಡ ಚಿತ್ರರಂಗದ ಅತ್ಯುತ್ತಮ ನಿರ್ದೇಶಕರಾಗುತ್ತಾರೆ, ಬಹಳ ವರ್ಷಗಳ ನಂತರ ಸತ್ಯಪ್ರಕಾಶ್ ಅವರು ನಿರ್ಮಾಣಕ್ಕೆ ಮರಳಿದ್ದಾರೆ ಎಂದರು. ನಂತರ ಮೊದಲ ಬಾರಿಗೆ ಕ್ಯಾಮೆರಾ ಮುಂದೆ ಬರುತ್ತಿರುವ ರಿತನ್ಯ ಮಾತನಾಡುತ್ತ ನನ್ನ ಮೊದಲ ಚಿತ್ರದಲ್ಲಿ ಅಪ್ಪನ ಜೊತೆಗೆ ನಟಿಸುತ್ತಿರುವುದಕ್ಕೆ ತುಂಬಾ ಖುಷಿಯಾಗುತ್ತಿದೆ. ಅಭಿನಯಕ್ಕೆ ಹೆಚ್ಚು ಅವಕಾಶವಿರುವ ಪಾತ್ರ ಎಂದು ಹೇಳಿದರು. ಛಾಯಾಗ್ರಾಹಕ ಸ್ವಾಮಿ ಜೆ. ಗೌಡ, ನಿರ್ಮಾಣ ನಿರ್ವಾಹಕ ನರಸಿಂಹ ಜಾಲಹಳ್ಳಿ ಚಿತ್ರದ ಕುರಿತಂತೆ ಮಾತನಾಡಿದರು. ☯

Vol. 40 No. 34 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 📱 9513892666
Email: policenewsreporter@gmail.com